
ಕಲ್ಯಾಣ ಕಿರಣ

ಏಪ್ರಿಲ್ 2003 ಬೆಲೆ ರೂ. 5-00




ಧರ್ಮಪಿತ ಬಸವಣ್ಣನವರು

ಸೂಚನೆ : ಬಸವ ಕಲ್ಯಾಣದ S.T.D ಕೋಡ್ ಬದಲಾವಣೆ ಆಗಿದೆ. ಈಗಿನ ನಂಬರ್ 08481 , ಫೋನ್ ನಂ. 651921/652856



ಬಸವೇಶ್ವರ ಐಕ್ಯ ಮಂಟಪದಿಂದ ಬಸವ ಜ್ಯೋತಿ ಯಾತ್ರೆ ಪ್ರಾರಂಭ. ದಿ. 3-4-2003 ರಂದು ; ಪೂಜ್ಯ ಶ್ರೀ ಮಾತೆ ಅಕ್ಕಮಹಾದೇವಿ, ಪೂಜ್ಯ ಶ್ರೀ ಬಸವ ಕುಮಾರ ಸ್ವಾಮಿಗಳು ಮತ್ತು ಪೂಜ್ಯ ಶ್ರೀ ಚನ್ನಬಸವಾನಂದ ಸ್ವಾಮಿಗಳು ಚಿತ್ರದಲ್ಲಿದ್ದಾರೆ.



ಬಸವ ಜ್ಯೋತಿಯ ನೇತೃತ್ವ ವಹಿಸಿರುವ ಪೂಜ್ಯ ಶ್ರೀ ಚನ್ನಬಸವಾನಂದ ಸ್ವಾಮಿಗಳು ಮತ್ತು ಪೂಜ್ಯ ಶ್ರೀ ಬಸವ ಕುಮಾರ ಸ್ವಾಮಿಗಳು.

|| ಓಂ ಶ್ರೀ ಗುರುಬಸವಲಿಂಗಾಯ ನಮಃ ||

866666



ಧರ್ಮಗುರು ಬಸವಣ್ಣ



ಗಣ ಧ್ವಜ

ಕಾಯಕವೇ ಕೈಲಾಸವೆಂದು ಸಾರಿದ
ಬೀದರ್ ಜಿಲ್ಲೆಯ ಬಸವ ಕಲ್ಯಾಣ ಸುಕ್ಷೇತ್ರದಲ್ಲಿ
ವಿಶ್ವ ಕಾಯಕ ದಿನದ ಅಂಗವಾಗಿ ಎರಡನೆಯ

ಕಲ್ಯಾಣ ಪರ್ವ

ಏಪ್ರಿಲ್ 30, ಮೇ 1 ಮತ್ತು 2 ರಂದು

ಶರಣ ಬಂಧುಗಳೇ,

ಮಹಾಮಾನವತಾವಾದಿ ಲಿಂಗಾಯತ ಧರ್ಮ ಸಂಸ್ಥಾಪಕ, ಧರ್ಮಗುರು ಬಸವಣ್ಣನವರ ಕಾರಣಿಕತ್ವ ಮತ್ತು ಸಂದೇಶಗಳಲ್ಲಿ ನಂಬಿಕೆ ಇಟ್ಟು ನಡೆಯುವ ಬಸವ ಭಕ್ತರು, ಬಸವ ಧರ್ಮೀಯರಾದ ಲಿಂಗಾಯತರು ಮತ್ತು ಬಸವ ತತ್ತ್ವಾಭಿಮಾನಿಗಳೆಲ್ಲರೂ ವರ್ಷಕ್ಕೆ ಒಮ್ಮೆಯಾದರೂ ಒಂದು ಸ್ಥಳದಲ್ಲಿ ಸಮಾವೇಶವಾಗುವುದು ಅತ್ಯಂತ ಅವಶ್ಯಕ. ಇದು ಸಮಾನತ್ವ ಮತ್ತು ಸಹೋದರತ್ವ ಬೆಳೆಸಲು ಸಹಕಾರಿಯಾಗುವುದು ಎಂಬ ಉದ್ದೇಶದಿಂದ ಆದಿ ಶರಣರ ಸಂಕಲ್ಪದಂತೆ ಧರ್ಮಕರ್ತ ಬಸವಣ್ಣನವರ ವಿದ್ಯಾಭೂಮಿ, ತಪೋಸ್ಥಾನ, ಐಕ್ಯಕ್ಷೇತ್ರ ಕೂಡಲ ಸಂಗಮವನ್ನು ಬಸವ (ಲಿಂಗಾಯತ) ಧರ್ಮೀಯರ ಧರ್ಮಕ್ಷೇತ್ರ ಎಂದು ಗುರುತಿಸಿಕೊಂಡು ಪ್ರತಿವರ್ಷ ಜನವರಿ 11ರಿಂದ 15ರವರೆಗೆ ಶರಣ ಮೇಳ ಎಂಬ ಧಾರ್ಮಿಕ ಸಮಾವೇಶವನ್ನು 1988ರಿಂದ ನಡೆಸಿಕೊಂಡು ಬರಲಾಗುತ್ತಿದೆ.

ಅದೇ ರೀತಿ ಶರಣ ಭೂಮಿ ಬಸವ ಕಲ್ಯಾಣದಲ್ಲಿ ಕಲ್ಯಾಣ ಪರ್ವ ಎಂಬ ಧಾರ್ಮಿಕ ಸಮಾವೇಶವನ್ನು ಪ್ರತಿವರ್ಷದ ಮೇ 1, 2 ಮತ್ತು 3 ರಂದು ನಡೆಸಲು ಸಂಕಲ್ಪಿಸಲಾಗಿದೆ. ವರ್ಣಾಂತರ ವಿವಾಹವನ್ನು ಪ್ರೋತ್ಸಾಹಿಸಿದ್ದಕ್ಕಾಗಿ ತಪ್ಪಾದ ಸಂಪ್ರದಾಯವಾದಿಗಳಿಂದಾಗಿ ಧರ್ಮಪಿತ ಬಸವಣ್ಣನವರು ಗಡಿಪಾರು ಶಿಕ್ಷೆ ಅನುಭವಿಸಬೇಕಾಯಿತು. ಹರಳಯ್ಯ-ಮಧುವರಸ-ಶೀಲವಂತರು ಎಳೆಹೂಟೆ ಶಿಕ್ಷೆಗೆ ಒಳಗಾಗಿ ಪ್ರಾಣಬಿಡಬೇಕಾಯಿತು. ವಚನ ಸಾಹಿತ್ಯವನ್ನು ಜಾತಿವಾದಿಗಳು ನಾಶಮಾಡಲು ಯತ್ನಿಸಿದಾಗ ಅದನ್ನು ಸಂರಕ್ಷಿಸಲು ಚಿನ್ಮಯಜ್ಞಾನಿ ಚನ್ನಬಸವಣ್ಣ, ವೀರಮಾತೆ ಅಕ್ಕನಾಗಲಾಂಬಿಕೆ, ವೀರಗಣಾಚಾರಿ ಮಡಿವಾಳ ಮಾಚಿದೇವರು ವಚನ ವಾಙ್ಮಯವನ್ನು ಹೊತ್ತು ಕಲ್ಯಾಣದಿಂದ ಹೊರನಡೆದರು. ಶರಣರ ಈ ಬಲಿದಾನದ ಸಂಸ್ಮರಣೆಗಾಗಿ ಕಾಯಕವೇ ಕೈಲಾಸ ಎಂಬ ದುಡಿಮೆಯ ಸಪ್ತಾಕ್ಷರಿ ಮಂತ್ರವನ್ನು ಸಾರಿದ ಶರಣ ಭೂಮಿ ಬಸವ ಕಲ್ಯಾಣದಲ್ಲಿ ಕಲ್ಯಾಣ ಪರ್ವ ಎಂಬ ವಾರ್ಷಿಕ, ಧಾರ್ಮಿಕ ಸಮಾವೇಶ ನಡೆಸಲಾಗುತ್ತಿದೆ. ಉದ್ಘಾಟನಾ ಗೋಷ್ಠಿ, ಸಾಮೂಹಿಕ ಇಷ್ಟಲಿಂಗಾರ್ಚನೆ, ಸಮುದಾಯ ಪ್ರಾರ್ಥನೆ-ಶರಣರ ಸ್ಮರಣೆ, ಮೆರವಣಿಗೆ ಪಥ ಸಂಚಲನ ಕಲ್ಯಾಣ ಪರ್ವದ ಮುಖ್ಯ ಧಾರ್ಮಿಕ ವಿಧಿಗಳು. ಮೇ 1 ರಂದು ಬೆಳಿಗ್ಗೆ 10 ರಿಂದ ಬಸವ ಧ್ವಜಾರೋಹಣ, ಸಮುದಾಯ ಪ್ರಾರ್ಥನೆ ಮತ್ತು ಶರಣಾರ್ಥಿ(ಶರಣ ವಂದನೆ) ಕಾರ್ಯಕ್ರಮ ನೆರವೇರಲಿವೆ. ಚಿಂತನಗೋಷ್ಠಿ, ಉಪನ್ಯಾಸ, ಧಾರ್ಮಿಕ ರಸ ಪ್ರಶ್ನೆ ಮುಂತಾದ ಕಾರ್ಯಕ್ರಮಗಳಿಂದ ಕೂಡಿದ ಕಲ್ಯಾಣ ಪರ್ವವು ಉತ್ತಮ ಜ್ಞಾನದಾಸೋಹದೊಡನೆ ಅನ್ನ ದಾಸೋಹವನ್ನು ಅಚ್ಚುಕಟ್ಟಾಗಿ ಮಾಡುತ್ತದೆ.

ತನ್ನ ಜೀವಮಾನದಲ್ಲಿ ಆಯುಷ್ಯ ಆರೋಗ್ಯ ಇರುವವರೆಗೆ ಎಷ್ಟು ಸಲ ಒಬ್ಬ ವ್ಯಕ್ತಿ ಶರಣ ಮೇಳ / ಕಲ್ಯಾಣ ಪರ್ವದಲ್ಲಿ ಭಾಗಿಯಾಗುತ್ತಾನೋ ಆತ ನಿಜಕ್ಕೂ ಹೆಚ್ಚು ಪುಣ್ಯವಂತ. ಇಂತಹ ಪವಿತ್ರ ಸಮಾಗಮ ಕಲ್ಯಾಣಪರ್ವಕ್ಕೆ ಜಾತಿಮತಪಂಥಗಳ ಭೇದವಿಲ್ಲದೆ ಸಹೋದರ ಭಾವನೆಯಿಂದ ಎಲ್ಲರೂ ಲಕ್ಷಗಟ್ಟಳೆ ಸಂಖ್ಯೆಯಲ್ಲಿ ಬನ್ನಿರಿ.

★ ಶರಣರ ಬರುವೆಮಗೆ ಪ್ರಾಣ ಜೀವಾಳ ★

ಬೆಂಗಳೂರು ವಿಳಾಸ :
ಕಲ್ಯಾಣ ಪರ್ವ ಉತ್ಸವ ಸಮಿತಿ
ಬಸವ ಮಂಟಪ, 2035, 2ನೇ ಬ್ಲಾಕ್
ರಾಜಾಜಿನಗರ, ಬೆಂಗಳೂರು-560010
☎ : 080-3325335/3322790

ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿ
ಕಾರ್ಯಾಧ್ಯಕ್ಷೆ, ಕಲ್ಯಾಣ ಪರ್ವ ಉತ್ಸವ ಸಮಿತಿ
ಬಸವಕಲ್ಯಾಣ- 585 327
ತಾ-ಬಸವ ಕಲ್ಯಾಣ, ಜಿಲ್ಲೆ-ಬೀದರ್
☎ : 0848-651921/652856

★ ಕಲ್ಯಾಣ ಕಿರಣ ★

ಸಂಪುಟ 32	ಬಸವ ಶಕೆ 870	ಆಜೀವ ಸದಸ್ಯತ್ವ 500 ರೂ
ಸಂಚಿಕೆ - 4	ಏಪ್ರಿಲ್ 2003	ವಾರ್ಷಿಕ ಚಂದಾ 50 ರೂ

ಕಿರಣಗನ್ನಡಿ

ಎಲ್ಲರಿಗೂ ಬಸವ ಜಯಂತಿಯ ಶುಭಾಶಯಗಳು

ಪೂಜ್ಯ ಮಾತಾಜಿಯವರ ವಿದೇಶ ಪ್ರವಾಸದ ದಿನಾಂಕವನ್ನು 25 ಮೇ 2003 ಎಂದು ನಿರ್ಧರಿಸಲಾಗುತ್ತಿದೆ. ನಂತರ ಖಚಿತವಾಗಿ ತಿಳಿಸಲಾಗುವುದು.

ಪೂಜ್ಯ ಶ್ರೀ ಜಗದ್ಗುರು ಅಲ್ಲಮ ಪ್ರಭು ಸ್ವಾಮೀಜಿ

KALYANA KIRANA- Reg. No. 19988/70. Monthly Magazine printed and published by B.Shambulingaiah, at Prabhudeva Printing Press, Basava Gangotri, Kumbalgodu, Bangalore-560074. Phone : 8437234

ತ್ವರಿತ ವ್ಯವಹಾರಕ್ಕೆ ಬಸವಮಂಟಪದ ವಿಳಾಸಕ್ಕೆ ಬರೆಯಿರಿ :
ಬಸವ ಮಂಟಪ, 2035
20ನೆಯ ಮುಖ್ಯರಸ್ತೆ, ಎರಡನೆಯ ಬ್ಲಾಕ್
ರಾಜಾಜಿನಗರ, ಬೆಂಗಳೂರು-560010
ದೂರವಾಣಿ: 3325335 / 3322790

ಓಂ ಶ್ರೀ ಗುರು ಬಸವಲಿಂಗಾಯ ನಮಃ

866666

ಅಷ್ಟೋತ್ತರ ಶತ ಲಿಂಗದೇವ ಸ್ತುತಿ

ಮಾತಾಜಿ

ಲಿಂಗದೇವಾಷ್ಟಕವನ್ನು ಕೆಸೆಟ್ ರೂಪದಲ್ಲಿ ಬಿಡುಗಡೆ ಮಾಡಲಾಯಿತು. ಅದು ಬಲುಬೇಗನೆ ಜನಪ್ರಿಯವಾಗಿದೆ, ಮನೆ ಮನೆಗಳಲ್ಲೂ ಹಾಡುತ್ತಿದ್ದಾರೆ.

ಭದ್ರಾವತಿ ರಾಷ್ಟ್ರೀಯ ಬಸವ ದಳದ ಶರಣರು ಒಂದು ವಿನಂತಿ ಮಾಡಿದ್ದಾರೆ. ಲಿಂಗದೇವಾಷ್ಟಕ ಬಹಳ ಮುದನೀಡುತ್ತದೆ. ಹಾಡುತ್ತಾ ಬಹಳ ಬೇಗನೆ ಮುಗಿದು ಬಿಡುತ್ತದೆ. ಆದ್ದರಿಂದ 108 ಸ್ತುತಿ ಬರುವಂತೆ ಮಾಡಿರಿ ಎಂದು. ಅದಕ್ಕಾಗಿ ಈಗ 108 ಸ್ತೋತ್ರ ಬರುವಂತೆ 36 ಪದ್ಯ ರಚಿಸಿದ್ದೇನೆ. ವಾರದ ಪ್ರಾರ್ಥನೆ - ಶರಣ ಸಂಗಮ ಮತ್ತು ಸಂಜೆಯ ನೆನಹುವಿನಲ್ಲಿ ಲಿಂಗದೇವಾಷ್ಟಕ ಹಾಡಿ, ವಿಶೇಷ ಪೂಜೆ ಮಾಡುವಾಗ 108 ಸ್ತೋತ್ರ ಉಳ್ಳ 36 ಪದ್ಯ ಹಾಡುವುದು ಸೂಕ್ತ.

1. ಶರಣ ಜನ ಪೂಜಿತ ಶ್ರೀ ಲಿಂಗದೇವ
ಗುರು ಬಸವ ರೂಪಿತ ಶ್ರೀ ಲಿಂಗದೇವ
ಇಷ್ಟಲಿಂಗ ರೂಪಿ ಶ್ರೀ ಲಿಂಗದೇವ
ಪೂಜಿಪೆ ನಾ ಘನಲಿಂಗದೇವ ॥ ಪಲ್ಲವಿ ॥
ಓಂ ಶ್ರೀ ಲಿಂಗದೇವಾಯ ನಮಃ

2. ಮಜ್ಜನ ಪ್ರಿಯ ಶ್ರೀ ಲಿಂಗದೇವ
ವಿಭೂತಿ ಲೇಪಿತ ಶ್ರೀ ಲಿಂಗದೇವ
ರುದ್ರಾಕ್ಷ ಶೋಭಿತ ಶ್ರೀ ಲಿಂಗದೇವ
ಪೂಜಿಪೆ ನಾ ಘನಲಿಂಗದೇವ
ಓಂ ಶ್ರೀ ಲಿಂಗದೇವಾಯ ನಮಃ

3. ಶ್ರೀಗಂಧ ಲೇಪಿತ ಶ್ರೀ ಲಿಂಗದೇವ
ಅಕ್ಷತ ಶೋಭಿತ ಶ್ರೀ ಲಿಂಗದೇವ
ಪುಷ್ಪ ಸುಪೂಜಿತ ಶ್ರೀ ಲಿಂಗದೇವ
ಪೂಜಿಪೆ ನಾ ಘನ ಲಿಂಗದೇವ
ಓಂ ಶ್ರೀ ಲಿಂಗದೇವಾಯ ನಮಃ

4. ಬಿಲ್ವ ಪತ್ರ ಪ್ರಿಯ ಶ್ರೀ ಲಿಂಗದೇವ
ಧೂಪಧೂಮ ಲೋಲ ಶ್ರೀ ಲಿಂಗದೇವ
ದೀಪಾರತಿ ಮೋಹಿ ಶ್ರೀ ಲಿಂಗದೇವ
ಪೂಜಿಪೆ ನಾ ಘನಲಿಂಗದೇವ
ಓಂ ಶ್ರೀ ಲಿಂಗದೇವಾಯ ನಮಃ

5. ನೈವೇದ್ಯಾರ್ಪಿತ ಶ್ರೀ ಲಿಂಗದೇವ
ಅರ್ಘ್ಯ ಸುಶೋಭಿತ ಶ್ರೀ ಲಿಂಗದೇವ
ಘಂಟಾನಾದ ಪ್ರಿಯ ಶ್ರೀ ಲಿಂಗದೇವ
ಪೂಜಿಪೆ ನಾ ಘನ ಲಿಂಗದೇವ
ಓಂ ಶ್ರೀ ಲಿಂಗದೇವಾಯ ನಮಃ

6. ಭಕ್ತಲೋಲ ಶ್ರೀ ಲಿಂಗದೇವ
ಜಪ-ತಪ ಪ್ರೇಮಿ ಶ್ರೀ ಲಿಂಗದೇವ
ಸ್ತುತಿ ಸಂಪ್ರೀತ ಶ್ರೀ ಲಿಂಗದೇವ
ಶರಣೆಂಬೆ ನಾ ಘನಲಿಂಗದೇವ
ಶರಣು ಶರಣಾರ್ಥಿ

7. ಸರ್ವಕಾರಣ ಶ್ರೀ ಲಿಂಗದೇವ
ಸರ್ವಶಕ್ತ ಶ್ರೀ ಲಿಂಗದೇವ
ಸರ್ವವ್ಯಾಪಿ ಶ್ರೀ ಲಿಂಗದೇವ
ಶರಣೆಂಬೆ ನಾ ಘನಲಿಂಗದೇವ
ಶರಣು ಶರಣಾರ್ಥಿ

8. ಸಕಲಾಧಾರ ಶ್ರೀ ಲಿಂಗದೇವ
ಸರ್ವ ರಕ್ಷಕ ಶ್ರೀ ಲಿಂಗದೇವ
ಸರ್ವಜ್ಞ ಚೇತನ ಶ್ರೀ ಲಿಂಗದೇವ
ಶರಣೆಂಬೆ ನಾ ಘನಲಿಂಗದೇವ
ಶರಣು ಶರಣಾರ್ಥಿ

9. ಸೃಷ್ಟಿಕರ್ತ ಶ್ರೀ ಲಿಂಗದೇವ
ಸೃಷ್ಟಿ ಪಾಲಕ ಶ್ರೀ ಲಿಂಗದೇವ
ಮಹಾಲಯ ಕರ್ತ ಶ್ರೀ ಲಿಂಗದೇವ
ಶರಣೆಂಬೆ ನಾ ಘನಲಿಂಗದೇವ
ಶರಣು ಶರಣಾರ್ಥಿ

10. ನಿರಾಕಾರ ನಿರ್ಗುಣ ಶ್ರೀ ಲಿಂಗದೇವ
ನಿರ್ಮಲ ಚೇತನ ಶ್ರೀ ಲಿಂಗದೇವ
ನಿರಂಜನ ರೂಪ ಶ್ರೀ ಲಿಂಗದೇವ
ಶರಣೆಂಬೆ ನಾ ಘನಲಿಂಗದೇವ
ಶರಣು ಶರಣಾರ್ಥಿ

11. ನಿತ್ಯ ಸ್ವರೂಪ ಶ್ರೀ ಲಿಂಗದೇವ
ಸತ್ಯ ಸ್ವರೂಪ ಶ್ರೀ ಲಿಂಗದೇವ
ಚಿತ್ಕಳಾಸಹಿತ ಶ್ರೀ ಲಿಂಗದೇವ
ಶರಣೆಂಬೆ ನಾ ಘನಲಿಂಗದೇವ
ಶರಣು ಶರಣಾರ್ಥಿ

12. ಪ್ರಣವಾರೂಢ ಶ್ರೀ ಲಿಂಗದೇವ
ಪ್ರಣವ ಸ್ವರೂಪ ಶ್ರೀ ಲಿಂಗದೇವ
ಪ್ರಣವ ಪ್ರಿಯ ಶ್ರೀ ಲಿಂಗದೇವ
ಶರಣೆಂಬೆ ನಾ ಘನಲಿಂಗದೇವ
ಶರಣು ಶರಣಾರ್ಥಿ

13. ನಾದ ಸ್ವರೂಪ ಶ್ರೀ ಲಿಂಗದೇವ
ನಾದಾತೀತ ಶ್ರೀ ಲಿಂಗದೇವ
ಸುನಾದಲೋಲ ಶ್ರೀ ಲಿಂಗದೇವ
ಶರಣೆಂಬೆ ನಾ ಘನಲಿಂಗದೇವ
ಶರಣು ಶರಣಾರ್ಥಿ

14. ವಿಶ್ವತಃ ಚಕ್ಷು ಶ್ರೀ ಲಿಂಗದೇವ
ವಿಶ್ವತೋಬಾಹು ಶ್ರೀ ಲಿಂಗದೇವ
ವಿಶ್ವತಃ ಪಾದ ಶ್ರೀ ಲಿಂಗದೇವ
ಶರಣೆಂಬೆ ನಾ ಘನಲಿಂಗದೇವ
ಶರಣು ಶರಣಾರ್ಥಿ

15. ಕರ್ಮಾತೀತ ಶ್ರೀ ಲಿಂಗದೇವ
ಕರ್ಮಾಧ್ಯಕ್ಷ ಶ್ರೀ ಲಿಂಗದೇವ
ಕರ್ಮ ನಿವಾರಕ ಶ್ರೀ ಲಿಂಗದೇವ
ಶರಣೆಂಬೆ ನಾ ಘನಲಿಂಗದೇವ
ಶರಣು ಶರಣಾರ್ಥಿ

16. ನಿತ್ಯ ಮುಕ್ತ ಶ್ರೀ ಲಿಂಗದೇವ
ಮುಕ್ತಿದಾತ ಶ್ರೀ ಲಿಂಗದೇವ
ಯುಕ್ತಿದಾತ ಶ್ರೀ ಲಿಂಗದೇವ
ಶರಣೆಂಬೆ ನಾ ಘನಲಿಂಗದೇವ
ಶರಣು ಶರಣಾರ್ಥಿ

17. ಮಾತಾಪಿತ ರಹಿತ ಶ್ರೀ ಲಿಂಗದೇವ
ಸತಿಸುತ ರಹಿತ ಶ್ರೀ ಲಿಂಗದೇವ
ಜ್ಯೋತಿ ಸ್ವರೂಪ ಶ್ರೀ ಲಿಂಗದೇವ
ಶರಣೆಂಬೆ ನಾ ಘನಲಿಂಗದೇವ
ಶರಣು ಶರಣಾರ್ಥಿ

18. ಕಾಲಾತೀತ ಶ್ರೀ ಲಿಂಗದೇವ
ಕರ್ಮಾತೀತ ಶ್ರೀ ಲಿಂಗದೇವ
ಭವರೋಗ ವೈದ್ಯ ಶ್ರೀ ಲಿಂಗದೇವ
ಶರಣೆಂಬೆ ನಾ ಘನಲಿಂಗದೇವ
ಶರಣು ಶರಣಾರ್ಥಿ

19. ಮಹಾದಾತ ಶ್ರೀ ಲಿಂಗದೇವ
ಕಾರುಣ್ಯ ನಿಧಿ ಶ್ರೀ ಲಿಂಗದೇವ
ಮಂಗಲರೂಪಿ ಶ್ರೀ ಲಿಂಗದೇವ
ಶರಣೆಂಬೆ ನಾ ಘನಲಿಂಗದೇವ
ಶರಣು ಶರಣಾರ್ಥಿ

20. ಜನನ ಮರಣ ರಹಿತ ಶ್ರೀ ಲಿಂಗದೇವ
ಭವತಾಪ ಹಾರಕ ಶ್ರೀ ಲಿಂಗದೇವ
ಆನಂದದಾತ ಶ್ರೀ ಲಿಂಗದೇವ
ಶರಣೆಂಬೆ ನಾ ಘನಲಿಂಗದೇವ
ಶರಣು ಶರಣಾರ್ಥಿ

21. ಮಾತೃಸ್ವರೂಪ ಶ್ರೀ ಲಿಂಗದೇವ
ಪಿತೃಸ್ವರೂಪ ಶ್ರೀ ಲಿಂಗದೇವ
ಚೈತನ್ಯ ರೂಪ ಶ್ರೀ ಲಿಂಗದೇವ
ಶರಣೆಂಬೆ ನಾ ಘನಲಿಂಗದೇವ
ಶರಣು ಶರಣಾರ್ಥಿ

22. ನಿಷ್ಕಲ ರೂಪ ಶ್ರೀ ಲಿಂಗದೇವ
ಚರಾಚರ ಕರ್ತೃ ಶ್ರೀ ಲಿಂಗದೇವ
ಲೀಲಾ ವಿನೋದಿ ಶ್ರೀ ಲಿಂಗದೇವ
ಶರಣೆಂಬೆ ನಾ ಘನಲಿಂಗದೇವ
ಶರಣು ಶರಣಾರ್ಥಿ

23. ಸತ್ ಸ್ವರೂಪ ಶ್ರೀ ಲಿಂಗದೇವ
ಚಿತ್ ಸ್ವರೂಪ ಶ್ರೀ ಲಿಂಗದೇವ
ಆನಂದ ರೂಪ ಶ್ರೀ ಲಿಂಗದೇವ
ಶರಣೆಂಬೆ ನಾ ಘನಲಿಂಗದೇವ
ಶರಣು ಶರಣಾರ್ಥಿ

24. ಪರಿಪೂರ್ಣಮೂರ್ತಿಶ್ರೀಲಿಂಗದೇವ
ಪರಮ ಪ್ರಭು ಶ್ರೀ ಲಿಂಗದೇವ
ಪರಮ ಪೂಜಿತ ಶ್ರೀ ಲಿಂಗದೇವ
ಶರಣೆಂಬೆ ನಾ ಘನಲಿಂಗದೇವ
ಶರಣು ಶರಣಾರ್ಥಿ

25. ಸರ್ವೋನ್ನತ ಶ್ರೀ ಲಿಂಗದೇವ
ಸರ್ವ ಸ್ವತಂತ್ರ ಶ್ರೀ ಲಿಂಗದೇವ
ಸರ್ವ ಭರಿತ ಶ್ರೀ ಲಿಂಗದೇವ
ಶರಣೆಂಬೆ ನಾ ಘನಲಿಂಗದೇವ
ಶರಣು ಶರಣಾರ್ಥಿ

26. ವಿದ್ಯಾದಾತ ಶ್ರೀ ಲಿಂಗದೇವ
ಸಂಪತ್‌ದಾತ ಶ್ರೀ ಲಿಂಗದೇವ
ಶಕ್ತಿದಾತ ಶ್ರೀ ಲಿಂಗದೇವ
ಶರಣೆಂಬೆ ನಾ ಘನಲಿಂಗದೇವ
ಶರಣು ಶರಣಾರ್ಥಿ

27. ಅನಘ ಸ್ವರೂಪ ಶ್ರೀ ಲಿಂಗದೇವ
ಅನುಗ್ರಹ ದಾತ ಶ್ರೀ ಲಿಂಗದೇವ
ಅನಂತ ರೂಪ ಶ್ರೀ ಲಿಂಗದೇವ
ಶರಣೆಂಬೆ ನಾ ಘನಲಿಂಗದೇವ
ಶರಣು ಶರಣಾರ್ಥಿ

28. ಆದ್ಯಂತ ರಹಿತ ಶ್ರೀ ಲಿಂಗದೇವ
ಅನಾದಿ ಸ್ವರೂಪ ಶ್ರೀ ಲಿಂಗದೇವ
ಅಭವ ಅಜೇಯ ಶ್ರೀ ಲಿಂಗದೇವ
ಶರಣೆಂಬೆ ನಾ ಘನಲಿಂಗದೇವ
ಶರಣು ಶರಣಾರ್ಥಿ

29. ನಾಮರಹಿತ ಶ್ರೀ ಲಿಂಗದೇವ
ಅನಂತನಾಮ ಶ್ರೀ ಲಿಂಗದೇವ
ಅಕಾಯಚರಿತ ಶ್ರೀ ಲಿಂಗದೇವ
ಶರಣೆಂಬೆ ನಾ ಘನಲಿಂಗದೇವ
ಶರಣು ಶರಣಾರ್ಥಿ

30. ವ್ಯಕ್ತಾವ್ಯಕ್ತ ಶ್ರೀ ಲಿಂಗದೇವ
ಸೂಕ್ಷ್ಮಸ್ವರೂಪ ಶ್ರೀ ಲಿಂಗದೇವ
ಶಕ್ತಿ ವಿಶಿಷ್ಟ ಶ್ರೀ ಲಿಂಗದೇವ
ಶರಣೆಂಬೆ ನಾ ಘನಲಿಂಗದೇವ
ಶರಣು ಶರಣಾರ್ಥಿ

31. ಅಣು ಸ್ವರೂಪ ಶ್ರೀ ಲಿಂಗದೇವ
ಮಹತ್ ಸ್ವರೂಪ ಶ್ರೀ ಲಿಂಗದೇವ
ಅಮೃತ ಚೇತನ ಶ್ರೀ ಲಿಂಗದೇವ
ಶರಣೆಂಬೆ ನಾ ಘನಲಿಂಗದೇವ
ಶರಣು ಶರಣಾರ್ಥಿ

32. ಲೋಕ ನಿಯಂತ್ರಕ ಶ್ರೀ ಲಿಂಗದೇವ
ಆತ್ಮ ಸ್ವರೂಪ ಶ್ರೀ ಲಿಂಗದೇವ
ಹೃತ್ಕಮಲವಾಸಿ ಶ್ರೀ ಲಿಂಗದೇವ
ಶರಣೆಂಬೆ ನಾ ಘನಲಿಂಗದೇವ
ಶರಣು ಶರಣಾರ್ಥಿ

33. ಸಹಸ್ರಾರ ವಾಸ ಶ್ರೀ ಲಿಂಗದೇವ
ಚಿನ್ಮಯ ಚೇತನ ಶ್ರೀ ಲಿಂಗದೇವ
ವಾಙ್ಮನಾತೀತ ಶ್ರೀ ಲಿಂಗದೇವ
ಶರಣೆಂಬೆ ನಾ ಘನಲಿಂಗದೇವ
ಶರಣು ಶರಣಾರ್ಥಿ

34. ಅಯೋನಿ ಸಂಭವ ಶ್ರೀ ಲಿಂಗದೇವ
ಅಪ್ರಮಾಣ ಶ್ರೀ ಲಿಂಗದೇವ
ಅಗಮ್ಯ ಅಗೋಚರ ಶ್ರೀ ಲಿಂಗದೇವ
ಶರಣೆಂಬೆ ನಾ ಘನ ಲಿಂಗದೇವ
ಶರಣು ಶರಣಾರ್ಥಿ

35. ಸಕಲಾರಾಧ್ಯ ಶ್ರೀ ಲಿಂಗದೇವ
ಲೋಕ ರಕ್ಷಕ ಶ್ರೀ ಲಿಂಗದೇವ
ಇಷ್ಟಪ್ರದಾಯಕ ಶ್ರೀ ಲಿಂಗದೇವ
ಶರಣೆಂಬೆ ನಾ ಘನಲಿಂಗದೇವ
ಶರಣು ಶರಣಾರ್ಥಿ

36. ಗುರು ಬಸವ ಪ್ರೀತ ಶ್ರೀ ಲಿಂಗದೇವ
ಬಸವಾತ್ಮಜೆ ಪ್ರಿಯ ಶ್ರೀ ಲಿಂಗದೇವ
ಸಚ್ಚಿದಾನಂದ ಶ್ರೀ ಲಿಂಗದೇವ
ಶರಣೆಂಬೆ ನಾ ಘನಲಿಂಗದೇವ
ಶರಣು ಶರಣಾರ್ಥಿ

ಶರಣ ವ್ರತ ಸ್ವೀಕಾರ

ಶರಣ ವ್ರತ ಸ್ವೀಕಾರದಿಂದ ಒಂದು ಶಿಸ್ತು ಬರುವುದೆಂಬ ಉದ್ದೇಶದಿಂದ ಅನೇಕ ಶರಣ ಬಂಧುಗಳ ಕೋರಿಕೆಯ ಮೇರೆಗೆ ಕಲ್ಯಾಣ ಪರ್ವಕ್ಕೆ ಮುನ್ನ ಶರಣ ವ್ರತಾಚರಣೆಗೆ ಅನುಮತಿ ನೀಡಲಾಗುತ್ತಿದೆ.

1. ಗುರು ಸಾರಾಯ ಸಂಪದ್‌ವ್ರತ : 40 ದಿವಸ : ಪ್ರಾರಂಭ 22-3-2003
2. ಲಿಂಗ ಸಾರಾಯ ಸಂಪದ್‌ವ್ರತ : 30 ದಿವಸ : ಪ್ರಾರಂಭ 1-4-2003
3. ಜಂಗಮ ಸಾರಾಯ ಸಂಪದ್‌ವ್ರತ : 20 ದಿವಸ : ಪ್ರಾರಂಭ 11-4-2003
4. ಪ್ರಸಾದ ಸಾರಾಯ ಸಂಪದ್‌ವ್ರತ : 10 ದಿವಸ : ಪ್ರಾರಂಭ 21-4-2003

ದಿ. 1-5-2003 ರಂದು ಬಸವ ಕಲ್ಯಾಣದಲ್ಲಿ ಸಮುದಾಯ ಪ್ರಾರ್ಥನೆ ಮಾಡಿ ಮತ್ತು ಶರಣರಿಗೆ ಶರಣಾರ್ಥಿ ಸಲ್ಲಿಸಿದ ನಂತರ ಶರಣ ವ್ರತವು ಮುಕ್ತಾಯಗೊಳ್ಳುವುದು.

ಸಂಪಾದಕೀಯ - **ಒಂದು ಟಿಸಿಲನ್ನು ಗಿಡವೆನ್ನಬಹುದೆ ?**

- ಮಾತಾಜಿ

ಶರಣ. ಎಂ. ಆರ್. ಪಂಪನಗೌಡರು, ಬಳ್ಳಾರಿ ಒಂದು ಮಹತ್ವಪೂರ್ಣ ಪತ್ರವನ್ನು ಬರೆದರು. ಹಿಂದಿನ ಜನಗಣತಿಯ ದಾಖಲೆಗಳಲ್ಲಿ ವೀರಶೈವದ ಸ್ಥಾನವೇನು ಎಂಬ ಬಗ್ಗೆ ವ್ಯಾಪಕ ಅಧ್ಯಯನ ಮಾಡಿರುವುದಾಗಿಯೂ ಬೇಕಾದರೆ ದಾಖಲೆ ನೀಡುವುದಾಗಿಯೂ ತಿಳಿಸಿದರು. ನನಗೆ ಸಂತೋಷವೆನಿಸಿ ಕಳಿಸಲು ಹೇಳಿದೆ; ಕಳಿಸಿದರು. ಮಾರ್ಚ್ ಕಲ್ಯಾಣ ಕಿರಣ ಮುದ್ರಣಗೊಂಡಿತ್ತು ಲೇಖನ ಹಾಕಲು ಆಗಲಿಲ್ಲ. ಪುನಃ ನೆನಪಿನೋಲೆ ಬರೆದಿದ್ದಾರೆ. ನಾನೀಗ ಆ ಓಲೆಯನ್ನು ಮುದ್ರಿಸಿ ನನ್ನ ಅಭಿಪ್ರಾಯ ತಿಳಿಸುತ್ತೇನೆ. ಕಲ್ಯಾಣ ಪರ್ವದ ವಿಶೇಷ ಸಂಚಿಕೆಯಲ್ಲಿ ಶ್ರೀ ಪಂಪನ ಗೌಡರು ಕೊಟ್ಟ ವಿವರಗಳನ್ನು ನೀಡಲಿದ್ದೇನೆ. ಅವರು ಸಂಗ್ರಹಿಸಿರುವ ದಾಖಲೆಗಳು ಬಹಳ ವ್ಯಾಪಕವಾಗಿವೆ.

1891 ನೆಯ ಇಸವಿಯ ಜನಗಣತಿಯ ಮಾಹಿತಿ ನೀಡುವ ಪುಸ್ತಕDetails of Census of India - 1891 volume XXV - Mysore, partII/ Imperial tables 1-XVI with index of castes. Editor V.N. Narasimha Iyengar, provincial Superintendent of Census operations in Mysore, printed at the Govt., printing press - 1893.

Mythic Society Library Book No. 315-487-IND 1891, V-2 ಪುಟ 306 ರಲ್ಲಿCaste No. 56,ಲಿಂಗಾಯತ್ ಎಂದು ಬರೆದು ಇದರಲ್ಲಿ ಉಪ ಪಂಗಡಗಳನ್ನು ಹೀಗೆ ಗುರುತಿಸಿದ್ದಾರೆ

1. ಆರಾಧ್ಯ 2. ಅಯ್ಯ 3. ಬಣಜಿಗ 4. ಬಣ್ಣದವ 5. ಬಸಳೆ 6. ಬವನೆ 7. ಗೌಡ ಲಿಂಗಾಯತ 8. ಗದ್ದಿಗೆಯವ 9. ಗೌಡಮನೆ 10. ಗೌಳಿಗ 11. ಗುರುಸ್ಥಲ 12. ಹಿರಿಶುಭೆ 13. ಜಂಗಮ 14. ಜ್ಯೋತಿ ಬಣಜಿಗ 15. ಕಮೊಡಿಗೌಡ 16. ಕರ್ತ ಪಾವಡ 17. ಕಾಯ್ಕೋಳ 18. ಕೋರಿಶೆಟ್ಟಿ 19. ಹೂಗಾರ 20. ಮಾಳವ 21. ಮೇಲ್ ಪಾವಡ 22. ನೀರು ಮಡಿಯವ 23. ನೊಣಬ 24. ಪಂಚಾಚಾರಗೊಂಡ 25. ಪೇಟೆಮನೆ 26. ಸಾದ 27. ಸಜ್ಜನ 28. ಷಟಸ್ಥಲ 29. ಶಿವಮತ 30. ಶೀಲವಂತ 31. ಶೀಲದವ 32. ತಮಿಳು ಜಂಗಮ 33. ತಮ್ಮಡಿ 34. ತೋಗಶೆಟ್ಟಿ 35. ತುರುಕಾನೆ ಬಣಜಿಗ 36. ಒಡೆಯರು 37. ವೀರಶೈವ.

ಇದೇ ಹಿನ್ನೆಲೆಯಲ್ಲಿ ಶ್ರೀ ಪಂಪನಗೌಡರ ಸಂದೇಹ ಬಹಳ ಮಹತ್ವವನ್ನು ಪಡೆದುಕೊಳ್ಳುತ್ತದೆ. ಲಿಂಗಾಯತ ಧರ್ಮದೊಳಗಣ ಉಪ ಜಾತಿಗಳಾದ ಮಾಳಿ, ಗೌಳಿ, ಮಡಿವಾಳ, ಮೇದಾರ, ಬಣಗಾರ, ಹಡಪದ ಇತ್ಯಾದಿ ಇತ್ಯಾದಿಗಳಂತೆ ವೀರಶೈವವೂ ಒಂದು ಉಪಜಾತಿ. ವಿವಿಧ ಕಾಯಕಗಳವರು ಈ ಧರ್ಮದೊಳಕ್ಕೆ ಬಂದು ಸೇರಿದಂತೆ, ಶೈವ ಪ್ರಭೇದಗಳಲ್ಲಿ ಒಂದಾದ ವೀರಶೈವರೂ ಬಂದು ಸೇರಿಕೊಂಡರು. ಅಂದಾಗ ವೀರಶೈವವು ಲಿಂಗಾಯತಕ್ಕೆ ಸಮವಾಗಿ ಹೇಗೆ ಆಗಲು ಸಾಧ್ಯ ? ಲಿಂಗಾಯತರನ್ನೆಲ್ಲ ವೀರಶೈವರೆಂದು ಸಮೀಕರಿಸುವ ವೀರಶೈವ ಮಹಾಸಭೆ ಮಡಿವಾಳ, ಮೇದಾರ, ಹಡಪದ, ಪಂಚಮಸಾಲೆ, ರೆಡ್ಡಿ ಈ ಯಾವುದಾದರೂ ಹೆಸರಿನಿಂದಲೂ ಏಕೆ ಸಮೀಕರಿಸಬಾರದು ?

The Indian Empireಎಂಬ ಒಂದು ಪುಸ್ತಕದ 422-423 ಪುಟಗಳ ಅಖಿಲ ಭಾರತ ವೀರಶೈವ ಮಹಾಸಭೆಯವರು 2001 ರ ಜನಗಣತಿ ಸಮಯದಲ್ಲಿ ಒಂದು ಸೂಚನಾ ಪತ್ರವನ್ನು ಹೊರಡಿಸಿದ್ದರು. ಅದರಲ್ಲಿನ ವಿವರ ಹೀಗಿದೆ :

★ ದಿನಾಂಕ 17-9-1994ರಂದು ರಾಜ್ಯ ಸರ್ಕಾರ ಮತ್ತು ದಿನಾಂಕ 6-12-1999 ರಂದು ಕೇಂದ್ರ ಸರ್ಕಾರದ ಆಜ್ಞೆಗಳ ಪ್ರಕಾರ ಈ ಕೆಳಗಿನ ಪಂಗಡಗಳವರನ್ನು ಹಿಂದುಳಿದ ವರ್ಗಕ್ಕೆ ಸೇರಿಸಿ ಸರ್ಕಾರದ ಎಲ್ಲಾ ಯೋಜನೆಗಳಲ್ಲಿ ಮತ್ತು ನೌಕರಿಯಲ್ಲಿ ಮೀಸಲಾತಿ ಸೌಲಭ್ಯ ಪಡೆಯಲು ಅನುಕೂಲ ಮಾಡಿಕೊಡಲಾಗಿದೆ.

1. ಲಿಂಗಾಯಿತ-ಗೌಳಿ,ಗವಳಿ,ಕವಾಡಿಗ	11. ಲಿಂಗಾಯಿತ-ಸಿಂಪಿ	21. ಲಿಂಗಯಿತ-ಕಮ್ಮಸಾಲೆ
2. ಲಿಂಗಾಯಿತ-ಮೇದಾರ	12. ಲಿಂಗಾಯಿತ-ನೀಲಗಾರ	22. ಲಿಂಗಯಿತ-ಬಡಿಗಾರ
3. ಲಿಂಗಾಯಿತ-ಅಗಸ,ಮಡಿವಾಳ	13. ಲಿಂಗಾಯಿತ-ಬಿಳಿಜಾಡು	23. ಲಿಂಗಾಯಿತ-ನಾಯಿಂದ
4. ಲಿಂಗಾಯಿತ-ಗುರವ	14. ಲಿಂಗಾಯಿತ-ಹಟಗಾರ	24. ಲಿಂಗಾಯಿತ-ಭಂಡಾರಿ
5. ಲಿಂಗಾಯಿತ-ಹೂಗಾರ	15. ಲಿಂಗಾಯಿತ-ಸ್ವೈಗಿ,ನೇಕಾರ	25. ಲಿಂಗಾಯಿತ-ಬಜಂತ್ರಿ
6. ಲಿಂಗಾಯಿತ-ಮಾಲಗಾರ	16. ಲಿಂಗಾಯಿತ-ಕುರುಹಿನ ಶೆಟ್ಟಿ	26. ಲಿಂಗಾಯಿತ-ಹಡಪದ
7. ಲಿಂಗಾಯಿತ-ಜಾಟ	17. ಲಿಂಗಾಯಿತ-ಬಿಳಿಮಗ್ಗ	27. ಲಿಂಗಾಯಿತ-ಗಾಣಿಗ
8. ಲಿಂಗಾಯಿತ-ಕುಂಬಾರ	18. ಲಿಂಗಾಯಿತ-ಜಾಡರ	28. ಲಿಂಗಾಯಿತ-ಸಜ್ಜನ್
9. ಲಿಂಗಾಯಿತ-ಕುರುಬ	19. ಲಿಂಗಾಯಿತ-ಅಕ್ಕಸಾಲಿ	29. ಲಿಂಗಾಯಿತ-ಬಳೆಗಾರ
10. ಲಿಂಗಾಯಿತ-ಉಪ್ಪಾರ	20. ಲಿಂಗಾಯಿತ-ಕಮ್ಮಾರ	30. ಲಿಂಗಾಯಿತ-ಬಣಗಾರ

ಆದ್ದರಿಂದ ಇವರು ತಮ್ಮ ಪಂಗಡದ ಹೆಸರಿನ ಹಿಂದೆ ಈ ಮೇಲಿನ ಜಜಲಿಂಗಾಯಿತಟಟ ಎಂದು ಸೇರಿಸಿದರೂ ಸಹ ಮೇಲಿನ ಸರ್ಕಾರಿ ಆಜ್ಞೆಗಳ ಪ್ರಕಾರ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಎಲ್ಲಾ ಮೀಸಲಾತಿ ಸೌಲಭ್ಯಗಳು ದೊರಕುತ್ತವೆ. ಇನ್ನು ಮುಂದೆ ಈ ಬಗ್ಗೆ ಯಾವ ಆತಂಕವೂ ಇರುವುದಿಲ್ಲ.

ವೀರಶೈವ ಪದವನ್ನು ಕೃತಕವಾಗಿ ಪ್ರಚಾರ ಮಾಡಿ, ಸಮೂಹ ಸನ್ನಿಯ ಮನೋಭಾವ ಉಂಟುಮಾಡಲು ವೀರಶೈವ ಮಹಾಸಭೆ ತುತ್ತೂರಿ ಊದುತ್ತಿದೆ. ಆದರೆ ರಾಜ್ಯ ಮತ್ತು ಕೇಂದ್ರ ಸರ್ಕಾರಗಳು, ಧರ್ಮದ ಹೆಸರು ಲಿಂಗಾಯತ ಎಂದು ಬರೆದು ಮುಂದೆ ಒಳಗಿನ ಉಪಜಾತಿಗಳನ್ನು ಕಾಣಿಸಿರುವುದನ್ನು ಗಮನಿಸಬಹುದು.

ಬಾಗಲ ಕೋಟೆಯಲ್ಲಿ ನಗರಾಭಿವೃದ್ಧಿ ಪ್ರಾಧಿಕಾರದಿಂದ ನಿವೇಶನ

ಬಾಗಲಕೋಟೆಯ ನವನಗರದಲ್ಲಿ ಕೂಡಲ ಸಂಗಮದ ಬಸವ ಧರ್ಮ ಪೀಠದ ಅಂಗ ಸಂಸ್ಥೆಯಾದ ಬಾಗಲಕೋಟೆ ರಾಷ್ಟ್ರೀಯ ಬಸವ ದಳಕ್ಕೆ 50X90 ಅಡಿ ಅಳತೆಯ ನಿವೇಶನ ಲಭ್ಯವಾಗಿದ್ದು, ಅಧಿಕೃತ ನೋಂದಣಿ ಸಹ ಆಗಿದೆ. ಅಲ್ಲಿ ಬಸವ ಮಂಟಪ ಕಟ್ಟಲು ಶರಣ ಬಂಧುಗಳು ಸಿದ್ಧತೆ ನಡೆಸಿದ್ದಾರೆ.

- ವರದಿ : ಡಿ. ಬಿ. ಗೌಡರ್

ಕಲ್ಯಾಣ ಪರ್ವದ ಮಹತಿ

– ಬಸವ ಕಂದ

ಕಲ್ಯಾಣ ಕಲ್ಯಾಣ ಬಸವಕಲ್ಯಾಣ
ವಿಶ್ವಕಲ್ಯಾಣ, ಆತ್ಮಕಲ್ಯಾಣ, ಬಸವಕಲ್ಯಾಣ
ಕಲ್ಯಾಣ ಕಲ್ಯಾಣ ಆ..ಆ..ಆ...ನೋಡು ಬಾ ನೋಡು ಬಾ ಕಲ್ಯಾಣ
ಕಣ್ಣಾರೆ ನೋಡು ಬಾ ಬಸವಕಲ್ಯಾಣ, ಭಕ್ತಿ ಕಲ್ಯಾಣ
ಧರ್ಮಪಿತ ಬಸವಣ್ಣ, ಚಿನುಮಯ ಜ್ಞಾನಿ ಚೆನ್ನಬಸವಣ್ಣ
ಜಂಗಮಜ್ಯೋತಿ ಅಲ್ಲಮ ಪ್ರಭುದೇವ, ಶಿವಯೋಗಿ ಸಿದ್ಧರಾಮೇಶ
ಬೆಳಗಿದ ಬಸವ ಕಲ್ಯಾಣ ॥1॥
ಅಕ್ಕನಾಗಲಾಂಬಿಕೆ, ಚೆನ್ನಾರ ಚೆಲುವೆ ನೀಲಗಂಗಾಬಿಕೆ
ಉಡುತಡಿ ಮಹಾದೇವಿ, ಕಾಶ್ಮೀರದ ಬೊಂತಾದೇವಿ
ಬೆಳಗಿದ ಬಸವ ಕಲ್ಯಾಣ ॥2॥
ಆಯ್ದಕ್ಕಿ ಲಕ್ಕಮ್ಮ, ಮೋಳಿಗೆಯ ಮಹಾದೇವಮ್ಮ
ಹಡಪದ ಲಿಂಗಮ್ಮ, ಅಮುಗೆ ರಾಯಮ್ಮ, ಕೊಟ್ಟಣದ ಸೋಮಮ್ಮ
ಬೆಳಗಿದ ಬಸವ ಕಲ್ಯಾಣ ॥3॥
ಮಡಿವಾಳ ಮಾಚಯ್ಯ, ಅಂಬಿಗರ ಚೌಡಯ್ಯ
ಸಮಗಾರ ಹರಳಯ್ಯ, ಡೋಹಾರ ಕಕ್ಕಯ್ಯ, ಜೇಡರ ದಾಸಿಮಯ್ಯ
ಬೆಳಗಿದ ಬಸವ ಕಲ್ಯಾಣ ॥4॥
ಮೋಳಿಗೆ ಮಾರಯ್ಯ, ಮೇದಾರ ಕೇತಯ್ಯ, ಮಾದಾರ ಚೆನ್ನಯ್ಯ
ಆಯ್ದಕ್ಕಿ ಮಾರಯ್ಯ, ಹಿಡಿಹುಲ್ಲ ಬಂಕಯ್ಯ
ಬೆಳಗಿದ ಬಸವ ಕಲ್ಯಾಣ ॥5॥
ಹಡಪದ ಅಪ್ಪಣ, ರಾಯಸದ ಮಂಚಣ್ಣ
ಉರಿಲಿಂಗ ಪೆದ್ದಣ್ಣ ಇಂತಿವರೊಡಗೂಡಿ 770
ಅಮರಗಣಂಗಳು ಬೆಳಗಿದ ಕಲ್ಯಾಣ ॥6॥
ಬಸವ ಗುರುದೇವ ಕಟ್ಟಿದ ಕಲ್ಯಾಣ
ಅನುಭಾವ ಗೋಷ್ಠಿಯು ನಡೆದ ಕಲ್ಯಾಣ
ಜಾತಿ, ವರ್ಣ, ಲಿಂಗಭೇದ ತೊಡೆದ ಕಲ್ಯಾಣ
ಬಸವಾ ಬಸವಾ ಬಸವಾ ಎನ್ನುತ ಬೆಳಗಿದ ಕಲ್ಯಾಣ ॥7॥
ಬಸವ ಕಲ್ಯಾಣದಲ್ಲಿನ ಕಲ್ಯಾಣ ಪರ್ವವ
ಆದಿಶರಣರ ಜ್ಯೋತಿ ಬೆಳಗುವ ಕಲ್ಯಾಣ ಪರ್ವವ
ಸಚ್ಚಿದಾನಂದ ಸತಿ ಬಸವಾತ್ಮಜೆಯಿಂದಾಗುವ
ಬಸವ ಕಲ್ಯಾಣದಲ್ಲಿನ ಕಲ್ಯಾಣ ಪರ್ವವ ॥8॥

ಸರೋಜಮ್ಮ ನಾಗರಾಜ, ರಾ.ಬ.ದ. ಮೈಸೂರು.

ಬಸವ ಕಲ್ಯಾಣದಲ್ಲಿ ಬಸವ ತತ್ತ್ವ ತರಬೇತಿ ಕಮ್ಮಟ
2003 ರ ಏಪ್ರಿಲ್ 18 ರಿಂದ ಮೇ 2 ರವರೆಗೆ

ಮಡಿಕೆಯ ಮಾಡುವೊಡೆ ಮಣ್ಣೇ ಮೊದಲು
ತೊಡಿಗೆಯ ಮಾಡುವೊಡೆ ಹೊನ್ನೇ ಮೊದಲು
ಶಿವಪಥವರಿವೊಡೆ ಗುರುಪಥವೇ ಮೊದಲು
ನಮ್ಮ ಲಿಂಗದೇವರನರಿವೊಡೆ
ಶರಣರ ಸಂಗವೇ ಮೊದಲು. (ಬ.ವ.ದೀ. 68)

ಬಸವ ಧರ್ಮ ಪೀಠ ಮತ್ತು ವಿಶ್ವಕಲ್ಯಾಣ ಮಿಷನ್‌ಗಳ ಸಂಯುಕ್ತ ಆಶ್ರಯದಲ್ಲಿ ಪ್ರತಿವರ್ಷವೂ ಬೇಸಿಗೆಯ ರಜಾ ಕಾಲದಲ್ಲಿ ಮತ್ತು ಅಕ್ಟೋಬರ್ ರಜೆಯ ಕಾಲದಲ್ಲಿ ಬಸವ ತತ್ತ್ವ ತರಬೇತಿ ಕಮ್ಮಟವನ್ನು ನಡೆಸಿಕೊಂಡು ಬರಲಾಗುತ್ತಿದೆಯಷ್ಟೆ. 2002 ನೆಯ ಸಾಲಿನ ತರಬೇತಿ ಕಮ್ಮಟವನ್ನು ಬಸವ ಕಲ್ಯಾಣದ ಬಸವ ಮಹಾಮನೆಯ ಆವರಣದ ಶರಣ ಶೈಲದ ಮೇಲೆ ನಡೆಸಲಾಯಿತು. ತರಬೇತಿ ಕಮ್ಮಟವು ಅತ್ಯಂತ ಯಶಸ್ವಿಯಾಯಿತು. ಇದರಿಂದ ಪ್ರೇರಣೆಗೊಂಡ ಶರಣ ಬಂಧುಗಳು ಈ ವರ್ಷದ ಬೇಸಿಗೆ ರಜೆಯಲ್ಲೂ ಶಿಬಿರ ನಡೆಸಲು ಒತ್ತಾಯಿಸುತ್ತಿದ್ದಾರೆ. ಇದಕ್ಕಾಗಿ ತಾತ್ಕಾಲಿಕ ತಂಗುದಾಣಗಳನ್ನು ನಿರ್ಮಿಸಲಾಗುತ್ತದೆ. ಬೀದರ್, ಗುಲಬರ್ಗಾ ಜಿಲ್ಲೆಗಳವರಿಗೆ ಮಹಾರಾಷ್ಟ್ರದ ಸೊಲ್ಲಾಪುರ, ಉದಗೀರ್, ಆಂಧ್ರ ಪ್ರದೇಶದ ಹೈದ್ರಾಬಾದ್, ಜಹಿರಾಬಾದ್ ಮುಂತಾದ ಪ್ರದೇಶಗಳ ಮುಮುಕ್ಷುಗಳಿಗೆ ಭಾಗಿಗಳಾಗಲು ಸದವಕಾಶ ಕಲ್ಪಿಸಿ ಕೊಟ್ಟಂತೆ ಆಗುತ್ತದೆ. ಇದಲ್ಲದೆ ಬಸವ ಕಲ್ಯಾಣದ ಪವಿತ್ರ ಶರಣ ಭೂಮಿಯಲ್ಲಿದ್ದು ಅನುಷ್ಠಾನ ಮಾಡುವ ಸದವಕಾಶ ಎಲ್ಲ ಜನರಿಗೆ ಲಭ್ಯವಾಗುತ್ತದೆ. ತರಬೇತಿ ಕಮ್ಮಟಗಳಲ್ಲಿ ಪ್ರಾಯೋಗಿಕ ಶಿಕ್ಷಣವು ದೊರೆಯುವುದಲ್ಲದೆ ತಮ್ಮ ಸಂದೇಹಗಳಿಗೆ ಸೂಕ್ತ ಪರಿಹಾರ ಪಡೆದುಕೊಳ್ಳಲು ಅನುಕೂಲವಾಗುತ್ತದೆ.

1. ದಿನ ನಿತ್ಯ ಸಂಜೆ ಒಂದೊಂದು ವಿಷಯದ ಮೇಲೆ ಪ್ರವಚನ.
2. ಸುಪ್ರಭಾತದಲ್ಲಿ ಯೋಗಾಸನ, ಪ್ರಾಣಾಯಾಮ, ಧ್ಯಾನ, ಸಾಮೂಹಿಕ ಇಷ್ಟಲಿಂಗಾರ್ಚನೆ ಮತ್ತು ತ್ರಾಟಕಯೋಗ.
3. ವಚನ ಚಿಂತನೆ, ವಿಶ್ಲೇಷಣೆ, ವಚನ ಲೇಖನ ಮುಂತಾದವುಗಳ ಅಭ್ಯಾಸ ಜರುಗುತ್ತದೆ.
4. ಸಂಜೆಯ ವೇಳೆ ವಯೋಭೇದವಿಲ್ಲದೆ ಆಟೋಟಗಳಿರುತ್ತವೆ.
5. ರಾತ್ರಿ 9 ರಿಂದ ರಸ ಪ್ರಶ್ನೆ, ಸಾಂಸ್ಕೃತಿಕ ಕಾರ್ಯಕ್ರಮ.
6. ಆರೋಗ್ಯ ಭಾಗ್ಯ ಕುರಿತು ಉಪನ್ಯಾಸ, ನಿಸರ್ಗೋಪಚಾರ ಕುರಿತು ಮಾಹಿತಿ.
7. ಗೃಹ ಪ್ರವೇಶ, ವಿವಾಹ ವಿಧಿ, ಲಿಂಗಧಾರಣೆ, ನಾಮಕರಣ, ಶವ ಸಂಸ್ಕಾರ ಮುಂತಾದ ವಿಧಿ-ವಿಧಾನಗಳನ್ನು ನೆರವೇರಿಸುವ ಬಗ್ಗೆ ತರಬೇತಿ ನೀಡಲಾಗುವುದಲ್ಲದೆ ಕ್ರಿಯಾ ಮೂರ್ತಿ ದೀಕ್ಷೆಯನ್ನು ಸಹ ನೀಡಿ ತರಬೇತಿ ಹೊಂದಿದವರಗೆ ಮಾನ್ಯತಾ ಪತ್ರ (Certificate) ಕೊಡಲಾಗುವುದು.

ಬಸವ ಧರ್ಮ ಪೀಠಾಧ್ಯಕ್ಷೆ ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಮಾತೆ ಮಹಾದೇವಿಯವರ ದಿವ್ಯ ಸನ್ನಿಧಿ ಹಾಗೂ ಮಾರ್ಗದರ್ಶನದಲ್ಲಿ ನಡೆಯುವ ಈ ತರಬೇತಿ ಕಮ್ಮಟದಲ್ಲಿ ಅಲ್ಲಮಪ್ರಭು ಶೂನ್ಯ ಪೀಠಾಧೀಶರಾದ ಪೂಜ್ಯ ಶ್ರೀ ಜಗದ್ಗುರು ಅಲ್ಲಮಪ್ರಭು ಸ್ವಾಮಿಗಳು, ಪೂಜ್ಯ ಶ್ರೀ ಚನ್ನಬಸವರಾಜ ಸ್ವಾಮಿಗಳು, ಪೂಜ್ಯ ಶ್ರೀ ಬಸವ ಕುಮಾರ ಸ್ವಾಮಿಗಳು, ಪೂಜ್ಯ ಶ್ರೀ ಸಿದ್ಧರಾಮೇಶ್ವರ ಸ್ವಾಮಿಗಳು, ಪೂಜ್ಯ ಶ್ರೀ ಚನ್ನಬಸವಾನಂದ ಸ್ವಾಮಿಗಳು, ಶರಣ. ವೀರಣ್ಣ ಕೊರ್ಲ್ಹಳ್ಳಿ ಮುಂತಾದವರು ಭಾಗವಹಿಸಿ ತರಬೇತಿ ನೀಡಲಿರುವರು.

ಶಿಬಿರ ಶುಲ್ಕ ವಿವರ

ದಿ. 18-4-2003 ರಿಂದ 2-5-2003 ರವರೆಗೆ 15 ದಿವಸಗಳ ಕಾಲ ನಡೆಯುವ ಶಿಬಿರ ಮತ್ತು ಕಲ್ಯಾಣ ಪರ್ವ ಶುಲ್ಕ ಒಬ್ಬರಿಗೆ 450 ರೂ. ವಿದ್ಯಾರ್ಥಿ – ವಿದ್ಯಾರ್ಥಿನಿಯರಿಗೆ ರಿಯಾಯಿತಿಯೊಡನೆ 300 ರೂಗಳು. ವಿದ್ಯಾರ್ಥಿಗಳಲ್ಲದಿದ್ದರೂ ಅಸಕ್ತರಾದ ಬಡವರಿಗೆ ಸಹ ರಿಯಾಯಿತಿಯೊಡನೆ 300 ರೂಗಳು.

<u>ಪರವಾನಗಿಯೊಡನೆ ಉಚಿತ ಅವಕಾಶ :</u> ಆರ್ಥಿಕವಾಗಿ ಬಹಳ ಹಿಂದುಳಿದಿದ್ದು ಧರ್ಮಪ್ರಚಾರ ಮತ್ತು ಸಂಘಟನೆ ಮಾಡುವ ಕಳಕಳಿಯುಳ್ಳವರು ಶಿಬಿರ ಶುಲ್ಕವನ್ನು ಕಟ್ಟಲು ಅಸಮರ್ಥರಾಗಿದ್ದರೆ ಅವರು ಮೊದಲೇ ಪತ್ರ ಬರೆದು ಉಚಿತವಾಗಿ ಭಾಗವಹಿಸಲು ಪರವಾನಗಿ ಪಡೆದುಕೊಳ್ಳಲು ಅವಕಾಶವಿದೆ. ಅಂಥವರು ಕೊಟ್ಟಿರುವ ವಿಳಾಸಗಳಿಗೆ ಪತ್ರ ಬರೆಯಬೇಕು. ಆಸಕ್ತರಾದ ಶಿಬಿರಾರ್ಥಿಗಳು ಬಡವರಿದ್ದರೆ ರಾಷ್ಟ್ರೀಯ ಬಸವ ದಳದವರು ಅವರ ಗಾಡಿ ಖರ್ಚು, ಶಿಬಿರ ಶುಲ್ಕ ಭರಿಸಿ ತರಬೇತಿಗೆ ಒಳ್ಳೆಯ ಕಾರ್ಯಕರ್ತರನ್ನು ಆಯ್ಕೆಮಾಡಿ ಕಳಿಸಬೇಕು.

1. ಶಿಬಿರಾರ್ಥಿಗಳು ಏಪ್ರಿಲ್ 17 ರ ಸಂಜೆಯೊಳಗೆ ಅಥವಾ 18 ನೇ ತಾರೀಖು 10 ಗಂಟೆಯೊಳಗೆ ಬಂದು ತಲುಪಬೇಕು.
2. ತಮ್ಮೊಡನೆ ಉಡುವ ಬಟ್ಟೆಗಳು, ಹಾಸುವ ಹಾಸಿಗೆ, ಹೊದ್ದಿಕೆ, ಸೊಳ್ಳೆಯ ಪರದೆ, ಊಟದ ತಟ್ಟೆ - ಲೋಟ, ಇಷ್ಟಲಿಂಗ ಪೂಜೆಯ ಸಾಮಗ್ರಿ, ಟಿಪ್ಪಣಿ ಬರೆದುಕೊಳ್ಳಲು ಪುಸ್ತಕ, ಪೆನ್ನು ತಂದಿರಬೇಕು.
3. ಕಲ್ಯಾಣ ಪರ್ವದ ಪೂರ್ವಭಾವಿ ಸಿದ್ದತೆಯ ಸೇವಾ ಕಾರ್ಯದಲ್ಲಿ ತೊಡಗುವ ಭೃತ್ಯಾಚಾರಿಗಳು(ಸ್ವಯಂ ಸೇವಕರು) ಬೆಳಿಗ್ಗೆ ಮತ್ತು ರಾತ್ರಿ ಯೋಗಾಸನ, ಪೂಜೆ, ಪ್ರವಚನಗಳಲ್ಲಿ ಭಾಗವಹಿಸಿ ಉಳಿದ ಸಮಯದಲ್ಲಿ ಸೇವಾಕಾರ್ಯ ಮಾಡುವುದರಿಂದ ಅವರಿಗೆ ತರಬೇತಿ ಕಮ್ಮಟದಲ್ಲಿ ಉಚಿತ ಪ್ರವೇಶವಿದೆ. ಈ ಅವಕಾಶದ ಸದುಪಯೋಗ ಪಡಿಸಿಕೊಳ್ಳಲು ಸ್ವಯಂ ಸೇವಕರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಬೇಕಾಗಿ ಸೂಚನೆ. ಪ್ರಾಥಮಿಕ ಶಾಲಾ ಹಂತದಿಂದ ಯಾವುದೇ ವಯಸ್ಸಿನ ವಿದ್ಯಾರ್ಥಿಗಳು ತರಬೇತಿ ಕಮ್ಮಟದ ಸದುಪಯೋಗ ಮಾಡಿಕೊಳ್ಳಬಹುದು.

ದಾನಿಗಳು ಮತ್ತು ರಾಷ್ಟ್ರೀಯ ಬಸವ ದಳಗಳವರಲ್ಲಿ ಕೋರಿಕೆ

ಬಸವ ಕಲ್ಯಾಣದ ಬಸವ ಮಹಾಮನೆ ಆವರಣದಲ್ಲಿ ಇನ್ನೂ ಕಾಯಂ ವಸತಿ ಗೃಹ ಆಗಿಲ್ಲದೆ ಇರುವುದರಿಂದ ತಾತ್ಕಾಲಿಕವಾದ ತಂಗುದಾಣಗಳನ್ನು ನಿರ್ಮಿಸಬೇಕಾಗುತ್ತದೆ. ಕೂಡಲ ಸಂಗಮದಲ್ಲಿ ಸಾಕಷ್ಟು ಕಟ್ಟಡಗಳು ನಿರ್ಮಾಣವಾಗಿವೆ. ಆದೇ ರೀತಿ ಬೆಂಗಳೂರಿನ ಬಸವ ಗಂಗೋತ್ರಿಯಲ್ಲಿ ಸಾಕಷ್ಟು ಕಟ್ಟಡಗಳಿವೆ, ಮೇಲಾಗಿ ಧಾರ್ಮಿಕ ಕಾರ್ಯಕ್ರಮಕ್ಕೆ ಅನೇಕ ದಾನಿಗಳು ಧನ ಸಹಾಯ ಮಾಡುವುದೇ ಅಲ್ಲದೆ ತರಕಾರಿ, ದವಸ-ಧಾನ್ಯಗಳನ್ನು ಉಚಿತವಾಗಿ ಕೊಡುವರು. ಆದರೆ ಬೀದರ್-ಗುಲಬರ್ಗಾ-ಹೈದರಾಬಾದ್, ಉದ್ಗೀರ್ ಜನರು ಬಸವ ಕಲ್ಯಾಣದಲ್ಲಿ ಶಿಬಿರ ನಡೆಸಬೇಕೆಂದು ಆಗ್ರಹ ಪೂರ್ವಕವಾಗಿ ಒತ್ತಾಯಿಸುತ್ತಿದ್ದಾರೆ. ಆದ್ದರಿಂದ ದಾನಿಗಳು ಉದಾರವಾದ ಕಾಣಿಕೆಯನ್ನು ಧನ ರೂಪದಲ್ಲಿ, ವಸ್ತುಗಳ ರೂಪದಲ್ಲಿ ಕೊಡುವ ಔದಾರ್ಯ ತೋರಬೇಕು. ಈಗಾಗಲೇ ನಮ್ಮ ಅನುಭವದಂತೆ ಆರ್ಥಿಕವಾಗಿ ದುರ್ಬಲರಾಗಿರುವ ಯುವಕ-ಯುವತಿಯರು ಧರ್ಮ ಪ್ರಚಾರ, ಸಮಾಜ ಸಂಘಟನೆ ಮಾಡುವ ಹಂಬಲದಿಂದ ದುಡಿಯಲು ಉತ್ಸುಕರಾಗಿ ಶಿಬಿರಗಳಲ್ಲಿ ಉಚಿತವಾಗಿ ಭಾಗವಹಿಸುವ ಅಪೇಕ್ಷೆಯನ್ನು ವ್ಯಕ್ತಪಡಿಸುತ್ತಾರೆ. ಅಂಥವರಿಗೆ ಪ್ರವೇಶ ನಿರಾಕರಿಸಲು ನಮಗೆ ಮನಸ್ಸು ಬರದು. ಆದ್ದರಿಂದ ವಿವಿಧ ರಾಷ್ಟ್ರೀಯ ಬಸವ ದಳಗಳವರು ಹಣವನ್ನು, ದವಸ - ಧಾನ್ಯವನ್ನು ಸಂಗ್ರಹಿಸಿ ಕೊಡುವ ಪ್ರಯತ್ನ ಮಾಡಬೇಕು.

ಬೆಳಿಗ್ಗೆ ಉಪಾಹಾರ, ಮಧ್ಯಾಹ್ನ ಪ್ರಸಾದ (ಊಟ), ಸಂಜೆ ಚಹಾ - ಕಷಾಯ, ರಾತ್ರಿ ಊಟ - ಹೀಗೆ ಕೊಡಲಾಗುವುದು. ಒಬ್ಬೊಬ್ಬ ದಾನಿಗಳು ಒಂದು ಹೊತ್ತಿನ ಪ್ರಸಾದ ಸಿದ್ಧಪಡಿಸಲೂ ಕಾಣಿಕೆ ನೀಡಬಹುದು. ಸದ್ಯ ಆರ್ಥಿಕವಾಗಿ ನಮಗೆ ಬಹಳ ಸಂಕಷ್ಟವಿರುವುದಾದರೂ ತರಬೇತಿ ತೀರಾ ಅಗತ್ಯವಿದೆ ಎಂಬ ಕಾರಣಕ್ಕೆ ನಾವು ಕಮ್ಮಟವನ್ನು ಹಮ್ಮಿಕೊಳ್ಳುತ್ತಿದ್ದೇವೆ. ಆದ ಕಾರಣ ಶರಣ ಬಂಧುಗಳು ಸಹಕರಿಸಬೇಕು.

ಸಂಪರ್ಕಿಸುವ ವಿಳಾಸಗಳು :

ಬೆಂಗಳೂರು ವಿಳಾಸ :
ಕಲ್ಯಾಣ ಪರ್ವ ಉತ್ಸವ ಸಮಿತಿ
ಬಸವ ಮಂಟಪ, 2035, 2ನೇ ಬ್ಲಾಕ್
ರಾಜಾಜಿನಗರ, ಬೆಂಗಳೂರು-560010
☎ : 080-3325335/3322790

ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿ
ಕಾರ್ಯಾಧ್ಯಕ್ಷೆ, ಕಲ್ಯಾಣ ಪರ್ವ ಉತ್ಸವ ಸಮಿತಿ
ಬಸವ ಕಲ್ಯಾಣ-585 327
ತಾ-ಬಸವಕಲ್ಯಾಣ, ಜಿ-ಬೀದರ್
☎ : 0848-651921/652856

ಬಸವ ತತ್ತ್ವ ತರಬೇತಿ ಕಮ್ಮಟ

ಬಸವ ತತ್ತ್ವ ತರಬೇತಿ ಕಮ್ಮಟವು ದಿ. 18-4-2003 ರಿಂದ ಪ್ರಾರಂಭವಾಗಿ ದಿ. 29-4-2003 ರವರೆಗೆ ನಡೆಯುವುದು. ಏಪ್ರಿಲ್ 30, ಮೇ 1 ಮತ್ತು 2 ರಂದು ಕಲ್ಯಾಣ ಪರ್ವ ಇರುವುದು. ಪೂರ್ಣಾವಧಿಯ ಕಾಲ ಶಿಬಿರದಲ್ಲಿ ಭಾಗವಹಿಸಲಾಗದಿದ್ದವರು, ತಮಗೆ ಎಷ್ಟು ಕಾಲ ಸಾಧ್ಯವೋ ಅಷ್ಟು ದಿನ ಭಾಗವಹಿಸಲು ಅವಕಾಶ ಮಾಡಿಕೊಡಲಾಗುವುದು. ಆದ್ದರಿಂದ ತಮಗೆ ಅನುಕೂಲವಾದ ದಿವಸ ಬಂದು ಕಮ್ಮಟಕ್ಕೆ ಸೇರ್ಪಡೆಯಾಗಬಹುದು.

ಕಾರ್ಯಕರ್ತರಿಗೆ ಸೂಚನೆ : ಕಲ್ಯಾಣ ಪರ್ವದ ಪೂರ್ವಭಾವಿ ಸಿದ್ಧತೆ ಮಾಡಲು ಬಹಳಷ್ಟು ಕಾರ್ಯಕರ್ತರು ಬೇಕು. ತನು-ಮನಗಳಿಂದ ಸೇವೆ ಸಲ್ಲಿಸಲು ಅಪೂರ್ವ ಅವಕಾಶವಿದೆ. ಪ್ರೌಢಶಾಲೆ, ಪಿ.ಯು.ಸಿ ಪರೀಕ್ಷೆ ಸಹ ಮುಗಿದಿರುತ್ತವೆ. ಶಿಬಿರದಲ್ಲಿ ಭಾಗಿಗಳಾಗಿ ತರಬೇತಿ ಹೊಂದಲು ಅವಕಾಶವಿದೆ. ಆದ್ದರಿಂದ ಸ್ವಯಂ ಸೇವಕರಾಗಿ ಕೆಲಸ ಮಾಡಲು ಬಯಸುವವರು ಆದಷ್ಟು ಬೇಗನೆ ಬಿಡುವು ಮಾಡಿಕೊಂಡು ಬರಬೇಕೆಂದು ಸೂಚಿಸುತ್ತೇವೆ.

ಸಾಂಸ್ಕೃತಿಕ ಕಾರ್ಯಕ್ರಮ, ತರಬೇತಿ ಮತ್ತು ಸ್ಪರ್ಧೆ : ಕಲ್ಯಾಣ ಪರ್ವಕ್ಕೆ ಪೂರ್ವಭಾವಿಯಾಗಿ ನಡೆಯುವ ತರಬೇತಿ ಕಮ್ಮಟದ ಸಮಯದಲ್ಲಿ ವಚನ ಗಾಯನ, ವಚನ ಕಂಠಪಾಠ, ಆಶುಭಾಷಣ, ರಸಪ್ರಶ್ನೆ ಸ್ಪರ್ಧೆಯಲ್ಲದೆ ಸಮೂಹ ನೃತ್ಯ, ಕೋಲಾಟದ ತರಬೇತಿ ನೀಡಲಾಗುವುದು.

– ಪೂಜ್ಯ ಶ್ರೀ ಚನ್ನಬಸವಾನಂದ ಸ್ವಾಮಿಗಳು

ಬಸವ ಕಲ್ಯಾಣದಲ್ಲಿ ಏಪ್ರಿಲ್ 30, ಮೇ 1 ಮತ್ತು 2 ರಂದು ನಡೆಯಲಿರುವ 2ನೆಯ ಕಲ್ಯಾಣ ಪರ್ವ
ಕಾರ್ಯಕ್ರಮದ ರೂಪುರೇಷೆ

1. ದಿ : 30-4-2003	ಕಲ್ಯಾಣ ಜ್ಯೋತಿ ಜ್ವಲನ	ಬೆಳಿಗ್ಗೆ 10-00
30-4-2003	ಕಲ್ಯಾಣ ಪರ್ವ ಉದ್ಘಾಟನೆ	ಬೆಳಿಗ್ಗೆ 10-30
30-4-2003	ಧರ್ಮಚಿಂತನ ಗೋಷ್ಠಿ	ಸಂಜೆ 5-00
2. ದಿ : 1-5-2003	ಶರಣರಿಗೆ ಶರಣಾರ್ಥಿ	ಬೆಳಿಗ್ಗೆ 10-30
1-5-2003	ಮಡಿವಾಳ ಮಾಚಿದೇವ ಜಯಂತಿ	ಸಂಜೆ 5-00
1-5-2003	ಸಾಂಸ್ಕೃತಿಕ ಕಾರ್ಯಕ್ರಮ	ರಾತ್ರಿ 9-00
3 ದಿ : 2-5-2003	ಶೂನ್ಯಪೀಠಾರೋಹಣದ ವಾರ್ಷಿಕೋತ್ಸವ ಮತ್ತು ಪೀಠಾಧೀಶರ ಸಂದೇಶ	ಬೆಳಿಗ್ಗೆ 10-30
2-5-2003	ಸಮಾರೋಪ ಸಮಾರಂಭ	ಬೆಳಿಗ್ಗೆ 10-30
2-5-2003	ಮೆರವಣಿಗೆ ಮತ್ತು ಪಥ ಸಂಚಲನ	ಮಧ್ಯಾಹ್ನ 4-00

ರಾಷ್ಟ್ರೀಯ ಬಸವ ದಳಗಳ ಪದಾಧಿಕಾರಿಗಳ ಸಭೆ ಸಂಜೆ 7-00 ಕ್ಕೆ.

ವಿಶೇಷ ಸೂಚನೆ: ದಿ. 2 ರಂದು ಪೀಠಾರೋಹಣ ವಾರ್ಷಿಕೋತ್ಸವ ಮತ್ತು ಸಮಾರೋಪ ಸಮಾರಂಭ ಪೂರೈಸಿ ಸಂಜೆ ಮೆರವಣಿಗೆ-ಪಥ ಸಂಚಲನ ಮುಗಿಯುತ್ತಲೇ ಮೇ 4ಕ್ಕೆ ಬಸವ ಜಯಂತಿ ಇರುವ ಕಾರಣ ಪರವೂರುಗಳಿಗೆ ಹೊರಡುವವರಿಗೆ ಅನುಮತಿಯುಂಟು..

★ ಕಲ್ಯಾಣ ಪರ್ವದ ಭಾವಚಿತ್ರ ಒಳಗೊಂಡು ಬರುವ ಕಾರಣ ಮೇ ಸಂಚಿಕೆ ತಡವಾಗಿ ಪೋಸ್ಟ್ ಆಗುವ ಸಂಭವವಿದೆ.

ಪೂಜ್ಯ ಮಾತಾಜಿಯವರ ವಿದೇಶ ಪ್ರವಾಸ, ವಿಳಾಸ ಕಳಿಸಲು ಕೋರಿಕೆ

ಬಸವ ತತ್ವ ಪ್ರಚಾರದ ಉದ್ದೇಶಕ್ಕಾಗಿ ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಮಾತೆ ಮಹಾದೇವಿಯವರನ್ನು ಅಮೆರಿಕಾದಲ್ಲಿ ಆರಂಭವಾಗಿರುವ ಸಂಸ್ಥೆ Universal Centre of Basava Philosophy ಆಹ್ವಾನಿಸಿದ್ದು, 2003 ನೆಯ ಇಸವಿಯ ಮೇ ತಿಂಗಳಲ್ಲಿ ಪೂಜ್ಯರು ಹೋಗುವ ಸಂಭವವಿದೆ. ಸಾಮಾನ್ಯವಾಗಿ ಆ ದೇಶದಲ್ಲಿ ಮೇ ತಿಂಗಳಿನಿಂದ ಸೆಪ್ಟಂಬರ್‌ವರೆಗೆ ಹವಾಮಾನವು ಅನುಕೂಲಕರವಾಗಿ ಇರುವುದರಿಂದ ಈ ಸಮಯದಲ್ಲಿ ವಿವಿಧ ಸ್ಥಳಗಳಲ್ಲಿ ಕಾರ್ಯಕ್ರಮ ಏರ್ಪಡಿಸಲು UCBP ಸಂಸ್ಥೆಯು ಆಶಿಸಿದೆ.

ಭಾರತದಲ್ಲಿರುವ ಲಿಂಗಾಯತ ಧರ್ಮೀಯರು ಮತ್ತು ಅಧ್ಯಾತ್ಮಿಕ ಆಸಕ್ತರು ಯು.ಎಸ್.ಎ ದಲ್ಲಿರುವ ತಮ್ಮ ತಮ್ಮ ಬಂಧು-ಮಿತ್ರರು, ಪರಿಚಿತರು ಮತ್ತು ಧಾರ್ಮಿಕ ಸಂಸ್ಥೆಗಳ ವಿಳಾಸಗಳನ್ನು ನಮ್ಮ ಬೆಂಗಳೂರಿನ ವಿಳಾಸಕ್ಕೆ ಕಳಿಸಿಕೊಡಬೇಕು ಮತ್ತು ತಮ್ಮ ಬಂಧು-ಮಿತ್ರರು, ಮಕ್ಕಳು, ಸೋದರರು, ಪರಿಚಿತರು, ಪರಿಚಿತ ಧಾರ್ಮಿಕ ಸಂಸ್ಥೆಗಳಿಗೆ ಈ ವಿಷಯವನ್ನು ಪತ್ರ ಮುಖೇನ ತಿಳಿಸಬೇಕು. ಏಕೆಂದರೆ ಪೂಜ್ಯರ ಕಾರ್ಯಕ್ರಮಗಳನ್ನು ಮನೆಗಳಲ್ಲಿ ಮಾತ್ರವಲ್ಲದೆ ಸಾರ್ವಜನಿಕ ಸ್ಥಳಗಳಲ್ಲಿ, ವಿಶ್ವವಿದ್ಯಾಲಯ ಮುಂತಾದ ಕಡೆಗಳಲ್ಲಿ ಸಂಯೋಜಿಸಲು ಸಂಸ್ಥೆಯು ಬಯಸಿದೆ. ಅಲ್ಲಿರುವ ಆಸಕ್ತರು ಕಾರ್ಯಕ್ರಮಗಳ ವಿವರ ತಿಳಿದರೆ ಸಮೀಪದ ಸ್ಥಳಗಳಿಗೆ ಬಂದು ಪೂಜ್ಯರ ದರ್ಶನ ಪಡೆಯಬಹುದು, ಉಪನ್ಯಾಸಗಳನ್ನು ಕೇಳಬಹುದು. ಬಿಡಿಬಿಡಿಯಾದ ಕುಟುಂಬಗಳಿದ್ದರೆ ಕಾರ್ಯಕ್ರಮವನ್ನು ಏರ್ಪಡಿಸಲು ಆಗದೆ ಇದ್ದರೂ ತಮ್ಮ ಮನೆಗಳಿಗೆ ಆಹ್ವಾನಿಸಬಹುದು. ಆದ್ದರಿಂದ ಅಲ್ಲಿ ನೆಲೆಸಿರುವ ಪರಿಚಿತರ ವಿಳಾಸಗಳನ್ನು ದೂರವಾಣಿ ಸಂಖ್ಯೆ ಸಹಿತವಾಗಿ ಬೆಂಗಳೂರಿನ ಬಸವ ಮಂಟಪಕ್ಕೆ ಆದಷ್ಟು ಬೇಗನೆ ಕಳಿಸಲು ಕೋರುತ್ತೇವೆ.

ಯುಸಿಬಿಪಿಯ ವಿಳಾಸವನ್ನು ಕೊಡಲಾಗಿದೆ. ಇದನ್ನು ಸಹ ನಿಮ್ಮ ಪರಿಚಿತರು, ಬಂಧು ಮಿತ್ರರಿಗೆ ಕಳಿಸಿ ಯುಸಿಬಿಪಿಯನ್ನು ಸಂಪರ್ಕಿಸಲು ಸೂಚಿಸಿ ಪತ್ರ ಬರೆಯಿರಿ. ಪೂಜ್ಯ ಮಾತಾಜಿಯವರು ಮೇ ತಿಂಗಳಿನಲ್ಲಿ ಕಲ್ಯಾಣ ಪರ್ವ ಕಾರ್ಯಕ್ರಮವಾದ ನಂತರ ಪ್ರಯಾಣ ಕೈಗೊಳ್ಳಲಿರುವ ಕಾರಣ ಯುಸಿಬಿಪಿಯು ಸಮಗ್ರವಾದ ಸಂಚಾರ ಮತ್ತು ಪ್ರಚಾರ ಕಾರ್ಯಕ್ರಮ ಹಾಕಿಕೊಳ್ಳಲಿದೆ. ಆದ್ದರಿಂದ ಕಾರ್ಯಕ್ರಮವನ್ನು ಏರ್ಪಡಿಸುವವರು, ತಮ್ಮ ಮನೆಗಳಿಗೆ ಆಹ್ವಾನಿಸುವವರು, ಸಮೀಪದ ಸ್ಥಳದಲ್ಲಿ ಕಾರ್ಯಕ್ರಮ ನಡೆದಾಗ ಉಪನ್ಯಾಸ ಕೇಳಲು ಬಯಸುವವರು ಅಲ್ಲಿಯ ವಿಳಾಸಕ್ಕಾಗಲೀ, ಇಲ್ಲಿಗಾಗಲೀ ಸಂಪರ್ಕಿಸಬಹುದು.

ವಿದೇಶ ಪ್ರವಾಸ ಸಹಾಯಾರ್ಥ ಕಾಣಿಕೆಗೆ ಕೋರಿಕೆ

ಪೂಜ್ಯ ಮಾತಾಜಿಯವರು ಮತ್ತು ಸಹಾಯಕರು ಹೋಗಬೇಕಾಗುವುದರಿಂದ ಪ್ರವಾಸದ ವೆಚ್ಚವು ಬಹಳ ಬರುತ್ತದೆ. ಬಸವ ಧರ್ಮ ಪೀಠ ಮತ್ತು ವಿಶ್ವಕಲ್ಯಾಣ ಮಿಷನ್ ಸಂಸ್ಥೆಗಳು ಬಹಳಷ್ಟು ಯೋಜನೆಗಳನ್ನು ಹಾಕಿಕೊಂಡಿರುವುದರಿಂದ ಹಣದ ಕೊರತೆಯನ್ನು ಎದುರಿಸುತ್ತಿವೆ. ಆದ್ದರಿಂದ ವಿದೇಶ ಪ್ರವಾಸದ ವೆಚ್ಚ ಭರಿಸಲು ಬಸವ ಭಕ್ತರು ಉದಾರವಾಗಿ ಸಹಾಯ ಮಾಡಲು ಕೋರುತ್ತೇವೆ.

ಕಲ್ಯಾಣ ಪರ್ವಕ್ಕೆ ಬರುವಾಗ ಪೂಜ್ಯ ಮಾತಾಜಿಯವರ ವಿದೇಶ ಪ್ರವಾಸಕ್ಕಾಗಿ ಎಂದು ನಿಮ್ಮ ಕಾಣಿಕೆಗಳನ್ನು ತಂದು ಸಲ್ಲಿಸಬಹುದು. ಈಗಿನಿಂದಲೇ ಕೊಡಬೇಕು ಎನ್ನುವವರು Basava Mahamane Charitable Trust, Bangalore ಎಂದು ಬ್ಯಾಂಕ್ ಡ್ರಾಫ್ಟ್‌ಗಳನ್ನು ತೆಗೆಸಿ ಬೆಂಗಳೂರು ವಿಳಾಸಕ್ಕೆ ಕಳಿಸಬಹುದು.

ಯುಸಿಬಿಪಿಯು ಅಮೆರಿಕಾದಲ್ಲಿ ಪೂಜ್ಯ ಮಾತಾಜಿಯವರು ಮತ್ತು ಸಹಾಯಕರು ಸಂಚರಿಸುವ, ವಸತಿ, ಊಟದ ವ್ಯವಸ್ಥೆಗಳನ್ನು ನೋಡಿಕೊಳ್ಳಲಿದೆ. ಹೋಗಿ ಬರುವ ವಿಮಾನ ವೆಚ್ಚವನ್ನು ನಮ್ಮ ಸಂಸ್ಥೆಗಳೇ ಭರಿಸಬೇಕಾಗಿದೆ. ಆದ್ದರಿಂದ ಸಹೃದಯರು ಉದಾರವಾಗಿ ದೇಣಿಗೆ ಸಲ್ಲಿಸಿ ಬಸವ ತತ್ವ ಪ್ರಚಾರ ಕಾರ್ಯದಲ್ಲಿ ನೆರವಾಗಬೇಕೆಂದು ಕೋರುತ್ತೇವೆ.

ಸಂಪರ್ಕಿಸುವ ವಿಳಾಸಗಳು :

1. ಪೂಜ್ಯ ಶ್ರೀ ಜಗದ್ಗುರು ಅಲ್ಲಮ ಪ್ರಭು ಸ್ವಾಮಿಗಳು
   ಬಸವ ಮಹಾಮನೆ ಚಾರಿಟಬಲ್ ಟ್ರಸ್ಟ್
   ಬಸವ ಮಂಟಪದ 2035, 20ನೇ ಮೇನ್
   2ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು-560010
   ದೂರವಾಣಿ ಸಂಖ್ಯೆ: 080-3325335/3322790
   E-Mail : matamahadevi@rediffmail.com
2. **Universal Centre of Basava Philosphy**
   P.O.Box-92243, Austin, Texas-78709-2243
   U.S.A., 001-512-301-2867
   E-Mail : basavacenter@yahoo.com
3. **Universal Centre of Basava Philosophy**
   3456, Valley Vista Drive
   San Jose, CA 95148., 001-408-2708120

ವಿದೇಶ ಪ್ರವಾಸ
ಕಾಣಿಕೆಗಾಗಿ ಆತ್ಮೀಯ ಬಿನ್ನಹ

- ಮಾತಾಜಿ

ಮೊದಲನೆಯ ಇಂಗ್ಲೆಡ್ ಪ್ರವಾಸವನ್ನು 1976 ರಲ್ಲಿ ಕೈಗೊಂಡೆನು. ಓರಿಯಂಟಲ್ ಮತ್ತು ಆಫ್ರಿಕನ್ ಸ್ಟಡೀಸ್ ವಿಭಾಗದ ಬ್ರಿಟಿಷ್ ವಿಶ್ವವಿದ್ಯಾಲಯಗಳ ಪ್ರವಾಚಕರ ಸಮ್ಮೇಳನದಲ್ಲಿ ಭಾಗವಹಿಸಿದ ನನ್ನ ಉಪನ್ಯಾಸದಿಂದ ಬಹಳ ಪ್ರಭಾವಿತರೂ ಮತ್ತು ಕುತೂಹಲಿತರೂ ಆದ ಲಂಡನ್ ವಿಶ್ವವಿದ್ಯಾನಿಲಯದ ಡಾ|| ಪ್ರೊ. ಪಿಯಾಟೋಗಾರ್ಸ್ಕಿ ಎಂಬ ರಷಿಯನ್ ವಿದ್ವಾಂಸರು ಮತ್ತು ಸಮ್ಮೇಳನದಲ್ಲಿ ಭಾಗಿಗಳಾಗಿದ್ದ ಕೇಂಬ್ರಿಡ್ಜ್ ವಿಶ್ವವಿದ್ಯಾಲಯದ ಡಾ|| ರಿಚರ್ಡ್ ಗಾಂಬ್ರಿಚ್ ನಾನು ಒಂದು ಪ್ರೌಢ ಪ್ರಬಂಧ ಬರೆಯಬೇಕೆಂದು ಅದಕ್ಕೆ ಬೇಕಾದ ಎಲ್ಲ ನೆರವು ನೀಡುವುದಾಗಿ ಹೇಳಿದರು. ಆಗ ನಾನು ಲಿಂಗಾಯತ ಸಮಾಜದ ಕೆಲವು ಪ್ರಮುಖರಿಗೆ ಸಲಹೆ ಕೇಳಿ ಪತ್ರ ಬರೆದೆ. ನಮ್ಮ ದೇಶದಲ್ಲೇ ಧರ್ಮಪ್ರಚಾರ ಮಾಡುವುದು ಅತ್ಯಗತ್ಯವಾಗಿದೆ. ದೀಪದ ಕೆಳಗೆ ಕತ್ತಲೆ ಎಂಬಂತೆ ಇಲ್ಲಿಯೇ ಲಿಂಗಾಯತರಲ್ಲಿ ಲಿಂಗಾಯತೇತರರಲ್ಲಿ ಈ ಧರ್ಮದ ಬಗ್ಗೆ ಅಜ್ಞಾನ ತುಂಬಿದೆ. ನೀವು ಅಲ್ಲಿ ಉಳಿಯುವುದು, ಅಧ್ಯಯನ ಮಾಡುವುದು ಬೇಡ ಎಂದು ಅನೇಕರು ಸಲಹೆ ನೀಡಿದರು.

ನಂತರ 1981 ರಲ್ಲಿ ಯು.ಎಸ್.ಎಯ ವೀರಶೈವ ಸಮಾಜ ಆಫ್ ನಾರ್ತ್ ಅಮೇರಿಕಾ ಸಂಸ್ಥೆಯ ಅಧ್ಯಕ್ಷರಾದ ಡಾ|| ಗಂಗಾಧರ ಕೋರಿ ಆಹ್ವಾನಿಸಿದರು. ವಾಷಿಂಗ್‌ಟನ್‌ದಲ್ಲಿ ನಡೆದ ಸಮ್ಮೇಳನದಲ್ಲಿ ಆ ವರ್ಷದ ವಿಶೇಷ ಅತಿಥಿಯಾಗಿ ಭಾಗವಹಿಸಿದ್ದಲ್ಲದೆ ಶ್ರೀ ಗಂಗಾಧರ್ ಕೋರಿ ಮತ್ತಿತರರು ಬಹಳ ಉತ್ತಮ ಮತ್ತು ವ್ಯಾಪಕವಾದ ಪ್ರವಾಸವನ್ನು ಏರ್ಪಡಿಸಿದರು. ಇದರಿಂದ ಹಲವಾರು ರಾಜ್ಯಗಳನ್ನು ಸಂದರ್ಶಿಸಿ ಉಪನ್ಯಾಸ, ದೀಕ್ಷೆ, ಟಿ. ವಿ. ಸಂದರ್ಶನ, ಅನೇಕ ಕಾಲೇಜುಗಳಲ್ಲಿ ಉಪನ್ಯಾಸ, ಥಿಯಾಸಫಿ ಸೊಸೈಟಿ, ಹಿಂದು ದೇವಾಲಯಗಳಲ್ಲಿ ಪ್ರವಚನ ಮಾಡಲು ಸಾಧ್ಯವಾಯಿತು. ಕೆನಾಡಾದ ಟೊರಾಂಟೋದಲ್ಲಿ ಸಹ ಉಪನ್ಯಾಸ ಮತ್ತು ಟಿ. ವಿ. ಸಂದರ್ಶನ ವಿಶೇಷವಾಗಿ ಆಯಿತು.


ಆಗಲೂ ಅನೇಕರು ಅಲ್ಲಿ ಕೇಂದ್ರಗಳನ್ನು ತೆರೆಯಿರಿ ಎಂದರು. ಇಲ್ಲಿ ಇನ್ನೂ ನಿರ್ವಹಿಸಬೇಕಾದ ಹಲವು ಜವಾಬ್ದಾರಿಗಳು ಇದ್ದುದರಿಂದ ಅಲ್ಲಿ ನೆಲೆಸಲು ಇಷ್ಟ ಪಡದೆ ವ್ಯಾಪಕವಾಗಿ ಧರ್ಮಪ್ರಚಾರ ಮಾಡಿ ಬಂದೆನು.

ಯೂನಿವರ್ಸಲ್ ಸೆಂಟರ್ ಆಫ್ ಬಸವಾ ಫಿಲಾಸಫಿ

ಸುಮಾರು ಮೂರು ವರ್ಷಗಳಿಂದಲೂ ಶ್ರೀ ಡಾ. ವೀರಪ್ಪನವರು, ಇಂಗ್ಲೆಂಡಿನ ಡಾ|| ಮಹಾದೇವಯ್ಯನವರು ನಮ್ಮನ್ನು ಆಹ್ವಾನಿಸುತ್ತಿದ್ದುದೇ ಅಲ್ಲದೆ ಒತ್ತಾಯಿಸುತ್ತಲೇ ಇದ್ದರು. ಶರಣೆ. ರೂಪಕಾ ಮಹಾಲಿಂಗಯ್ಯನವರು ಈಗ ಕಾರ್ಯಕ್ರಮದ ಸಂಯೋಜನೆ ಮಾಡಿಯೇ ಬಿಟ್ಟಿದ್ದಾರೆ. ಮಾತ್ರವಲ್ಲ ನಾವು ಆರಂಭಿಸಿ ಕೊಟ್ಟು ಬಂದರೆ ಅಲ್ಲಿ ಆ ಕೇಂದ್ರವನ್ನು ಮುನ್ನಡೆಸುವುದಾಗಿ ನಿಶ್ಚಯಿಸಿದ್ದಾರೆ. ಹೀಗಾಗಿ ಪ್ರವಾಸ ಕೈಗೊಳ್ಳುವ ನಿರ್ಧಾರ ಮಾಡಿಯಾಗಿದೆ. ಮೇ ತಿಂಗಳಿನಲ್ಲಿ ನಡೆಯಲಿರುವ ಕಲ್ಯಾಣಪರ್ವದ ಕಾರ್ಯಕ್ರಮ ಪೂರೈಸಿ ಮೇ ನಾಲ್ಕನೆಯ ವಾರದಲ್ಲಿ ಹೋಗುವ ರೀತಿ ಕಾರ್ಯಕ್ರಮವನ್ನು ರೂಪಿಸಲಾಗುತ್ತಿದೆ. ಪ್ರವಚನ ಪ್ರವಾಸವೇ ಅಲ್ಲದೆ ಕೆಲವೊಂದು ವಿದ್ವತ್ ಪೂರ್ಣ ಉಪನ್ಯಾಸಗಳನ್ನು ಮಾಡಿಸಲು ಶರಣೆ. ರೂಪಕ ಸಿದ್ಧತೆ ನಡೆಸಿದ್ದಾರೆ. ಅಲ್ಲಿ ಒಂದು ಟ್ರಸ್ಟ್ ಅನ್ನು ರಚಿಸಿ ಅದರ ವತಿಯಿಂದ ಸಾಹಿತ್ಯ ಭಾಷಾಂತರ ಮತ್ತು ಪ್ರಕಟಣಾ ಕಾರ್ಯವನ್ನು ನಾವು ಅಂದರೆ ನಾನು, ರೂಪಕ, ಡಾ|| ವೀರಪ್ಪ ಇನ್ನೂ ಕೆಲವರು ಸೇರಿ ಆಲೋಚಿಸಿದ್ದೇವೆ. ಈ ಸಲ ನಾನು, ನನ್ನೊಡನೆ ಮೂವರು ಹೋಗಲಿಕ್ಕೆ ರೂಪಕಾ ಅವರು ವ್ಯವಸ್ಥೆ ಮಾಡಿಸಿದ್ದಾರೆ. ಇಬ್ಬರು ಹೋಗಿ ಬರುವ ವೆಚ್ಚದ ವ್ಯವಸ್ಥೆಯನ್ನು ಅವರವರೇ ಮಾಡಿಕೊಳ್ಳುತ್ತಾರೆ. ಈಗ ನಾನು ಮತ್ತು ಓರ್ವ ಸಹಾಯಕಿಯ ವಿಮಾನದ ವೆಚ್ಚದ ವ್ಯವಸ್ಥೆ ಮಾಡಿಕೊಳ್ಳಬೇಕಾಗಿದೆ. ಆದ್ದರಿಂದ ಶರಣ ಬಂಧುಗಳ ನೆರವನ್ನು ಕೋರದೆ ಬೇರೆ ಮಾರ್ಗವಿಲ್ಲ. ಒಂದಾದ ಮೇಲೆ ಒಂದರಂತೆ ಬಹು ದೊಡ್ಡ ಜವಾಬ್ದಾರಿಗಳನ್ನು ನಮ್ಮ ಆರ್ಥಿಕ ಶಕ್ತಿಗೆ ಮೀರಿ ಕೈಗೊಳ್ಳುತ್ತಿರುವುದರಿಂದ ಅನಿವಾರ್ಯವಾಗಿ ನಮ್ಮ ಸುಖದುಃಖಗಳಲ್ಲಿ ಪಾಲುಗಾರರಾಗುತ್ತಿರುವ ಶರಣ ಬಂಧುಗಳ ನೆರವು ಕೋರಬೇಕಾಗುತ್ತಿದೆ.

'ಬಡದೇಶವಾದ ಭಾರತದಿಂದ ಶ್ರೀಮಂತರ ನಾಡಿಗೆ ಹೋಗಲು ನಾವು ಹಣ ಕೊಡಬೇಕೆ? ನೀವು ಕೇಳಬೇಕೇ ?' ಎಂಬ ಸಂದೇಹ ಭಾವ ಕೆಲವರಲ್ಲಿ ಮೂಡೀತು. ನಮ್ಮ ಮತ್ತು ಕಾರ್ಯಕ್ರಮ ಸಂಯೋಜಿಸಿದವರ ಸಂಕಲ್ಪ ಅಲ್ಲಿನ ದಾನಿಗಳಿಂದ ದೇಣಿಗೆ ಸಂಗ್ರಹಿಸಿ ಬಸವ ಕಲ್ಯಾಣದಲ್ಲಿ ನಿರ್ಮಾಣವಾಗುವ 63 ಅಡಿ ಎತ್ತರದ ಬಸವ ಪುತ್ಥಳಿಗೆ ಬಳಸಬೇಕು ಎಂಬುದೇ ಆಗಿದೆ. ಆದರೆ ಆರಂಭದ ದಿನಗಳಲ್ಲಿ ನಮ್ಮ ಧ್ಯೇಯೋದ್ದೇಶ ಮನವರಿಕೆ ಮಾಡುವ ತನಕ ನಮ್ಮ ಖರ್ಚಿನಿಂದಲೇ ವಿಮಾನಯಾನದ ವೆಚ್ಚವನ್ನು ಭರಿಸಬೇಕು ತಾನೆ ? ಪ್ರಯಾಣದ ಖರ್ಚಿನ ಜೊತೆಗೆ ಕೆಲವೊಂದು ಸಾಹಿತ್ಯವನ್ನು ನಾವು ಇಂಗ್ಲೀಷ್‌ನಲ್ಲಿ ಸಿದ್ಧಪಡಿಸಿಕೊಂಡು ಹೋಗಬೇಕಾಗಿದೆ. ಇದಕ್ಕೆ ಉಳಿದಿರುವುದು ಕೇವಲ ಏಪ್ರಿಲ್/ಮೇ ಎರಡು ತಿಂಗಳು ಮಾತ್ರ. ಈಗಾಗಲೇ ಶರಣ ಮೇಳಕ್ಕೆ ಬಂದಾಗ ಕೆಲವು ಶರಣರು ಕೊಟ್ಟಿದ್ದಾರೆ. ಓರ್ವ ಗುಪ್ತದಾನಿಯು 10,000 ರೂಗಳ ಡಿ.ಡಿ. ಕಳಿಸಿದ್ದಾರೆ. ಆದ್ದರಿಂದ ಅಂಚೆಯಲ್ಲಿ ಕಳಿಸುವವರು ಡಿ.ಡಿ. ತೆಗೆಸುವಾಗ 1. ವಿಶ್ವಕಲ್ಯಾಣ ಮಿಷನ್ ಅಥವಾ 2. ಬಸವ ಮಹಾಮನೆ ಚಾರಿಟಬಲ್ ಟ್ರಸ್ಟ್ ಅಥವಾ 3. ಜಗದ್ಗುರು ಮಾತೆ ಮಹಾದೇವಿ ಎಂದು ಬೆಂಗಳೂರಿಗೆ ಯಾವುದೇ ಬ್ಯಾಂಕಿನ ಡಿ.ಡಿ ತೆಗೆಸಿ ಬಸವ ಮಂಟಪದ ವಿಳಾಸಕ್ಕೆ ಕಳಿಸಬಹುದು, ಪ್ರವಚನಗಳಲ್ಲಿ ಕೊಡಬಹುದು, ಕಲ್ಯಾಣ ಪರ್ವಕ್ಕೆ ಬರುವಾಗ ತಂದುಕೊಡಬಹುದು. ಟಿಕೆಟ್ ತೆಗೆಸ ಬೇಕಾಗಿರುವುದರಿಂದ ಏಪ್ರಿಲ್ 30 ರ ಒಳಗೆ ಹಣವು ನಮ್ಮ ಕೈಸೇರಿದರೆ ಒಳ್ಳೆಯದಾಗುವುದು. ಸಂಪೂರ್ಣ ಸಹಕಾರ ನೀಡಿ ಧರ್ಮಪ್ರಚಾರಕ್ಕೆ ನೆರವಾಗುತ್ತೀರೆಂದು ನಂಬುತ್ತೇನೆ.

- ಮಾತಾಜಿ



ಗುಲಬರ್ಗಾ ನಗರಕ್ಕೆ ದಿ. 15-3-2003 ರಂದು ಆಗಮಿಸಿದ ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ ಅವರಿಗೆ ಭವ್ಯ ಸ್ವಾಗತ ಮತ್ತು ಮೆರವಣಿಗೆ



ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರ ವಿಶ್ವಧರ್ಮ ಪ್ರವಚನ ಕಾರ್ಯಕ್ರಮದ ಮುಕ್ತಾಯ ಸಮಾರಂಭ



ಗುಲಬರ್ಗಾದ ರಾಷ್ಟ್ರೀಯ ಬಸವ ದಳದ ಪದಾಧಿಕಾರಿಗಳು




ಅಖಿಲ ಭಾರತ ಶರಣಜ್ಯೋತಿ ಶರಣೆಯರ ಧರ್ಮ ಜಾಗೃತಿ ವೇದಿಕೆಯಿಂದ
ಪೂಜ್ಯ ಮಾತಾಜಿಯವರ ಭವ್ಯ ಮೆರವಣಿಗೆ



ಪೂಜ್ಯ ಮಾತಾದ್ವಯರ ಪಾದಕ್ಕೆ ನೀರೆರೆದು ಬರಮಾಡಿಕೊಳ್ಳುವ ಶರಣ ವೃಂದ




ತುಂಬಿದ ಕೊಡಗಳನ್ನು ನೆತ್ತಿಯ ಮೇಲೆ ಹೊತ್ತು ಆರತಿಯೊಡನೆ ಮೆರವಣಿಗೆಯಲ್ಲಿ ಸಾಗಿರುವ ಪರಂಜ್ಯೋತಿ ಹರಳಯ್ಯ ಸಮಾಜದ ಶರಣೆಯರು ಮತ್ತು ಬಾಲಕಿಯರು



ಸ್ವಾಗತ ಕಮಾನು ಕಟ್ಟಿ ಪೂಜ್ಯರನ್ನು ಸ್ವಾಗತಿಸುತ್ತಿರುವ ಹರಳಯ್ಯ ಸಮಾಜದ ಶರಣ ವೃಂದ




ಚಿಕ್ಕ ರೋಜಾದ ಮುಖ್ಯ ರಸ್ತೆಯಲ್ಲಿ ಸಾಗಿರುವ ಮೆರವಣಿಗೆ



ಸುಂದರವಾದ ಕುದುರೆಯನ್ನು ಕಟ್ಟಿ ಅಲಂಕರಿಸಲ್ಪಟ್ಟ ರಥದಲ್ಲಿ ಮಾತಾದ್ವಯರ ಮೆರವಣಿಗೆ




ವೇದಿಕೆಯ ಕಾರ್ಯದರ್ಶಿ ಶರಣ. ಶಿವಾನಂದ ಗೌಳಿ ಎಲ್ಲರನ್ನೂ ಸ್ವಾಗತಿಸುತ್ತಿದ್ದಾರೆ



ಕಾರ್ಯಕ್ರಮವನ್ನು ಉದ್ಘಾಟಿಸಿ ಭಾಷಣ ಮಾಡುತ್ತಿರುವ ಶರಣ. ಗುಂಡಪ್ಪ ಕೋರವಾರ



ಬಸವ ಧ್ವಜಾರೋಹಣ ಮಾಡಿದ ಜಿಲ್ಲಾ ಪೋಲೀಸ್ ವರಿಷ್ಠಾಧಿಕಾರಿ ಬಸವರಾಜ ಮಾಲಗತ್ತಿಯವರು ಭಾಷಣ ಮಾಡುತ್ತಿರುವುದು



ಪೂಜ್ಯ ಶ್ರೀ ಚನ್ನಬಸವರಾಜ ಸ್ವಾಮಿಗಳ ನೇತೃತ್ವದಲ್ಲಿ ಅಲ್ಲಮ ಪ್ರಭು ಜ್ಯೋತಿಯು ಶ್ರೀ ಅಲ್ಲಮ ಪ್ರಭುದೇವರಿಗೆ ದೀಕ್ಷಾ ಅನುಗ್ರಹವಾದ ಅನಿಮಿಷಯ್ಯ ಕೊಪ್ಪಲಿನಿಂದ ದಿ. 16-3-2003 ರಂದು ಹೊರಟ ಜ್ಯೋತಿಯನ್ನು ಬೀಳ್ಕೊಡುತ್ತಿರುವ ಗ್ರಾಮಸ್ಥರು



ಶರಣೆ. ಅಕ್ಕನಾಗಲಾಂಬಿಕೆಯ ಗದ್ದುಗೆಯನ್ನು ಸಂದರ್ಶಿಸಲು ಅಲ್ಲಮಪ್ರಭು ಜ್ಯೋತಿಯು ತರೀಕೆರೆಗ ಆಗಮಿಸಿದ್ದಾಗ ಪುರಸಭಾಧ್ಯಕ್ಷೆ ಶ್ರೀಮತಿ ಕಮಲಮ್ಮ ಜ್ಯೋತಿಯನ್ನು ನಗರಕ್ಕೆ ಸ್ವಾಗತಿದ್ದಾರೆ.



ಬೆಂಗಳೂರು ರಾಜಾಜಿನಗರಕ್ಕೆ ಆಗಮಿಸಿದ ಜ್ಯೋತಿಯೊಡನೆ ವಿವೇಕಾನಂದ ಪಾರ್ಕ್‌ವರೆಗೆ ಪಥ ಸಂಚಲನ




ರಾಜಾಜಿನಗರ ಮುಖ್ಯ ರಸ್ತೆಯಲ್ಲಿ ಪಥ ಸಂಚಲನ



ದಿ. 30-3-2003 ರಂದು ಬೆಂಗಳೂರಿಗೆ ಆಗಮಿಸಿದ ಅಲ್ಲಮಪ್ರಭು ಜ್ಯೋತಿಯನ್ನು ಪೂಜ್ಯ ಶ್ರೀ ಮಾತಾಜಿಯವರು ಮಾಲಾರ್ಪಣೆ ಮಾಡಿ ಸ್ವಾಗತಿಸುತ್ತಿದ್ದಾರೆ



ಪೂಜ್ಯ ಮಾತಾಜಿಯವರಿಂದ ವಿಶ್ವಗುರು ಬಸವಣ್ಣನವರಿಗೆ ಮತ್ತು ಜ್ಯೋತಿಗೆ ಆರತಿ



ಅಲ್ಲಮ ಪ್ರಭು ಜ್ಯೋತಿ ಸ್ವಾಗತ ಸಮಾರಂಭದ ಉದ್ಘಾಟನೆ ರಾಜ್ಯ ಸಭಾ ಸದಸ್ಯ
ಎಂ. ವಿ. ರಾಜಶೇಖರನ್ ಅವರಿಂದ



ಅತಿಥಿಗಳು : ಎಡದಿಂದ ಬಲಕ್ಕೆ, ಬೆಂಗಳೂರು ನಗರ ಪಾಲಿಕೆ ಉಪ ಆಯುಕ್ತ ಕೊಂಗವಾಡ, ನೆ.ಲ. ನರೇಂದ್ರ ಬಾಬು, ಎಂ.ವಿ. ರಾಜಶೇಖರನ್, ಪೂಜ್ಯ ಅಲ್ಲಮಪ್ರಭು ಸ್ವಾಮೀಜಿ, ಪೂಜ್ಯ ಚನ್ನಬಸವರಾಜ ಸ್ವಾಮೀಜಿ, ಲಿಂಗಾಯತ ಧರ್ಮ ಮಹಾಸಭಾಧ್ಯಕ್ಷ ಎನ್. ಪುಟ್ಟರುದ್ರ

ವೀರಶೈವ ಲಿಂಗಾಯತ ಬೇರೆ-ಬೇರೆ : ದಾಖಲೆಗಳು

ಇಂದ : ಶರಣ. ಎಂ. ಆರ್. ಪಂಪನಗೌಡ
ಶಾಸ್ತ್ರೀನಗರ, ಬಳ್ಳಾರಿ

ಪೂಜ ಮಾತಾಜಿಯವರಿಗೆ,

ವಿಷಯ : ವೀರಶೈವ-ಲಿಂಗಾಯತ ಬೇರೆ ಬೇರೆ ಎಂದು ಹೇಳುವ ದಾಖಲೆಗಳ ಕುರಿತು ಸ್ಪಷ್ಟೀಕರಣ.

ಉಲ್ಲೇಖ : ನನ್ನ ಪತ್ರ ದಿನಾಂಕ 7-2-03

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖದಲ್ಲಿ ನಮೂದಿಸಿದ ಪತ್ರದನ್ವಯ ನಾನು ತಮಗೆ ಕೆಲವು ದಾಖಲೆಗಳನ್ನು ಸಲ್ಲಿಸಿದ್ದೆ. ಅವು ಮುಟ್ಟಿದ ಬಗ್ಗೆ ಪತ್ರ ಬರೆಯಲು ವಿನ[illegible]ದ್ದೆ. ಅದೇ ವಿಷಯ ಮುಂದುವರಿದು ಹೇಳುವುದೇನೆಂದರೆ 1881 ರಿಂದ 1901 ರವರೆಗೆ ಇ[illegible]ರಿ[illegible] ಸೆನ್ಸಸ್-ಅಡಿಯಲ್ಲಿ ತಮಿಳು ದೇಶದ ಜಾತಿವಾರು ಕ್ರ.ಸಂ 3029-3096(64 ಜಾತಿಗಳು) ಲಿಂಗಾಯತದ ಉಪ ಜಾತಿಗಳು ಎಂದು ಗುರುತಿಸಲ್ಪಟ್ಟು ಕ್ರ.ಸಂ 3073 ಹಾಗೂ 3094 ರಲ್ಲಿ ಕೇವಲ ಎರಡು ಜಾತಿಗಳನ್ನು ಲಿಂಗಾಯತ-ವೀರಶೈವವೆಂದು ಗುರುತಿಸಿದ್ದಾರೆ. ಅದೇ ರೀತಿ ತೆಲುಗು ದೇಶದ ಜಾತಿಗಳಲ್ಲಿ ಕ್ರ.ಸಂ 4040-4066 ರವರೆಗೆ ಕ್ರ.ಸಂ. 4056, 4061 ರ ಜಾತಿಗಳನ್ನು ಲಿಂಗಾಯತ-ಜಂಗಮವೆಂದು ಗುರುತಿಸಿದ್ದಾರೆ. ಒಟ್ಟು 27 ತೆಲುಗು ಲಿಂಗಾಯತ ಜಾತಿಗಳಲ್ಲಿ ಕೇವಲ ಎರಡು ಜಾತಿಗಳನ್ನು ಲಿಂಗಾಯತ-ಜಂಗಮವೆಂದು ಗುರುತಿಸಿದ್ದಾರೆ. ಅದೇ ರೀತಿ ಕನ್ನಡ ದೇಶದ ಲಿಂಗಾಯತ ಜಾತಿಗಳಲ್ಲಿ 38 ಜಾತಿಗಳನ್ನು ಗುರುತಿಸಿ ಅದರಲ್ಲಿ 38 ನೇ ಜಾತಿಯನ್ನು ವೀರಶೈವ ಎಂದು ಗುರುತಿಸಿದ್ದಾರೆ. ಅಂದರೆ ತಮಿಳು 64 ಜಾತಿಗಳು, ತೆಲುಗು 27 ಜಾತಿಗಳು ಹಾಗೂ ಕನ್ನಡ ದೇಶದ 38 ಜಾತಿಗಳು ಹಾಗೂ ಮಲೆಯಾಳಿ ದೇಶದ 5 ಲಿಂಗಾಯತ ಜಾತಿಗಳ ಪೈಕಿ ಕೇವಲ ಮೂರು ಜಾತಿಗಳಿಗೆ ಲಿಂಗಾಯತ-ವೀರಶೈವವೆಂದೂ ಎರಡಕ್ಕೆ ಲಿಂಗಾಯತ-ಜಂಗಮವೆಂದು ಗುರುತಿಸಿದ್ದಾರೆ. ಅಂದರೆ 134 ಜಾತಿಗಳಿಗೆ ಲಿಂಗಾಯತ ದ ಉಪಜಾತಿಗಳೆಂದು ಗುರುತಿಸಿ ಅವುಗಳಲ್ಲಿ ಮೂರು ಜಾತಿಗಳನ್ನು ಮಾತ್ರ ಲಿಂಗಾಯತ-ವೀರಶೈವ ಎಂದು 2ನ್ನು ಲಿಂಗಾಯತ-ಜಂಗಮವೆಂದು ಗುರುತಿಸಿದ್ದಾರೆ. ಅಂದರೆ ಮುಖ್ಯ ಧರ್ಮ ಲಿಂಗಾಯತ ಎಂದು ಕರೆದು ಅದರಲ್ಲಿ ವೀರಶೈವರು ಹಾಗೂ ಜಂಗಮರನ್ನು ಒಂದು ಜಾತಿಯಾಗಿ ಗುರುತಿಸಿದ್ದಾರೆಯೇ ಹೊರತು ವೀರಶೈವ ರಲ್ಲಿ ಲಿಂಗಾಯತರನ್ನು ಸೇರಿಸಿಲ್ಲ. ಅಂದರೆ ಲಿಂಗಾಯತ ಎನ್ನುವ ಒಂದು ದೊಡ್ಡ ಸರ್ವೆ ನಂಬರ್ ತೆಗೆದುಕೊಂಡರೆ ಅದರಲ್ಲಿ ವೀರಶೈವ, ಜಂಗಮ ಎನ್ನುವ ಎರಡು ಹಿಸ್ಸಾ ನಂಬರಗಳು ಬರುತ್ತವೆ. ಆದರೆ ಬಹಳ ಜನರು ತಪ್ಪಾಗಿ ಭಾವಿಸಿದಂತೆ ವೀರಶೈವ ದಲ್ಲಿ ಲಿಂಗಾಯತ ಇಲ್ಲ! ಲಿಂಗಾಯತ ಎನ್ನುವ (134 ಜಾತಿಗಳು) 134 ಎಕರೆಯ ಹೊಲ ತೆಗೆದುಕೊಂಡರೆ ವೀರಶೈವವು ಕೇವಲ ಮೂರು ಹಿಸ್ಸಾ ನಂಬರ್‌ಗೆ ಸೀಮಿತವಾಗುತ್ತದೆ, ಜಂಗಮವು ಸಹಾ 2 ಹಿಸ್ಸಾ ನಂಬರ್‌ಗೆ ಸೀಮಿತವಾಗುತ್ತದೆ. ಇನ್ನೂ ಸರಿಯಾಗಿ ಹೇಳಬೇಕೆಂದರೆ ಲಿಂಗಾಯತ ಎನ್ನುವ ತಂದೆಗೆ 134 ಮಕ್ಕಳಿದ್ದು ಅದರಲ್ಲಿ 3 ಜನ ವೀರಶೈವರು 2 ಜನ ಜಂಗಮರು ಇದ್ದಾರೆಂದು ಉಳಿದ 129 ಮಕ್ಕಳೂ ಬೇರೆ ಬೇರೆ ಇದ್ದಾರೆಂದು

ಹೇಳಬಹುದು. ಇದಕ್ಕೆಲ್ಲ ದಾಖಲೆಗಳು ಎಂದರೆ Mythic Societyಯ ಪುಸ್ತಕ ಸಂಖ್ಯೆ 315-487 ನ್ನIND 1891-v2ಹಾಗೂp-309, 315-487IND-190/-V2/PEA; ಹಾಗೂ315-482-IND-1881-V4ದಲ್ಲಿ ಇವೆ. ಅದು ಬಿಟ್ಟು ವೀರಶೈವ ಹಾಗೂ ಲಿಂಗಾಯತವು ಸಮವೆಂದು ವಾದಿಸುವವರು ದಯವಿಟ್ಟು ತಿಳಿದುಕೊಳ್ಳಿ ಲಿಂಗಾಯತ ಧರ್ಮದ 134 ಮಕ್ಕಳ ತಂದೆಗೆ ವೀರಶೈವ - ಹಾಗೂ ಜಂಗಮ ವೆಂಬುವವು ಇಬ್ಬರು ಮಕ್ಕಳು ಮಾತ್ರ. ಅಂದರೆ ತಂದೆ ಯಾದ ಲಿಂಗಾಯತಕ್ಕೆ ಈ ಇಬ್ಬರು ಮಕ್ಕಳು ಮಾತ್ರ. ತಂದೆಗೆ ಮಕ್ಕಳು ಜನಿಸುತ್ತಾರೆಯೇ ಹೊರತು ಮಕ್ಕಳಿಗೆ ತಂದೆ ಜನಿಸುವುದಿಲ್ಲಾ. ಆದ್ದರಿಂದ ಪ್ರಾಜ್ಞರು ಇದನ್ನು ಅರಿಯುವುದೊಳಿತು. ಒಂದು ಬೃಹತ್ ಸಮಾಜದೊಳಗೆ ಸೇರ್ಪಡೆಯಾದ ಒಂದು ಪಂಗಡದ ಹೆಸರನ್ನು ಇಡೀ ಧರ್ಮಕ್ಕೆ ಅನ್ವಯಿಸುವುದು ಅನ್ಯಾಯ ಮತ್ತು ಅಪಚಾರ.

ಸಂಶೋಧನೆ : ವೀರಶೈವ-ವಚನ ಚಳುವಳಿಯ ತರುವಾಯದ ಸೃಷ್ಟಿ

★ ಡಾ|| ಎಂ. ಎಂ. ಕಲ್ಬುರ್ಗಿ, ವಿಶ್ರಾಂತ ಕುಲಪತಿಗಳು

ವೀರಶೈವ ಪದ ಷಟ್‌ಸ್ಥಲ ವಚನಗಳ ಯಾವುದೇ ಕಟ್ಟಿನಲ್ಲಿ ದೊರೆಯುವುದಿಲ್ಲ. ಲಿಂಗಾಯತವೇ ಹೆಚ್ಚಿನ ವಚನಗಳಲ್ಲಿ ಕಾಣಿಸಿಕೊಂಡಿದೆ. ಬಸವಣ್ಣನ ಸಮಕಾಲೀನರಾದ ಆಂಧ್ರಪ್ರದೇಶದ ಮಲ್ಲಿಕಾರ್ಜುನ ಪಂಡಿತಾರಾಧ್ಯರು ಹಾಗೂ 13 ನೇ ಶತಮಾನದ ಹರಿಹರ ರಾಘವಾಂಕರು ಇದನ್ನು ಬಳಸಿಲ್ಲ. ಇನ್ನೂ ಮುಖ್ಯ ಸಂಗತಿಯೆಂದರೆ ಬಸವಣ್ಣನ ತರುವಾಯದ ಧಾರ್ಮಿಕ ಧುರೀಣನಾದ ಕೆರೆಯ ಪದ್ಮರಸ, ಅವನ ಮಗ ಕುಮಾರ ಪದ್ಮರಸರು ಕೂಡ ತಪ್ಪಿಯೂ ಈ ಪದ ಬಳಸಿಲ್ಲ. ತೆಲುಗು ಕೃತಿ - ಬಸವ ಪುರಾಣದಲ್ಲಿ ವೀರ ಮಾಹೇಶ್ವರ ಎಂದಿದ್ದ ಸ್ಥಳದಲ್ಲಿ ಕನ್ನಡದ ಭೀಮಕವಿಯು ವೀರಶೈವ ಪದ ಬಳಸಿದುದು ಕರ್ನಾಟಕದಲ್ಲಿ ಮೊಟ್ಟಮೊದಲು ಅಧಿಕೃತವಾಗಿ ಕಾಣಿಸಿಕೊಳ್ಳುತ್ತದೆ. ಹೀಗಾಗಿ ತೆಲುಗು ಬಸವ ಪುರಾಣ ಮತ್ತು ಕನ್ನಡ ಬಸವ ಪುರಾಣ ಗಳ ಮಧ್ಯದಲ್ಲಿ ಎಂದೋ ಈ ಪದ ಸೇರಿದಂತಿದೆ. ಈ ಅವಧಿಯಲ್ಲಿಯೇ ಆಗಮಗಳ ಉತ್ತರ ಭಾಗವನ್ನು ಸೃಷ್ಟಿಸಿ, ಅಲ್ಲಿ ಈ ಪದವನ್ನು ಸೇರಿಸಿದಂತಿದೆ. ಮುಂದೆ 15ನೆಯ ಶತಮಾನವು ಈ ಪದದ ಬಳಕೆಯ ಸುಗ್ಗಿಯ ಕಾಲ. ಶರಣ ಸಿದ್ಧಾಂತಕ್ಕೆ ಆಗಮ ಪ್ರತಿಷ್ಠೆ ತಂದುಕೊಡಲು ಆಗ ಪ್ರಯತ್ನಿಸಲಾಯಿತು. ವೀರಶೈವ ಪದವನ್ನೊಳಗೊಂಡ ಕೃತಕ ವಚನಗಳನ್ನು ಸೃಷ್ಟಿಸಲಾಯಿತು. 16ನೆಯ ಶತಮಾನದಲ್ಲಿ ಈ ವೀರಶೈವ ಸಿದ್ಧಾಂತವು ಆಂಧ್ರದ ಮೂಲಕ ಕಲ್ಲೆ, ಗುಮ್ಮಾಳಪುರ, ಗುಬ್ಬಿ ಪ್ರದೇಶದಲ್ಲಿ ಕಾಲು ಚಾಚಿದ ಬಳಿಕ ಸಮೀಪದ ಶಿವಗಂಗೆ ಬೆಟ್ಟದಲ್ಲಿ ಚತುರಾಚಾರ್ಯರ(ಪಂಚಾಚಾರ್ಯರ) ಕಲ್ಪನೆ ಹುಟ್ಟಿಕೊಂಡಿತು. ರಾಜಾಶ್ರಯ ಬಯಸಿ ಕೆಳದಿ ರಾಜ್ಯವನ್ನು ಪ್ರವೇಶಿಸಿತು. ಸಿದ್ಧರಾಮನಂತೆ ತನ್ನ ಆಂಧ್ರ(ವೀರ)ಶೈವವನ್ನು ಶರಣ ಚಳುವಳಿಯಲ್ಲಿ ಲೀನಗೊಳಿಸಲು ಕಲ್ಯಾಣಕ್ಕೆ ಹೊರಟಿದ್ದ ಮಲ್ಲಿಕಾರ್ಜುನ ಪಂಡಿತಾರಾಧ್ಯರು, ನಡುದಾರಿಯಲ್ಲಿಯೇ ಬಸವಣ್ಣನ ನಿಧನವಾರ್ತೆ ಕೇಳಿ ತಮ್ಮ ನಾಡಿಗೆ ಮರಳಿದರು. ಒಂದು ವೇಳೆ ಬಸವಣ್ಣ 15 ದಿನ ತಡವಾಗಿ ನಿಧನಹೊಂದಿದ್ದರೆ ಈ ಪಂಚಾಚಾರ್ಯ ಕಲ್ಪನೆಯೇ ಹುಟ್ಟುತ್ತಿರಲಿಲ್ಲ. ವೀರಶೈವಾನಂದಚಂದ್ರಿಕೆ, ವೀರಶೈವಾಮೃತ ಪುರಾಣ ಮೊದಲಾದ ವೀರಶೈವ ಪದವನೊಳಗೊಂಡ ಶೀರ್ಷಿಕೆಯ ಕನ್ನಡ, ಸಂಸ್ಕೃತ ಗ್ರಂಥಗಳೇ 12ನೆಯ ಶತಮಾನದ

ತರುವಾಯದ ಕಾಲದವು. ಅದರಲ್ಲಿಯೂ ಕೆಳದಿ ರಾಜಾಶ್ರಯದಲ್ಲಿ ಹುಟ್ಟಿಕೊಂಡುದೇ ಈ ಶಬ್ದದ ಅರ್ವಾಚೀನತೆಗೆ ಸಾಕ್ಷಿಯಾಗಿದೆ. ಮುಂದೆ ಈ ಕಾಲ ಘಟ್ಟದಿಂದ ಕ್ರಮೇಣ ಉತ್ತರ ಕರ್ನಾಟಕವನ್ನು ಈ ಪದ ವ್ಯಾಪಿಸಿತು. ಭಾರತದಲ್ಲಿ ರೈಲು ಸಂಪರ್ಕ ಆರಂಭವಾದ ನಂತರ ಕಾಶಿಯಲ್ಲಿ ಸಂಸ್ಕೃತ, ವೇದಾಗಮ ಅಭ್ಯಾಸ ಮಾಡಿಬಂದವರು ಉತ್ತರ ಕರ್ನಾಟಕದ ಮಠಗಳಿಗೆ ಸ್ವಾಮಿಗಳಾಗಿ, ಪಾಠಶಾಲೆಗಳಿಗೆ ಶಾಸ್ತ್ರಿಗಳಾಗಿ ಲಿಂಗಾಯತಕ್ಕೆ ಬದಲು ವೀರಶೈವ ಪದವನ್ನು ಹೆಚ್ಚು ಬಳಸಲಾರಂಭಿಸಿದರು.

19 ನೆಯ ಶತಮಾನದ ಸುಮಾರಿಗೆ ಮೇಲು ಜಾತಿಯವರು ಲಿಂಗಾಯತರನ್ನು ಶೂದ್ರರೆಂದು ಅಸಡ್ಡೆ ಮಾಡಿದಾಗ ಇವರಿಗೆ ಶ್ರೇಷ್ಠತೆಯ ವ್ಯಸನ ಮತ್ತು ಪ್ರಾಚೀನತೆಯ ವ್ಯಸನಗಳು ಕಾಡುತ್ತಿದ್ದವು. ಆಗ ತಾವೂ ಲಿಂಗೀ ಬ್ರಾಹ್ಮಣರೆಂದು ವಾದಿಸತೊಡಗುವಲ್ಲಿ ವೀರಶೈವ ಪದ ಇನ್ನೂ ಹೆಚ್ಚು ಬಳಕೆಗೆ ಬಂದಿತು.

19 ನೆಯ ಶತಮಾನದ ಉತ್ತರಾರ್ಧದಿಂದ ಹುಟ್ಟುತ್ತ ಬಂದ ಬೆಳಗಾವಿಯ ಲಿಂಗಾಯತ ಬೋರ್ಡಿಂಗ(1867), ಧಾರವಾಡದ ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ(1883), ಬೆಂಗಳೂರಿನ ಲಿಂಗಾಯತ ಶಿಕ್ಷಣ ಸಂಸ್ಥೆ(1905), ಸೊಲ್ಲಾಪುರದ ಲಿಂಗಾಯತ ಅಸೋಶಿಯೇಶನ್(1907), ಬೆಳಗಾವಿಯ ಲಿಂಗಾಯತ ಎಜ್ಯುಕೇಶನ್ ಸೊಸೈಟಿ(19 6), ವಿಜಾಪುರ ಲಿಂಗಾಯತ ಡಿಸ್ಟ್ರಿಕ್ಟ್ ಅಸೋಸಿಯೇಶನ್ (1924)ಮುಂತಾದವುಗಳ ಹೆಸರಿನಲ್ಲಿ ಲಿಂಗಾಯತ ಪದವನ್ನೇ ಬಳಸಿದುದು ಗಮನಿಸಬೇಕಾದ ಸಂಗತಿಯಾಗಿದೆ. ಆದರೆ 1904ರಲ್ಲಿ ಶ್ರೀಮದ್ವೀರಶೈವ ಮಹಾಸಭೆ ಹುಟ್ಟಿ ಲಿಂಗಾಯತ ಪದವನ್ನು ಹಿಂದೆ ಹಾಕಿತು. ಇದರಿಂದ ಸಾಮಾಜಿಕವಾಗಿ ಮುನ್ನಡೆ ಸಾಧಿಸಿದರೂ ಸೈದ್ಧಾಂತಿಕವಾಗಿ ಹಿನ್ನಡೆ ಉಂಟಾಯಿತು.

ನಿರೂಪಕರು : ಚ.ವಿ. ಮುಳಗುಂದ, ಧಾರವಾಡ.

ಆಧಾರ : ಬಸವ ಮಾರ್ಗ, ಜನವರಿ-2003 ಸಂಚಿಕೆ ಪುಟ 9

ಗುಲಬರ್ಗಾದಲ್ಲಿ ಬಸವ ಧರ್ಮಪೀಠಕ್ಕೆ ನಿವೇಶನ ದಾನ

ದ್ವಿತೀಯ ಮಹಿಳಾ ಜಗದ್ಗುರು ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರು ದಿ. 23-1-2003 ರಂದು ಖೂಬಾ ಗಾರ್ಡನ್‌ದಲ್ಲಿ ಪ್ರವಚನ ಆರಂಭಿಸಿ, ದಿ. 14-3-2003 ರವರೆಗೆ ಅಮೋಘವಾಗಿ ಪ್ರವಚನ ನಡೆಸಿದರು. ದಿ. 15-3-2003 ಕ್ಕೆ ಆಗಮಿಸಿದ ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಮಾತೆ ಮಹಾದೇವಿಯವರು ದಿ. 20-3-2003 ರವರೆಗೆ ಪ್ರವಚನ ಮಾಡಿದರು. ಈ ಸಂದರ್ಭದಲ್ಲಿ ಗುಲಬರ್ಗಾ ಸಮೀಪದಲ್ಲಿರುವ ಕುಸನೂರಿನ ಶರಣ ಬಸವಂತರಾಯ ತೆಗ್ಗಿನಮನಿ ಅವರು ನೃಪತುಂಗ ಬಡಾವಣೆಯ ಪಕ್ಕದಲ್ಲಿರುವ ತಮ್ಮ ಸ್ವಂತ ಲೇಔಟಿನ ಒಂದು 60 X 40 ಅಡಿ ಅಳತೆಯ ನಿವೇಶನವನ್ನು ಕೂಡಲ ಸಂಗಮದ ಬಸವ ಧರ್ಮ ಪೀಠಕ್ಕೆ ದಾನವಾಗಿ ನೋಂದಣಿ ಮಾಡಿ ಕೊಟ್ಟಿದ್ದಾರೆ. ಶರಣ. ಬಸವಂತರಾಯ ತೆಗ್ಗಿನಮನಿ ಅವರಿಗೆ ಅವರ ಕುಟುಂಬ ಪರಿವಾರಕ್ಕೆ ಮಂತ್ರಪುರುಷ ಬಸವಣ್ಣನವರು ಆಯುರಾರೋಗ್ಯ ಭಾಗ್ಯ ಸಕಲ ಸಂಪದ ನೀಡಲೆಂದು ಹಾರೈಸುತ್ತೇವೆ.

ವಿಶೇಷ ಸೂಚನೆ : ಕಲ್ಯಾಣ ಕಿರಣದ ಏಪ್ರಿಲ್ ತಿಂಗಳಿನ ಈ ವಿಶೇಷ ಸಂಚಿಕೆಯನ್ನು ಕಲ್ಯಾಣ ಪರ್ವಕ್ಕೆ ಬರುವಾಗ ಜೊತೆಗೆ ಮರೆಯದೆ ತನ್ನಿರಿ.

ಬಸವ ಧರ್ಮಪೀಠದಿಂದ ಕೆಲವು ಆದೇಶಗಳು

1. 2003 ರ ಮೇ 4 ರಂದು 870 ನೆಯ ಬಸವ ಜಯಂತಿ ಉತ್ಸವವು ಒದಗಿ ಬಂದಿದೆ. ಅಂದು ಎಲ್ಲರೂ ಸುಪ್ರಭಾತದಲ್ಲಿಯೇ ಸ್ನಾನ-ಪೂಜೆ ಪೂರೈಸಿ, ಬಸವೇಶ್ವರ ಪೂಜಾವ್ರತ ಪೂರೈಸಿ, ಬೆಳಗಿನ ಉಪಾಹಾರ ಸ್ವೀಕರಿಸಿ ನಂತರ ಸಾರ್ವಜನಿಕ ಕಾರ್ಯಕ್ರಮದಲ್ಲಿ ಭಾಗವಹಿಸಬೇಕು.

2. ಮನೆ-ಮಠಗಳ ಮೇಲೆ ಷಟ್ಕೋನ, ಇಷ್ಟಲಿಂಗ ಸಹಿತ ಬಸವ ಲಿಂಗ ಮುದ್ರೆ ಇರುವ ಬಸವ ಧ್ವಜವನ್ನು ಬೆಳಿಗ್ಗೆಯೇ ಹಾರಿಸಬೇಕು.

3. ಮನೆಯ ಪಡಸಾಲೆ(ನಡುಮನೆ, ಹಾಲ್)ಯಲ್ಲಿ ಒಂದು ಮಂಟಪ ಕಟ್ಟಿ ಬಸವ ಭಾವಚಿತ್ರವನ್ನು ಅಲಂಕರಿಸಿ ಇಟ್ಟು, ಪೂಜಿಸಿರಬೇಕು.

4. ಸಾರ್ವಜನಿಕವಾಗಿ ತೊಟ್ಟಿಲು ಕಾರ್ಯಕ್ರಮ ಏರ್ಪಡಿಸಿ ತೊಟ್ಟಿಲಿನಲ್ಲಿ ವಿಶ್ವಗುರು ಬಸವಣ್ಣನವರ ಭಾವಚಿತ್ರ ಅಥವಾ ಮೂರ್ತಿ ಇಟ್ಟು ತೂಗಿ ಜೋಗುಳ ಹಾಡಿ, ಆರತಿ ಮಾಡಬೇಕು. ಮಕ್ಕಳು ಆಗದೆ ಇರುವವರು ಸಂಕಲ್ಪ ಮಾಡಿ ಅಂದು ಬಸವಣ್ಣನವರ ತೊಟ್ಟಿಲನ್ನು ತೂಗಬೇಕು. ಹುಟ್ಟಿದ ಮಗುವಿಗೆ ಧರ್ಮಪಿತ ಬಸವಣ್ಣನವರ ಹೆಸರನ್ನಿಡುವುದಾಗಿ ಮತ್ತು ಧರ್ಮಪಿತರ ಹೆಸರಿನಲ್ಲಿ ಕಾಣಿಕೆ ಸಲ್ಲಿಸುವುದಾಗಿ ಹರಸಿಕೊಂಡು ಅಂದು ಪೂಜಾವ್ರತ ಮಾಡಬೇಕು.

5. ದೀಪಾವಳಿ ದಿವಸ ಹೇಗೆ ದೀಪಗಳನ್ನು ಹಚ್ಚಿ ಮನೆಯ ತಲೆಬಾಗಿಲಲ್ಲಿ ಇಡುವರೋ ಹಾಗೆ, ಬಸವ ಜಯಂತಿಯಂದು ತಮ್ಮ ಮನೆಯ ತಲೆ ಬಾಗಿಲಲ್ಲಿ ಕನಿಷ್ಠ 6 ಎಣ್ಣೆ ದೀಪಗಳನ್ನು ಹಚ್ಚಬೇಕು.

6. ಉತ್ಸವ, ಮೆರವಣಿಗೆಗಳಲ್ಲಿ ಶ್ರದ್ಧೆಯಿಂದ ಭಾಗವಹಿಸಬೇಕು, ಉಪನ್ಯಾಸ ಕಾರ್ಯಕ್ರಮಗಳಲ್ಲಿ ಭಾಗವಹಿಸಬೇಕು.

ಮೆ 1, ಕಾಯಕದ ದಿನ ಶರಣರ ಸ್ಮರಣೆ

ಮೇ 1, ವಿಶ್ವಕಾಯಕದ ದಿವಸ. ಬಸವ ಕಲ್ಯಾಣದ ಕಲ್ಯಾಣ ಪರ್ವದಲ್ಲಿ ಅಂದು ಬೆಳಿಗ್ಗೆ 10-30 ರಿಂದ ಸಾಮೂಹಿಕ ಪ್ರಾರ್ಥನೆ ಮತ್ತು ಶರಣರಿಗೆ ಶರಣಾರ್ಥಿ. ಯಾರಿಗೆ ಕಲ್ಯಾಣ ಪರ್ವಕ್ಕೆ ಬರಲು ಆಗುವುದಿಲ್ಲವೋ ಅಂಥವರು ಬಸವ ಮಂಟಪ ಮತ್ತು ಇನ್ನಿತರ ಸಾಮೂಹಿಕ ಮಂದಿರಗಳಲ್ಲಿ ಪ್ರಾರ್ಥನೆ-ಶರಣ ಸ್ಮರಣೆ-ಪ್ರವಚನ ಮಾಡಬೇಕು, ಮಾಡಿಸಬೇಕು.

"ಶರಣರಿಗೆ ಶರಣಾರ್ಥಿ " ಎಂಬ ಶರಣರ ಸ್ಮರಣ ಗೀತೆಯು ಕಲ್ಯಾಣ ಕಿರಣದ ಜನವರಿ ಸಂಚಿಕೆಯಲ್ಲಿ ಪ್ರಕಟವಾಗಿದೆ ಗಮನಿಸಿರಿ. - ಬಸವಾತ್ಮಜೆ

ಪ್ರತಿ ವರ್ಷದ ಮೇ 1,2,3 ರಂದು ಕಲ್ಯಾಣ ಪರ್ವ ಇರುವುದು. ಈ ಸಲ ಬಸವ ಜಯಂತಿಯು ಮೇ 4 ಕ್ಕೆ ಬಂದಿರುವುದರಿಂದ ತಮ್ಮ ತಮ್ಮ ಊರುಗಳಲ್ಲಿ ಬಸವ ಜಯಂತಿ ಉತ್ಸವ ನಡೆಸಲು ಅನುಕೂಲವಾಗಲೆಂದು ಏಪ್ರಿಲ್ 30, ಮೇ 1 ಮತ್ತು 2 ಕ್ಕೆ ಕಲ್ಯಾಣ ಪರ್ವವನ್ನು ಏರ್ಪಡಿಸಲಾಗಿದೆ.

ಬೆಂಗಳೂರು ಬಸವ ಮಂಟಪದಲ್ಲಿ ಪ್ರತಿ ದೇವ(ಭಾನು)ವಾರ ನಡೆಯುವ ದಾಸೋಹಕ್ಕೆ 2,500 ರೂ. ಸಲ್ಲಿಸಿದವರು

ದಿನಾಂಕ	ಶರಣರುಗಳಾದ		
01-12-02	ಎಲ್. ಗುರು ಸ್ವಾಮಿ	09-02-03	ಮಲ್ಲೇಶ್ವರಿ ಮತ್ತು ಪುಟ್ಟಸಿದ್ದಪ್ಪ
08-12-02	ಸುನೀತಾ ಮತ್ತು ಕುಮಾರ್	16-02-03	ಎಸ್.ಪಿ.ಹಿರೇಮಠ
15-12-02	ಪುಷ್ಪಾ ಮತ್ತು ಸಿದ್ರಾಮಪ್ಪ ಪಾಟೀಲ	23-02-03	ರೇಖಾ ಗಂಗಯ್ಯ
22-12-02	ಸುನಿಲ ಪಾಟೀಲ	02-03-03	ಹೆಚ್.ಕೆ. ಹರೀಶ್

29-12-02 ಭಾರತಿ ಕೆಂಪಯ್ಯ ಮತ್ತು ಶಾಂತಾರಾಚಯ್ಯ ಹಿರೇಮಠ

05-01-03 ಆರತಿ ಮತ್ತು ಸಿದ್ದೇಶ

12-01-03 ಎಸ್. ಶಿವಕುಮಾರ್

19-01-03 ಬಸವರಾಜ ವಡಗಾಂವ

26-01-03 ಉಮೇಶ ಮತ್ತು ವಂದನಾ

02-02-03 ನಾಗರತ್ನಾ ಮತ್ತು ದಾಸೇಗೌಡ

09-03-03 ಶಂಕ್ರಪ್ಪ, ವಿಜಯನಗರ

16-03-03 ಡಾ|| ಅನಿತಾ ಮತ್ತು ಮಹಾಂತೇಶ್

23-03-03 ಪುಷ್ಪಾ ಮತ್ತು ಸಿದ್ರಾಮಪ್ಪ ಪಾಟೀಲ

30-03-03 ಸುಲೋಚನ ಎಚ್.ಮಲ್ಲೇಶ್

ಈ ಎಲ್ಲ ಧನ ದಾಸೋಹಿಗಳಿಗೆ ಸೃಷ್ಟಿಕರ್ತ ಲಿಂಗದೇವ ಧರ್ಮಕರ್ತ ಬಸವಣ್ಣನವರು ಆಯುರಾರೋಗ್ಯ ಭಾಗ್ಯ ಸಕಲ ಸಂಪತ್ತನ್ನು ಅನುಗ್ರಹಿಸಲೆಂದು ಹಾರೈಸುತ್ತೇವೆ.

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ

ಕಲ್ಯಾಣ ಪರ್ವದ ನಿಮಿತ್ತ ಜ್ಯೋತಿ ಯಾತ್ರೆ

ಬಸವ ಕಲ್ಯಾಣದಲ್ಲಿ ಏಪ್ರಿಲ್ 30, ಮೇ 1 ಮತ್ತು 2 ರಂದು ನಡೆಯಲಿರುವ 2ನೆಯ ಕಲ್ಯಾಣ ಪರ್ವದ ಪ್ರಚಾರಾರ್ಥವಾಗಿ ಅಲ್ಲಮಪ್ರಭು ಜ್ಯೋತಿ ಮತ್ತು ಬಸವ ಜ್ಯೋತಿಗಳು ಸಂಚಾರವನ್ನು ಆರಂಭಿಸಿವೆ. ಪೂಜ್ಯ ಶ್ರೀ ಚನ್ನಬಸವರಾಜ ಸ್ವಾಮಿಗಳ ನೇತೃತ್ವದಲ್ಲಿ ಅಲ್ಲಮಪ್ರಭು ಜ್ಯೋತಿಯು 16-3-2003 ರಂದು ಅನಿಮಿಷಯ್ಯನ ಕೊಪ್ಪಲಿನಿಂದ ಹೊರಟಿತು. ಇದು ಗುರು ಅನಿಮಿಷಯ್ಯನವರಿಂದ ಅಲ್ಲಮ ಪ್ರಭುಗಳಿಗೆ ದೀಕ್ಷೆಯಾದ ಸ್ಥಳ. ಅಲ್ಲಿಂದ ಸತ್ಯಕ್ಕನ ಜನ್ಮ ಸ್ಥಳ ಹಿರೇಜಂಬಗಿ, ಮುಕ್ತಾಯಕ್ಕನ ತೌರು ಮುತ್ತಗಿ, ಅಕ್ಕಮಹಾದೇವಿಯ ಉಡುತಡಿ, ಅಕ್ಕನಾಗಮ್ಮನ ಗದ್ದುಗೆಯಿರುವ ತರೀಕೆರೆ, ನುಲಿಯ ಚಂದಯ್ಯನ ಗದ್ದುಗೆಯಿರುವ ನಂದಿ-ಮುಂತಾಗಿ ಸಂದರ್ಶಿಸಿ ಅಲ್ಲಮಪ್ರಭು ಜ್ಯೋತಿಯು ದಿ. 30-3-2003 ರಂದು ಬೆಂಗಳೂರಿಗೆ ಆಗಮಿಸಿ ತನ್ನ ಸಂಚಾರವನ್ನು ಮುಂದುವರಿಸಿದೆ.

ಬಸವ ಜ್ಯೋತಿ

ಕೂಡಲ ಸಂಗಮದ ಬಸವೈಕ್ಯ ಮಂಟಪದಿಂದ ಬಸವ ಜ್ಯೋತಿಯು ಏಪ್ರಿಲ್ 3ರಂದು ಹೊರಟಿದ್ದು ಇದರ ನೇತೃತ್ವವನ್ನು ಪೂಜ್ಯ ಶ್ರೀ ಚನ್ನಬಸವಾನಂದ ಸ್ವಾಮಿಗಳು ವಹಿಸಿದ್ದಾರೆ. ಪೂಜ್ಯ ಶ್ರೀ ಬಸವ ಕುಮಾರ ಸ್ವಾಮಿಗಳ ದಿವ್ಯ ಸನ್ನಿಧಿಯಲ್ಲಿ ನಡೆದ ಸಮಾರಂಭದಲ್ಲಿ ಕೂಡಲ ಸಂಗಮದ ಜನತೆ ಜ್ಯೋತಿಯನ್ನು ಭಕ್ತಿಯಿಂದ ಬೀಳ್ಕೊಟ್ಟರು. ಬಾಗಲಕೋಟೆ, ಬಾದಾಮಿ, ರಾಮದುರ್ಗ, ಸಿರಸಂಗಿ, ಸವದತ್ತಿ, ಬೈಲಹೊಂಗಲ, ಬೆಳಗಾಂವ, ಗೋಕಾಕ್ ಮುಂತಾದ ಸ್ಥಳಗಳನ್ನು ಸಂದರ್ಶಿಸುತ್ತ ಜ್ಯೋತಿಯಾತ್ರೆಯು ಸಾಗಿದೆ.

ಬಾಗಲಕೋಟೆಯ ಹೌಸಿಂಗ್ ಬೋರ್ಡ್ ಕಾಲನಿಯಲ್ಲಿ ದಿ. 27-1-2003 ರಿಂದ ಪ್ರವಚನ ಮಾಡಿದ ಪೂಜ್ಯ ಶ್ರೀ ಬಸವ ಕುಮಾರ ಸ್ವಾಮಿಗಳು ಮುಕ್ತಾಯ ಸಮಾರಂಭಕ್ಕೆಕ ಪೂಜ್ಯ ಮಾತಾಜಿಯವರನ್ನು ಬರಮಾಡಿಕೊಂಡರು. ದಿ. 9-3-2003 ರಿಂದ ದಿ. 11-3-2003ರ ವರೆಗೆ ವಿಶೇಷ ಪ್ರವಚನವನ್ನು ಪೂಜ್ಯ ಮಾತಾಜಿ ನೀಡಿದರು. ಪೂಜ್ಯ ಶ್ರೀ ಬಸವ ಕುಮಾರ ಸ್ವಾಮಿಗಳು ದಿ. 13-3-2003 ರಂದು ಬಾಗಲಕೋಟೆಯ ವಿದ್ಯಾಗಿರಿಯಲ್ಲಿ ಪ್ರವಚನ ಆರಂಭಿಸಿದ್ದು, ದಿ. 15-4-2003 ರಂದು ಮಂಗಲ ಮಾಡುವರು. ಸುಕ್ಷೇತ್ರ ಅಥಣಿಯಿಂದ ಬಸವ ಜ್ಯೋತಿಯಾತ್ರೆಯನ್ನು ಪೂಜ್ಯ ಬಸವ ಕುಮಾರ ಸ್ವಾಮಿಗಳು ನಿರ್ವಹಿಸುವರು. ಈ ಜ್ಯೋತಿಗಳು ಉಳವಿಯನ್ನು, ಬಿಜನಳ್ಳಿಯನ್ನು, ಸೊಲ್ಲಾಪುರವನ್ನು ಸಂದರ್ಶಿಸಿ ಬಸವ ಕಲ್ಯಾಣಕ್ಕೆ ದಿ. 29-4-2003 ರಂದು ಆಗಮಿಸಲಿದೆ. ಜನರು ಭಕ್ತಿಪೂರ್ಣವಾಗಿ ಜ್ಯೋತಿಗಳನ್ನು ಸ್ವಾಗತಿಸಿ, ಬೀಳ್ಕೊಡುತ್ತಿದ್ದಾರೆ.

ಒಡಲ ಅವಸರವಲ್ಲ, ಒಡೆಯನ ಅವಸರ

ಕಳಕಳಿಯ ಕೋರಿಕೆ - ಮಾತಾಜಿ

ಬಸವ ಧರ್ಮ ಪೀಠದ ಅಭಿಮಾನಿಗಳಿಗೆ, ಬಸವ ಭಕ್ತರಿಗೆ ಬಹಳ ತೊಂದರೆ ಕೊಡುತ್ತಿದ್ದೇವೆಯೋ ಎಂಬ ಸಂಕೋಚ ನನ್ನನ್ನು ಬಹುವಾಗಿ ಕಾಡುತ್ತಿದೆ. ಆದರೆ ಅನಿವಾರ್ಯ ಎಂದು ಸಂತೈಸಿಕೊಳ್ಳುತ್ತೇನೆ: ಸಮಾಧಾನ ತಂದುಕೊಳ್ಳುತ್ತೇನೆ. ಈ ಭಾವ ಏಕೆ ಬಂದಿದೆ, ಬರುತ್ತಿದೆ ಎಂದರೆ ಆರಂಭಿಕ ಜೀವನದಲ್ಲಿ ನಮ್ಮ ಅಲ್ಪ ಆದಾಯಕ್ಕೆ ತಕ್ಕಂತೆ ಸೀಮಿತ ಕಾರ್ಯಕ್ರಮ, ಯೋಜನೆ ರೂಪಿಸುತ್ತಿದ್ದೆವು. ಹಣ ಬಂದಂತೆ ನಿಧಾನಗತಿಯಲ್ಲಿ ಒಂದೊಂದೇ ಯೋಜನೆ ಕೈಗೆ ಎತ್ತಿಕೊಳ್ಳುತ್ತಿದ್ದೆವು. ನಮ್ಮ ಶಕ್ತಿಗೆ ಮೀರಿದ ಮೊದಲನೆ ಯೋಜನೆ ಕ್ರಾಂತಿಯೋಗಿ ಬಸವಣ್ಣ ಚಲನಚಿತ್ರ ನಿರ್ಮಾಣ. ಬ್ಯಾಂಕಿನಲ್ಲಿ ಸಾಲ ಮಾಡಿ ಚಿತ್ರ ತೆಗೆದೆವು, ನಂತರ ಪ್ರವಚನ ಮಾಡಿ ಬ್ಯಾಂಕ್ ಸಾಲ ತೀರಿಸಿದೆವು. ಇಂದಿನ ದಿನಮಾನಗಳಲ್ಲಿ ಹಿಂಸೆ, ಅತ್ಯಾಚಾರಗಳ ಚಿತ್ರ ನೋಡುವ ಅಭಿರುಚಿ ಬೆಳೆಸಿಕೊಂಡ ಜನ ಧಾರ್ಮಿಕ ಸಂದೇಶದ ಚಿತ್ರ ನೋಡುವುದು ಕಷ್ಟ ಎಂದು ಗೊತ್ತಿದ್ದರೂ ಆ ಮಾಧ್ಯಮದ ಮೂಲಕ ಬಸವ ತತ್ತ್ವ ಸಂದೇಶ ಸಾರಲು ತೆಗೆದೆವು. ಇಂದೂ ಬಸವ ಜಯಂತಿ ಸಮಯದಲ್ಲಿ ವಿವಿಧ ದೂರದರ್ಶನಗಳವರು ಕ್ರಾಂತಿಯೋಗಿ ಬಸವಣ್ಣ ಚಲನ ಚಿತ್ರ ಪ್ರದರ್ಶಿಸಿದಾಗ, ಬೇರೆ ಬೇರೆ ಊರಿನ ಸಿಟಿ ಕೇಬಲ್‌ಗಳವರು ಬಸವ ಜಯಂತಿಯಂದು ಆ ಚಿತ್ರ ಪ್ರದರ್ಶಿಸಿದಾಗ ಮನಸ್ಸಿಗೆ ಅಪೂರ್ವ ಆನಂದ ಎನಿಸುತ್ತದೆ. ನಮ್ಮ ಶ್ರಮ ಸಾರ್ಥಕ ಎನ್ನಿಸುತ್ತದೆ.

ಕೂಡಲ ಸಂಗಮದ ಅಭಿವೃದ್ಧಿಗಾಗಿ ಮತ್ತೊಂದು ದೊಡ್ಡ ಹೆಜ್ಜೆ ಇಡಲಾಯಿತು. ಶರಣ ಮೇಳವು ವಿಸ್ತಾರಗೊಂಡಂತೆ ಅಗತ್ಯ ಬೀಳುವ ಜಮೀನನ್ನು ಖರೀದಿಸಿದ್ದು ಮಾತ್ರವಲ್ಲದೆ ಅಕ್ಕನಾಗಲಾಂಬಿಕಾ ಶರಣ ಧಾಮ ಮತ್ತು ಸರ್ವಜ್ಞ ಶರಣಧಾಮ ಕಟ್ಟಡ, ಬಸವ ಧ್ಯಾನ ಮಂಟಪ, ಮಹಾಮನೆ, ಗಣಲಿಂಗ ಮಂಟಪ ಕಟ್ಟಡ ನಿರ್ಮಾಣ ಇವೆಲ್ಲವು ಶಕ್ತಿಗೆ ಮೀರಿದ ಒಂದೊಂದು ಹೆಜ್ಜೆಗಳೆ! ಸರ್ಕಾರದ ನೆರವಿಲ್ಲದೆ ಕೇವಲ ಜನರು ಕೊಡುವ ಕಾಣಿಕೆಗಳಿಂದಲೇ ಕಟ್ಟುವುದು ಒಂದು ದುಸ್ಸಾಹಸ. ಏಕೋ ನಮಗೆ ಸರ್ಕಾರದ ನೆರವು ಕೇಳಲು, ಪಡೆಯಲು ಭಯ. ರಾಜಕಾರಣಿಗಳೆಂದರೆ ವಿಚಿತ್ರ ಮತ್ತು ಭಯಂಕರ ಮನಸ್ಸಿನ ಪ್ರಾಣಿಗಳು. ಅವರನ್ನು ಓಲೈಸುವುದೂ ಬೇಡ, ಅವರ ಒಲುಮೆಯೂ ಬೇಡ ಎನಿಸುತ್ತದೆ. ಬಗೆಬಗೆಯ ಸಹಾಯಧನ (grants) ಮತ್ತು ತಾಂತ್ರಿಕ, ವೃತ್ತಿ ಶಿಕ್ಷಣ ಕಾಲೇಜುಗಳ ಒಡೆಯರಾದ ಅನೇಕ ಮಠಾಧೀಶರು ರಾಜಕಾರಣಿಗಳೆಂಬ ರಿಂಗ್ ಮಾಸ್ಟರ್‌ಗಳ ಆಡಳಿತದ ಚಾಟಿಗೆ ಹೆದರಿ ಅವರು ಕುಳಿತುಕೊಳ್ಳಿ ಎಂದಲ್ಲಿ ಕುಳಿತು. ನಿಲ್ಲಿ ಎಂದಲ್ಲಿ ನಿಂತು, ಇ ್ಥಲ್ಲಿ ಬನ್ನಿ ಎಂದರೆ ಬಂದು, ಅಂಥಲ್ಲಿ ಹೋಗಲೇ ಬೇಕು ಎಂದರೆ ಹೋಗಿ, ದಯನೀಯ ಮುಖಭಾವದಿಂದ ಓಡಾಡುವ ಖಿನ್ನ ಮುಖಗಳನ್ನು ಕಂಡಾಗ ರಾಜಕಾರಣಿಗಳ, ಸರ್ಕಾರದ ಸಹವಾಸ ಬೇಡವೇ ಬೇಡ ಎನ್ನಿಸುತ್ತದೆ.

ಧರ್ಮಪಿತ ಬಸವಣ್ಣನವರ ತತ್ತ್ವಗಳ ಮೂಸೆಯಲ್ಲಿ ಕರಗಿ, ಸ್ವಾಭಿಮಾನದ ಅಚ್ಚಿ(mould)ನಲ್ಲಿ ತಯಾರಾದವರು ಈ ಮಾತಿನಲ್ಲಿ ಪೂರ್ಣ ಶ್ರದ್ಧೆ ಹೊಂದಿರುತ್ತಾರೆ.

ದೂಷಕನವನೊಬ್ಬ ದೇಶವ ಕೊಟ್ಟಡೆ,
ಆಸೆ ಮಾಡಿ ಅವನ ಹೊರೆಯಲ್ಲಿರಬೇಡ: ಮಾದಾರ ಶಿವಭಕ್ತನಾದಡೆ,

ಆತನ ಹೊರೆಯಲ್ಲಿ ಭೃತ್ಯನಾಗಿಪುದು ಕರಲೇಸಯ್ಯ !
ತೊತ್ತಾಗಿಪ್ಪುದು ಕರಲೇಸಯ್ಯಾ !
ಕಾಡ ಸೊಪ್ಪು ತಂದು ಓಡಿನಲ್ಲಿ ಹುರಿದಿಟ್ಟುಕೊಂಡು
ಕೂಡಿಕೊಂಡಿಪ್ಪುದು ನಮ್ಮ ಲಿಂಗದೇವನ ಶರಣರ.

ಕೂಡಲ ಸಂಗಮದಲ್ಲಿ ಮಹಾಮನೆ ನಿರ್ಮಾಣ, ಶರಣ ಮೇಳ ಎಂಬ ದೊಡ್ಡ ಹೆಜ್ಜೆ ಇಡುತ್ತ ಏದುಸಿರು ಬಿಡುವಾಗಲೇ ಅಪ್ಪ ಬಸವಣ್ಣನವರು ಬಸವ ಕಲ್ಯಾಣದ ಕಡೆಗೆ ಚಿತ್ತ ಹರಿಸಲು ಪ್ರೇರಣೆ ನೀಡಿ ಮತ್ತೊಂದು ಹೊರೆ ಹೊರಿಸಿದರು. ಒಂದು ಕೊಡವನ್ನು ಹೊತ್ತು ತ್ರಾಸು ಪಡುತ್ತಿದ್ದವರ ಮೇಲೆ ಹಂಡೆ ಹೊರಿಸಿದಂತಾಯಿತು. ಇದಕ್ಕಾಗಿ ನಾವು ಅಪ್ಪ ಬಸವಣ್ಣನವರನ್ನು ದೂಷಿಸುವುದಿಲ್ಲ. ಏಕೆಂದರೆ ಈ ಎಲ್ಲ ಭಾರ ನಾವು ಹೊತ್ತರೂ ನಮ್ಮನ್ನು ಅವರ ಅಂಗೈಯಲ್ಲಿಟ್ಟು(ಅಭಯ ಹಸ್ತ) ಒಯ್ಯುತ್ತಾರೆಂಬ ನಂಬಿಕೆ ಇದೆ.

ಆರ್ಥಿಕ ದೃಷ್ಟಿಯಿಂದ ಬಹುದೊಡ್ಡ ಭಾರ ಬಿದ್ದಿತು. ವಿಪರೀತ ಬೆಲೆಯುಳ್ಳ ಜಮೀನುಗಳನ್ನು ಖರೀದಿ ಮಾಡುವ ಒತ್ತಡ ಬಂದಾಗ ನಮ್ಮ ಶರಣ ಬಂಧುಗಳು ಉದಾರವಾಗಿ ಕಾಣಿಕೆಯನ್ನು ಕೊಟ್ಟಿದ್ದಾರೆ, ಸಾಲ ರೂಪದಲ್ಲೂ ಹಣವನ್ನು ನೀಡಿದ್ದಾರೆ. ಇವರೆಲ್ಲರ ಔದಾರ್ಯ, ಸಹಾಯವನ್ನು ಎಷ್ಟು ಕೊಂಡಾಡಿದರೂ ಸಾಲದು.

ಈಗ ನಮ್ಮ ಆತ್ಮೀಯರು, ಅಭಿಮಾನಿಗಳು ಆದ ಬಸವ ತತ್ತ್ವಾಭಿಮಾನಿಗಳ ಮೇಲೆ ಬಹುದೊಡ್ಡ ಭಾರ ಬೀಳುತ್ತಿದೆ.

1. ಪ್ರತಿ ವರ್ಷದ ಶರಣರ ಮೇಳಕ್ಕೆ ಕಾಣಿಕೆ ಕೊಡುವುದು.
2. ಬಸವ ಧರ್ಮ ಪೀಠಕ್ಕೆ ಸಹಾಯ ಮಾಡುವುದು.
3. ಸ್ಥಳೀಯ ರಾಷ್ಟ್ರೀಯ ಬಸವ ದಳ, ಬಸವ ಮಂಟಪಗಳಿಗೆ ಸಹಾಯ ಮಾಡುವುದು.
4. ಸ್ಥಳೀಯವಾಗಿ ರಾಷ್ಟ್ರೀಯ ಬಸವ ದಳಗಳು ಆಚರಿಸುವ ಹಬ್ಬ-ಹುಣ್ಣಿಮೆ-ಉತ್ಸವಗಳಿಗೆ ಕಾಣಿಕೆ ಕೊಡುವುದು.

ಸಾಮಾನ್ಯವಾಗಿ ಬಸವ ತತ್ತ್ವನಿಷ್ಠರು ಆರ್ಥಿಕವಾಗಿ ಮಧ್ಯಮ ವರ್ಗದವರು ಆಗಿರುತ್ತಾರೆ. ಕೆಲವರು ಶ್ರೀಮಂತ ಶರಣರು ಬಸವ ತತ್ತ್ವನಿಷ್ಠರು, ಉದಾರಿಗಳೂ ಆಗಿರುವರಾದರೂ ಹೆಚ್ಚಾಗಿ ಮಧ್ಯಮ ವರ್ಗದವರೇ ಬಸವ ತತ್ತ್ವದ ಆರಾಧಕರಾಗಿರುತ್ತಾರೆ. ಜೊತೆಗೆ ಇವರಿಗೆ ಬಸವ ತತ್ತ್ವ ಮತ್ತು ವಚನ ಸಾಹಿತ್ಯ ಪ್ರಚಾರವಾಗಬೇಕು ಎಂಬ ಕಳಕಳಿ ಬಹಳ ಉತ್ಕಟವಾಗಿರುತ್ತದೆ. ಇಂಥ ಪರಿಸ್ಥಿತಿಯಲ್ಲಿ ಬಸವ ಕಲ್ಯಾಣದಲ್ಲಿ ಒಂದು ಮಠವನ್ನು ಸ್ಥಾಪಿಸಿ ಹಲವಾರು ಕಾರ್ಯಕ್ರಮ ರೂಪಿಸಿ, ಯೋಜನೆ ಹಾಕಿಕೊಂಡಿರುವುದು ನಮಗೂ ಶಕ್ತಿಗೆ ಮೀರಿದ್ದಾಗಿದೆ. ಹೀಗೆ ಸತತವಾಗಿ ಯೋಜನೆ ಹಾಕಿ ನಮ್ಮ ಶರಣ ಬಂಧುಗಳಿಗೆ ಭಾರ ಹಾಕುತ್ತೇವೆಯೋ ಎಂಬ ಸಂಕೋಚ ಕಾಡುತ್ತದೆ.

ಆದರೆ ಏನು ಮಾಡುವುದು? ನಾವು ಒಡಲ ಅವಸರಕ್ಕೆ ಕುದಿಯದೆ ಒಡೆಯ(ಬಸವಣ್ಣನವರ)ರ ಅವಸರಕ್ಕಾಗಿ ಚಟಪಟಿಸುತ್ತಿದ್ದೇವೆ. ವಯಸ್ಸು ಸರಿಯುತ್ತಿದೆ. ಅಬ್ಬಾ! 58 ವರ್ಷ; ಎಷ್ಟೊಂದು ವಯಸ್ಸು ಕಳೆಯಿತು! ಈ ಅವಧಿಯಲ್ಲಿ ಇನ್ನೂ ಹೆಚ್ಚು ಕೆಲಸ ಮಾಡಬಹುದಿತ್ತೆ ? ಎಂದು ನನಗೆ ನಾನೇ ಪ್ರಶ್ನೆ ಮಾಡಿಕೊಳ್ಳುತ್ತೇನೆ. ಅಂತರಾತ್ಮವೇನೂ ಚುಚ್ಚುವುದಿಲ್ಲ. ಏಕೆಂದರೆ, ಅಗತ್ಯಕ್ಕಿಂತ ಹೆಚ್ಚು ನಿದ್ದೆಗಾಗಿ,

ವಿಶ್ರಾಂತಿಗಾಗಿ, ಊಟಕ್ಕಾಗಿ ಸಮಯ ವ್ಯರ್ಥ ಮಾಡಿಲ್ಲ ಎಂಬ ವಿಶ್ವಾಸ ನನಗಿದೆ. ಸೋಮಾರಿತನಕ್ಕೂ ನಾನು ಇಂಬುಕೊಟ್ಟಿಲ್ಲ, ಕೊಡುವುದಿಲ್ಲ ಎಂಬುದನ್ನು ನಮ್ಮ ಒಡನಾಡಿಗಳೆಲ್ಲರೂ ಬಲ್ಲರು. ಒಂದು ದೌರ್ಬಲ್ಯ ಮಾತ್ರ ನನಗಿದೆ (ಅಂತ ಅಪ್ಪಾಜಿ ಬೈಯ್ಯುತ್ತಿದ್ದರು) ಅದೇನೆಂದರೆ ತಮ್ಮ ಸಾಂಸಾರಿಕ ಕಷ್ಟ-ಸುಖ, ನೋವು ಹೇಳಿಕೊಳ್ಳಲು ಬಂದ ಭಕ್ತರ ಅಳಲನ್ನು ಸಹನೆಯಿಂದ ಕೇಳಿ, ಅವರಿಗೆ ಸಮಾಧಾನ-ಸಾಂತ್ವನ ಹೇಳಿ, ಆಶೀರ್ವದಿಸುವುದು, ಧೈರ್ಯ ತುಂಬುವುದು. ಅವರು ಬದುಕಿನಲ್ಲಿ, ಭವಿಷ್ಯದಲ್ಲಿ ಒಳ್ಳಿತನ್ನು ಸಾಧಿಸಿದಾಗ ಸಂತೋಷ ಪಡುವುದು.

ಇದು ನಾನು ಸಮಯ ಹರಣ ಮಾಡಿದಂತೆ ಎಂದು ಪೂಜ್ಯ ಅಪ್ಪಾಜಿ ಬೈಯುತ್ತಾ, "ನಿಮ್ಮಲ್ಲಿ ಬರವಣಿಗೆ ಶಕ್ತಿ ಇದೆ. ಎಲ್ಲರ ಕಥೆ ಕೇಳುತ್ತಾ ಸಮಯ ಹಾಳು ಮಾಡ್ತೀರಾ?" ಎಂದು ಅಂದು ಬಿಡುತ್ತಿದ್ದರು. ಅದಕ್ಕಾಗಿ ನಾನು, "ಅಲ್ಲೇ ಅಂಥ ಸ್ವಾಮಿಗಳ ಬಳಿ ಮಾತನಾಡಿ, ಈ ಮಾತಾಜಿ ಬಳಿ ಮಾತಾಡಿ" ಎಂದು ಸಮಯ ಉಳಿಸಲು ಅತ್ತ ನಿರ್ದೇಶನ ಮಾಡಿ ಸುಮ್ಮನಿದ್ದು, ಮತ್ತೊಂದು ದಿನ ಅವರನ್ನು ಭೇಟಿ ಮಾಡಿದರೆ, ಆ ಭಕ್ತರು ಹೇಳುವರು, "ಅವರ ಮುಂದೆ ಎಲ್ಲಾ ಹೇಳಿದೆವು. ಅವರು ಈ ವಿಷಯಕ್ಕೆ ಪೂಜ್ಯ ಮಾತಾಜಿಯವರನ್ನೇ ಕೇಳುವುದು ಒಳ್ಳೆಯದು"ಎಂದರು ಎಂದಾಗ, "ಅಯ್ಯೋ ಪಾಪ; ಅವರ ಬದುಕಿನ ಒಂದೋ ಎರಡೋ ತಿಂಗಳು ವಿನಾ ಕಾರಣ ವ್ಯರ್ಥವಾದವಲ್ಲ, ಆಗಲೇ ಭೇಟಿಯಾಗಿದ್ದರೆ ಒಂದು ನಿರ್ದೇಶನವಾದರೂ ಸಿಕ್ಕಿರುತ್ತಿತ್ತು "ಎಂದು ನನ್ನಲ್ಲಿ ನಾನೇ ಪರಿತಪಿಸುವುದುಂಟು. ಮನಸ್ಸನ್ನು ಎಷ್ಟು ನಿರ್ದಾಕ್ಷಿಣ್ಯವಾಗಿ ಮಾಡಿಕೊಳ್ಳಬೇಕು ಎಂದರೂ ಆಗದೆ ಪುನಃ ಮೃದುವಾಗಿ ಬಿಡುವುದು. ಇಂಥ ಮಾನಸಿಕ ಹೊಯ್ದಾಟದ ಮಧ್ಯೆಯೇ," ಕೂಡಲ ಸಂಗಮವು ತಂದೆ(ಧರ್ಮ ಗುರು ಬಸವಣ್ಣನವರ ಐಕ್ಯ ಕ್ಷೇತ್ರ)ಯ ತೌರುಮನೆಯಾದರೆ ಬಸವ ಕಲ್ಯಾಣವು ತಾಯಿ(ವಚನ ಸಾಹಿತ್ಯದ ಉಗಮ ಸ್ಥಾನ)ಯ ತೌರುಮನೆ" ಈಗಾಗಲೇ 58 ವರ್ಷ ದಾಟಿದವು. ಇನ್ನೂ ಸಮಯ ಕಳೆಯೋದು ಬೇಡ. ನಾವು ಕೆಲಸವನ್ನು ಆರಂಭಿಸೋಣ; ನಾವಿರುವವರೆಗೆ ಎಷ್ಟು ಆಗುತ್ತೋ ಅಷ್ಟು ಮಾಡಿದರೆ, ನಂತರ ನಮ್ಮ ಶಿಷ್ಯರು ಮುಂದುವರಿಸುತ್ತಾರೆ ಎಂದು 2001ರ ಡಿಸೆಂಬರ್ 21 ರಂದು ಭಕ್ತರಿಂದ ಸಾಲ ಪಡೆದು ಜಮೀನನ್ನು ಖರೀದಿಸಿದೆವು. ಮತ್ಸರ ಬುದ್ಧಿಯ ದುಷ್ಟ ಮನಸ್ಸಿನ ಕೆಲವರಿಂದ ಅಪಾರ ಕಿರುಕುಳ ಎರಗಿದವು. ಅದಕ್ಕೆಲ್ಲ ನಾವು ಬೆಚ್ಚುವುದೂ ಇಲ್ಲ, ಬೆದರುವುದೂ ಇಲ್ಲ. ಒಂದು ಮಗುವನ್ನು ಹೆರುವ ತಾಯಿ ಹೆರಿಗೆಯ ಕೋಣೆಯಲ್ಲಿ ಅಪಾರ ವೇದನೆ ಅನುಭವಿಸುವಳು. ಆದರೆ ಆ ಮಗು ತೊಟ್ಟಿಲಲ್ಲಿ ಮಲಗಿ ಕಿಲಕಿಲ ನಗುವಾಗ ತಾಯಿಗಷ್ಟೇ ಖುಷಿಯಾಗದು, ಸುತ್ತಲಿನ ಜನರಿಗೂ ಖುಷಿಯಷ್ಟೆ ?, ಅದೇ ಮಗು ಬೆಳೆದು ಇನ್ನಷ್ಟು ಪ್ರತಿಭಾವಂತನಾದಾಗ ಎಲ್ಲರೂ ಬೆರಗಾಗಿ ನೋಡುವರಲ್ಲವೆ ? ಮೆಚ್ಚಿಕೊಳ್ಳುವರಲ್ಲವೆ ? 1986-87 ರಲ್ಲಿ ಕೂಡಲ ಸಂಗಮ ನೋಡಿದವರು 16 ವರ್ಷಗಳ ನಂತರ ಕೂಡಲ ಸಂಗಮ ನೋಡಿದಾಗ ಆಡುವ ಮಾತು, ವ್ಯಕ್ತಪಡಿಸುವ ಮೆಚ್ಚುಗೆ ಕಂಡಾಗ ನಮ್ಮ ಹೃದಯ ಮನಸ್ಸುಗಳು ಹರ್ಷಾತಿರೇಕದಲ್ಲಿ ಮೀಯುತ್ತವೆ. ನವಜೋತ್ ಸಿಂಗ್ ಸಿದ್ದು ಎಂಬ ಮಾಜಿ ಕ್ರಿಕೆಟ್ ಪಟು, ಹಾಲಿ ನಿರೂಪಕ ಒಂದು ಮಾತನ್ನು ಕ್ರಿಕೆಟ್ ವೀಕ್ಷಕ ವಿವರಣೆ ಕೊಡುವಾಗ ಹೇಳಿದ್ದರಂತೆ, "ಇವರಿಗೆ ಘಾಸಿ ಮಾಡಬೇಕೆಂದು ವಿರೋಧಿಗಳು ಎಸೆಯುವ ಇಟ್ಟಿಗೆಗಳನ್ನು ಮನೆ ಕಟ್ಟಿಕೊಳ್ಳಲು ಬಳಸುವವನೇ ಜಾಣ" ಎಂದು. ಈ ಮಾತು ನನಗೆ ತುಂಬಾ ಸಂತೋಷ ತಂದಿತು. ಎಂಥಾ ಅಮೂಲ್ಯ ಸಂದೇಶವಿದೆ ಇದರಲ್ಲಿ. ಬಸವ

ಕಲ್ಯಾಣದಲ್ಲಿ ಪುನಃ 13.5 ಎಕರೆ ಜಮೀನನ್ನು ಭಕ್ತರಿಂದ ಸಾಲ ಪಡೆದು ಖರೀದಿಸಿದೆವು. ಅದಕ್ಕೇ ಹೈದರಾಬಾದಿನ ಶರಣ. ಸುಭಾಷ್ ಪಾಟೀಲರು ಹೇಳಿದರು, "ನಿಮ್ಮ ಬಳಿ ಬಹಳ ಹಣವಿದೆ. ಅದಕ್ಕೆ ಹೀಗೆ ಖರೀದಿಸುತ್ತೀರೀ - ಎಂದು ಕೇಳುವರು ಊಹೆ ಮಾಡುತ್ತಾರೆ ". ಯಾರು ಏನು ತಿಳಿದು ಏನಾಗಬೇಕು ? ನಮ್ಮ ಶಿಷ್ಯವೃಂದಕ್ಕೆಲ್ಲ ತಿಳಿದಿದೆ; ಭಕ್ತ ವೃಂದಕ್ಕೂ ತಿಳಿದಿದೆ. ಯಾವುದೂ ಮುಚ್ಚುಮರೆಯಿಲ್ಲ. ಎಲ್ಲವೂ ಪಾರದರ್ಶಕ, ಅದಕ್ಕೇ ನಾನು ಯಾವುದೇ ವ್ಯವಹಾರ ಮಾಡಬೇಕಾದರೂ ಬೆಂಗಳೂರು, ಬೀದರ್, ಗುಲಬರ್ಗಾ, ಧಾರವಾಡ, ಹೈದರಾಬಾದ್ ಮುಂತಾದ ಊರುಗಳ ರಾಷ್ಟ್ರೀಯ ಬಸವ ದಳಗಳ ಶರಣರನ್ನು ಮುಂದಿಟ್ಟುಕೊಂಡೇ ಮಾತನಾಡುವುದು. ಅವರು ಸದಾ ಕಷ್ಟ-ಸುಖಗಳಲ್ಲಿ ಪಾಲುಗಾರರಾಗುತ್ತಾರೆ.

ಬಸವ ಕಲ್ಯಾಣದ ಪುನರ್ ನಿರ್ಮಾಣದ ಸಂಕಲ್ಪದೊಡನೆ "ಕಲ್ಯಾಣ ಪರ್ವ " ನಡೆಸುವ ಆಲೋಚನೆಯೂ ಒಡಮೂಡಿತು. ಧರ್ಮ ಕ್ಷೇತ್ರಗಳ ಬಗ್ಗೆ ಭಾವನಾತ್ಮಕ ಸಂಬಂಧ ಬೆಳೆಯದ ಹೊರತು ಭಕ್ತಿಯು ಗಟ್ಟಿಗೊಳ್ಳುವುದಿಲ್ಲ, ಕ್ಷೇತ್ರಗಳೂ ಬೆಳೆಯುವುದಿಲ್ಲ. ನಮ್ಮ ಮಠಾಧೀಶರುಗಳಲ್ಲಿ ಅನೇಕರು ಕೋಟ್ಯಧೀಶರಿದ್ದರೂ ಕೂಡಲ ಸಂಗಮ ಏಕೆ ಅಭಿವೃದ್ಧಿಯಾಗಿರಲಿಲ್ಲ? ಅವರ ಮಠಗಳು ಅರಮನೆಗಳಂತೆ ಭವ್ಯವಾಗಿವೆ. ಹಿಂದೆ ಲಿಂಗೈಕ್ಯರಾದ ಒಬ್ಬೊಬ್ಬರ ಕರ್ತೃ ಗದ್ದುಗೆಗಳು ಎಂಥ ಚಂದವಿವೆ ! ಮುಂದೆ ಲಿಂಗೈಕ್ಯರಾಗುವವರ ಸಮಾಧಿಗಳು ಎಷ್ಟು ವೈಭವ ಪೂರ್ಣವಾಗಿವೆ ! ಇಂದು ಬಸವ ಕಲ್ಯಾಣದ ಸ್ಥಿತಿ ಹೇಗಿದೆ ? ಕಾರಣವೇನು ? ಅವರುಗಳಲ್ಲಿ ಅನೇಕರಿಗೆ ಕೂಡಲ ಸಂಗಮ-ಬಸವ ಕಲ್ಯಾಣಗಳ ಜೊತೆಗೆ ಭಾವನಾತ್ಮಕ ಸಂಬಂಧ ಇಲ್ಲದಿರುವುದು. ಶರಣರ ಕರುಳ ಬಳ್ಳಿಯ ಹೂಗಳು, ಫಲಗಳು ಅವರು ಆಗದೆ ಇರುವುದು. ಇರಲಿ; ಅವರ ಸುದ್ದಿ ನಮಗೇಕೆ ? ವೃದ್ಧರಾದ ತಾಯಿ ತಂದೆಗಳಿಗೆ ಶ್ರೀಮಂತನಾಗಿರುವ ಮಗ ಮೃಷ್ಟಾನ್ನ ಭೋಜನ ಮಾಡಿಸಬಲ್ಲ ಶಕ್ತನಾಗಿದ್ದರೂ ಮಾಡಿಸುವ ಮನ ಹೊಂದಿಲ್ಲ. ಆದರೆ ಕೂಲಿ ಮಾಡುವ ಮಗ ತನಗೆ ಲಭ್ಯವಾಗಿರುವ ರಾಗಿಯ ಅಂಬಲಿ, ರೊಟ್ಟಿಯನ್ನೇ ತಿನ್ನಿಸುತ್ತಾನೆ ಎಂದುಕೊಂಡು ನಾವು-ನೀವು ದುಡಿಯೋಣ. ನಮ್ಮ ಬಳಿ ಅಪಾರವಾದ ಸಂಪತ್ತು ಇರಲಿಕ್ಕಿಲ್ಲ. ಆದರೆ ಅಪ್ಪ ಬಸವಣ್ಣ, ಅವ್ವ ವಚನ ಸಾಹಿತ್ಯ, ಬಸವ ಪರಂಪರೆಯ ಶರಣರ ಬಗ್ಗೆ ಮಮತೆ ಇದೆ. ಹೀಗಾಗಿ ನಾವು ಮಾಡುವ ಅಲ್ಪ ಸೇವೆಯೂ ಅವರಿಗೆ ಪ್ರಿಯವೆ ಎಂಬ ಭಾವವೇ ನಮಗೆ ಅಪಾರ ಸಂತೃಪ್ತಿ ನೀಡುವುದು.

ಕಲ್ಯಾಣ ಪರ್ವದ ಅಗತ್ಯ

ಶರಣ ಮೇಳವನ್ನು ಜನವರಿಯಲ್ಲಿ ಮುಗಿಸಿರುತ್ತಾರೆ. ತಾವೂ ಕಾಣಿಕೆ ನೀಡಿರುತ್ತಾರೆ ಮತ್ತು ಇತರರಿಂದ ಕಾಣಿಕೆ ಸಂಗ್ರಹಿಸಿರುತ್ತಾರೆ. ಕೇವಲ 3 ತಿಂಗಳ ಅವಧಿಯಲ್ಲೇ ಬರುವ ಕಲ್ಯಾಣ ಪರ್ವಕ್ಕೆ ದೇಣಿಗೆ ಸಂಗ್ರಹ ಮಾಡುವುದು ಬಹಳ ಕಷ್ಟಕರ ಎಂದು ಭಾವಿಸುವ ಶರಣ ಬಂಧುಗಳು ದೇಣಿಗೆ ಕೇಳಲು ಸಂಗ್ರಹಿಸಲು ಸಂಕೋಚ ಪಡುತ್ತಾರೆ, ಹಿಂಜರಿಯುತ್ತಾರೆ.

1. ಬಸವ ಕಲ್ಯಾಣ ಅಭಿವೃದ್ಧಿಯಾಗಬೇಕಾದರೆ, ಶರಣ ಬಂಧುಗಳು ಬಂದು ಹೋಗುವ ಪರಿಪಾಠ ಇಟ್ಟುಕೊಳ್ಳಬೇಕು. ಅದಕ್ಕಾಗಿ ಕಲ್ಯಾಣ ಪರ್ವ ಸಂಯೋಜಿಸಲಾಗಿದೆ.

2. ಇಡೀ ವರ್ಷದಲ್ಲಿ ಶರಣ ಮೇಳ ಜನವರಿಯಲ್ಲಿ ಆಗುವುದರಿಂದ ಮೇ ಒಂದೇ ಕಲ್ಯಾಣ ಪರ್ವಕ್ಕೆ ಸೂಕ್ತ ಸಮಯ. ಮುಂದೆ ಮಳೆಗಾಲ, ಅಕ್ಟೋಬರ್‌ವರೆಗೆ ಮಳೆ ಬರುತ್ತದೆ, ಕಾರ್ಯಕ್ರಮ ನಡೆಸಲು

ಕಷ್ಟವಾಗುತ್ತದೆ. ನವೆಂಬರ್‌ದಲ್ಲಿ ಮಾಡಿದರೆ ಮುಂದೆ ಶರಣ ಮೇಳಕ್ಕೆ ಸಮಯ ಹತ್ತಿರವಾಗುತ್ತದೆ.

3. ಶಾಲೆಯ, ಪಿ.ಯು.ಸಿಯ ಪರೀಕ್ಷೆ ಮುಗಿದು, ಬೇಸಿಗೆ ರಜ ಇರುವುದರಿಂದ ಜನರಿಗೆ ಭಾಗಿಯಾಗಲು ಒಳ್ಳೆಯ ಸಮಯವಾಗಿರುತ್ತದೆ.

4. ಬಸವ ಕಲ್ಯಾಣವು ಆಂಧ್ರ, ಮಹಾರಾಷ್ಟ್ರಗಳಿಗೂ ಸಮೀಪವಾಗಿರುವುದರಿಂದ ಸಂಘಟನೆಗೆ ಬಹಳ ಸಹಾಯಕವಾಗುತ್ತದೆ.

ಈ ಎಲ್ಲ ಅನಿವಾರ್ಯತೆಯಿಂದ ಕಲ್ಯಾಣ ಪರ್ವ ಮಾಡುವುದರಿಂದ ಜನರಿಗೆ ಮನವರಿಕೆ ಮಾಡಲು ಯತ್ನಿಸಬೇಕು ಮತ್ತು ಯಾರೇನು ತಮ್ಮ ಸ್ವಾರ್ಥಕ್ಕಾಗಿ, ಸ್ವಂತ ಆಸ್ತಿ-ಪಾಸ್ತಿಗಾಗಿ ಹಣ ಕೇಳುವುದಿಲ್ಲವಷ್ಟೇ ? ಸಮಾಜಕ್ಕಾಗಿ, ಸಂಘಟನೆಗಾಗಿ ಕೇಳುವುದು. ಅದಕ್ಕೆ ಸಂಕೋಚ ಪಡುವ ಕಾರಣವೇನು ? ಕೊಡುವವರು ಕೊಡುತ್ತಾರೆ; ಕೊಡದವರು ಕೊಡಲಿಕ್ಕಿಲ್ಲ. ಕೇಳುವುದು ತಮ್ಮ ಕರ್ತವ್ಯ ಎಂದು ಭಾವಿಸಬೇಕು. ಆದ್ದರಿಂದ ರಸೀತಿ ಪುಸ್ತಕ ತಲ್ಪಿದವರು ನಿಷ್ಠೆಯಿಂದ ಸಂಗ್ರಹ ಮಾಡಿರಿ . ಕೆಲಸದ ಒತ್ತಡದಿಂದ, ರಸೀತಿ ಪುಸ್ತಕ ಕಳಿಸುವ ವ್ಯಕ್ತಿ ಬದಲಾಗಿ ಸರಿಯಾಗಿ ರವಾನೆ ಆಗದ್ದರಿಂದ ಶರಣ ಮೇಳ ದೇಣಿಗೆ ಸಂಗ್ರಹಕ್ಕೆ ಪುಸ್ತಕಗಳು ಸರಿಯಾಗಿ ಮುಟ್ಟಿಲ್ಲ. ಇದರಿಂದ ಕೆಲವು ಶರಣ ಬಂಧುಗಳು ಮುನಿಸಿಕೊಂಡು, "ಮಾತಾಜಿಯವರಿಗೆ ನಮ್ಮ ಬಗ್ಗೆ ಬೇಸರವಾಗಿದೆ. ಅದಕ್ಕೇ ರಸೀತಿ ಪುಸ್ತಕ ಕಳಿಸಿಲ್ಲ" ಎಂದು ತಪ್ಪು ಭಾವಿಸಿದ್ದಾರೆ. ನಾನು ಸತತವಾಗಿ ಪ್ರವಾಸದಲ್ಲಿ ಇದ್ದುದರಿಂದ ರಸೀತಿ-ಪುಸ್ತಕ ಕಳಿಸುವವರಿಗೆ ಆಯ್ಕೆ ಮಾಡಿಕೊಡಲು ಆಗದೆ ಇರುವುದರಿಂದ ಸಾಕಷ್ಟು ಲೋಪಗಳಾಗಿವೆ. ಹಾಗೆ ಆದಾಗ ಕಳಕಳಿ ಉಳ್ಳವರು ಪತ್ರ ಬರೆದು ತರಿಸಿಕೊಳ್ಳಬೇಕೇ ವಿನಾ ಮುನಿಸಿಕೊಳ್ಳ ಬಾರದು. ಶರಣಮೇಳ/ಕಲ್ಯಾಣಪರ್ವ ನಿಮ್ಮ ಕರ್ತವ್ಯಗಳೂ ಅಹುದು.

ವೈಯಕ್ತಿಕ ಕಾಣಿಕೆ

ಮಧ್ಯಮ ವರ್ಗದವರು ತಮ್ಮ ಮಕ್ಕಳ ವಿದ್ಯಾಭ್ಯಾಸಕ್ಕೆ, ಮದುವೆಗೆಂದು ಹೇಗೆ ಹಣವನ್ನು ಉಳಿತಾಯ ಮಾಡುವರೋ, ಖರ್ಚು-ವೆಚ್ಚಗಳನ್ನು ಮಿತವಾಗಿ ಇಟ್ಟುಕೊಂಡು ಸರಳ ಜೀವನ ನಡೆಸುತ್ತಾ ಹಣ ಕೂಡಿ ಹಾಕುವರೋ ಹಾಗೆ ಬಸವ ಕಲ್ಯಾಣವನ್ನು ಸ್ಥಾವರಾತ್ಮಕವಾಗಿ ಕಟ್ಟಲು, ಜಂಗಮಾತ್ಮಕವಾಗಿ ಬಸವ ತತ್ತ್ವವನ್ನು ಪ್ರಚಾರ ಮಾಡಲು ಶರಣ ಬಂಧುಗಳು ಖರ್ಚು-ವೆಚ್ಚ ತಗ್ಗಿಸಿಕೊಂಡು ಹಣ ಉಳಿತಾಯ ಮಾಡಬೇಕು. ಮುಡಿಪಿನ ರೂಪದಲ್ಲಿ ತೆಗೆದಿಡಬಹುದು. ಅಥವಾ ಉಳಿತಾಯಕ್ಕಾಗಿ ಒಂದು ಡಬ್ಬಿ ಇಟ್ಟು ಸಂಗ್ರಹಿಸಬಹುದು. ಪ್ರತಿ ವರ್ಷವೂ ಸುಗ್ಗಿಯನ್ನು ಮುಗಿಸಿರುವ ರೈತರು ತಾವು ಬೆಳೆದ ದವಸ ಧಾನ್ಯಗಳನ್ನು ದಾಸೋಹಕ್ಕೆಂದು ತಂದು ಕೊಡಬಹುದು.

ಸ್ವಯಂ ಪ್ರೇರಣೆಯ ಕಾಣಿಕೆ

ಶರಣ ಬಂಧುಗಳು ಸ್ವಯಂ ಪ್ರೇರಣೆಯಿಂದ ಹೆಚ್ಚಿನ ಕಾಣಿಕೆ ಕೊಡಲು ಸಿದ್ಧರಾಗಬೇಕು. ಇದರಲ್ಲಿ ಸರ್ಕಾರಿ ನೌಕರರು, ವ್ಯಾಪಾರಸ್ಥರು, ಕಾಯಂ ಆದಾಯ ಉಳ್ಳವರು ಪೂರ್ಣ ಜವಾಬ್ದಾರಿ ಹೊರಬೇಕು. ಈ ಸಲ ಕರ್ನಾಟಕ, ಮಹಾರಾಷ್ಟ್ರದ ಬಹುಭಾಗ ಭಯಂಕರ ಬರವನ್ನು ಎದುರಿಸುತ್ತಿದೆ. ಕೆಲವು ಪ್ರದೇಶ ಬಿಟ್ಟರೆ ಬಹುಪಾಲು ಪ್ರದೇಶಗಳಲ್ಲಿ ಬೆಳೆಯಿಲ್ಲ, ಕುಡಿಯುವ ನೀರಿಲ್ಲ, ದಾಸುಗಳಿಗೆ ಮೇವಿಲ್ಲ. ಕೃಷಿಕರು ಕಂಗಾಲಾಗಿದ್ದಾರೆ. ಆದ್ದರಿಂದ ಕಾಯಂ ವರಮಾನ, ಸಂಬಳ ಇರುವವರು,

ನೀರಾವರಿ ಜಮೀನಿನಿಂದ ಆದಾಯ ಉದಾರವಾಗಿ ಧನ ಸಹಾಯ ಮಾಡಲು ಮುಂದಾಗಬೇಕು.

ನಾವು ಹಾಕಿಕೊಳ್ಳುವ ಯೋಜನೆಗಳಿಂದ ಬಸವ ಭಕ್ತರ ಮೇಲೆ, ನಮ್ಮ ಆತ್ಮೀಯರ ಮೇಲೆ ಭಾರ ಹೆಚ್ಚು ಬೀಳುತ್ತದೆಂಬುದು ನನ್ನ ಆತಂಕವಾಗಿದ್ದರೂ ಯಾರ ಮೇಲೂ ನಾವು ಒತ್ತಡ ಹೇರುವುದಿಲ್ಲ. ಅವರವರೇ ಸ್ವಯಂ ಪ್ರೇರಣೆಯಿಂದ ಮುಂದಾಗಬೇಕು, ಮುಂದಾಗುವವರು ಸಹ. ನಮ್ಮ ಸಂಸ್ಥೆಯ ಧರ್ಮಬೋಧಕ ಚರ ಜಂಗಮರ ಮೇಲೂ ಸಾಕಷ್ಟು ಒತ್ತಡ ಬೀಳುತ್ತದೆ. ಏಕೆಂದರೆ ನಾನು ಸುಮ್ಮನೆ ಕೂಡುವುದಿಲ್ಲ, ಅವರನ್ನೂ ಕೂಡ್ರಗೊಡುವುದಿಲ್ಲ. ಪ್ರವಚನಕಾರರು ಮತ್ತು ಸಿಬ್ಬಂದಿಯವರು ಸಹ ಸತತವಾಗಿ ದುಡಿಯುತ್ತಿದ್ದಾರೆ. ಏಕೀ ಒತ್ತಡ ಎಂದು ಪ್ರಶ್ನಿಸಿಕೊಳ್ಳುತ್ತೇನೆ. ಆಯುಷ್ಯ ಸವೆಯುತ್ತದೆ, ಬದುಕು ನಶ್ವರ. ಆದ್ದರಿಂದ ಗುರು(ಬಸವ) ಸೇವೆಯಲ್ಲಿ ತನು, ಸಮಯ ಮತ್ತು ಶಕ್ತಿ ಸವೆಯಬೇಕು ಎಂಬುದೇ ಕಳಕಳಿ. ಒಂದು ವಚನದಲ್ಲಿ ಧರ್ಮಪಿತರು ಹೀಗೆ ಹೇಳುತ್ತಾರೆ :

ಬಲ್ಲಿದರೊಡನೆ ಬವರವಾದೊಡೆ ಗೆಲಲುಂಟು, ಸೋಲಲುಂಟು
ಕಳ್ಳನೊಡನೆ ಭಾಷೆ ಪೂರಾಯವೆ ಅಯ್ಯಾ ?
ನಮ್ಮ ಲಿಂಗದೇವನ ಶರಣರಿಗೆ ಮಾಡಿ ಮಾಡಿ, ತನು ಸವೆದು ಬಡವಾದಡೆ
ಧನ ಸವೆದು ಬಡವನಾದಡೆ, ಆ ಭಕ್ತನು ಆ ಲಿಂಗಕ್ಕೆ ಪೂಜೆಯಹನು (ಬ.ವ.ದೀ 152)

ವಿವೇಕಿಗಳು ಜ್ಞಾನಿಗಳೂ ಆದವರ ಜೊತೆ ವಾದ ಮಾಡಿ ಗೆದ್ದರೂ ಚಂದ, ಸೋತರೂ ಚಂದ. ಗೆದ್ದರೆ ತನ್ನ ವಿದ್ವತ್ತಿನ ಪ್ರದರ್ಶನ, ಸೋತರೆ ದೊಡ್ಡವರಿಂದ ಜ್ಞಾನ ಪ್ರಾಪ್ತಿ. ಆದರೆ ಕಳ್ಳನಿಗೆ ಭಾಷೆ ಕೊಟ್ಟೆನೆಂದು ಪೂರೈಸಲು ತಪಿಸುವುದು ವಿವೇಕವೆ ? ದಾರಿಯಲ್ಲಿ ಕಳ್ಳನ ಕೈಗೆ ಓರ್ವ ಸಿಕ್ಕಿಬಿದ್ದಾಗ ಅವನಿಗೆ ಇಷ್ಟು ಸಮಯದ ಒಳಗೆ ಹಣ ತಂದು ಕೊಡುತ್ತೇನೆ ಎಂದು ಹೋಗುವವನು. "ಅಯ್ಯೋ, ಕಳ್ಳನಿಗೆ ಕೊಟ್ಟ ಭಾಷೆ ಪೂರೈಸಲೇ ಬೇಕು " ಎನ್ನುವುದು ಅವಿವೇಕ. ಶರಣರಿಗೆ, ಗುರು ಲಿಂಗ ಜಂಗಮಕ್ಕೆ, ಸತ್ಕಾರ್ಯಕ್ಕೆ ದುಡಿಯುವಾಗ ನಿರಂತರ ಪರಿಶ್ರಮದಿಂದ ಶರೀರ ದುಡಿದು, ಬಳಲಿ, ಕೃಶವಾಗಬಹುದು, ಧನವು ಖರ್ಚಾಗಿ ಬಡತನ ಬರಬಹುದು ಆದರೆ ಅದಕ್ಕೆ ಮರುಗಬೇಕಾಗಿಲ್ಲ, ಅಂಥ ದಾಸೋಹಿ ದೇವರಿಗೆ ಸಲ್ಲುವನು.

ಆಸೆ-ಆಮಿಷ, ಸ್ವಾರ್ಥ ಅಳಿದು ಸಮಷ್ಟಿಯ ಹಿತಚಿಂತನೆಯಿಂದ ನಾವು ಮಾಡುವುದರಿಂದ ಶರಣ ಬಂಧುಗಳ ಮೇಲೆ ಭಾರ ಹೇರುತ್ತಿದ್ದರೂ ಅದು ನಮಗೆ ಬಂಧನಕಾರಿಯಲ್ಲ ಎನಿಸುತ್ತದೆ. ಶರಣೆ. ರೂಪಕಾ ಅವರು ಕಳೆದ ಸಲ ಭೇಟಿಯಾದಾಗ ಹೇಳುತ್ತಿದ್ದರು, "ನೀವು ಯೋಜನೆಗಳನ್ನು ಹಾಕುವ ವೇಗ ನೋಡಿದರೆ ಒಮ್ಮೊಮ್ಮೆ ಆಶ್ಚರ್ಯವಾಗುವುದು, ಇನ್ನೊಮ್ಮೆ ಇದು ಸಾಧ್ಯವಾದೀತೆ ? ಎಂಬ ಕಳವಳವೂ ಆಗುವುದು. ಆದರೆ ಪುನಃ ಆಲೋಚಿಸಿದಾಗ" ಇದು ಬಸವಣ್ಣನವರ ಸಂಕಲ್ಪ ಇರಬೇಕು. ಅದರ ಒತ್ತಡದಲ್ಲಿ ಮಾತಾಜಿ ಇದ್ದಾರೆ. ಇವರೊಂದು ಪ್ರವಾಹದಂತೆ ಓಡುತ್ತಿದ್ದಾರೆ. ನಾವು ಆ ಪ್ರವಾಹಕ್ಕೆ ಸಿಕ್ಕಿ ಓಡುವಂತೆ ಭಾಸವಾಗುತ್ತದೆ. ಆದರೆ ಅನ್ನಿಸುತ್ತೆ ಮಾತಾಜಿ ಸರಿಯಾದ ದಾರಿಯಲ್ಲಿ ಸಾಗಿದ್ದಾರೆ; ನಮ್ಮನ್ನು ಉತ್ತಮಗುರಿಗೆ ಕೊಂಡೊಯ್ಯುತ್ತಾರೆ ಎಂದು ನಂಬಿದರೆ ಸಾಕು" ಎನ್ನಿಸಿ ಸಮಾಧಾನ, ಸಂತೃಪ್ತಿ ಮೂಡುತ್ತದೆ. ಶರಣೆ. ರೂಪಕಾ ಅವರ ಮಾತು ಬಹಳ ಕಮ್ಮಿ. ಆದರೆ ಆ ಮಾತಿನಲ್ಲಿ ಅಪಾರ ಸಾರ ಮಾತ್ರವಲ್ಲ ದೈವೀ ತರಂಗಗಳು (Divine vibrations) ಮಿಡಿಯುತ್ತವೆ. ಈಗ ಎಲ್ಲರೂ ಗುರಿಯತ್ತ ಓಡಬೇಕಾಗಿದೆ. ಅಷ್ಟೆ!!

ಸಮಸ್ಯೆ ? ಸಮಾಧಾನ ★

ಕೆ. ವೀರೇಶ್, ರಾಷ್ಟ್ರೀಯ ಬಸವ ದಳ, ತಿಮ್ಮಪ್ಪಯ್ಯನ ಹಳ್ಳಿ

? ಬ್ರಹ್ಮ-ವಿಷ್ಣು-ಮಹೇಶ್ವರ ಎಂಬುವು ಕಾಲ್ಪನಿಕ ದೇವತೆಗಳು ಎಂದು ಹೇಳಿ, ದೇವರೇ ಸೃಷ್ಟಿ-ಸ್ಥಿತಿ-ಲಯಗಳ ಕಾರಣ ಕರ್ತೃ ಎನ್ನುತ್ತೀರಿ. ನಮಗೂ ಇದು ಮನವರಿಕೆಯಾಗಿದೆ. ಆದರೆ ಶಿವನು ಐತಿಹಾಸಿಕ ವ್ಯಕ್ತಿ ಎನ್ನುತ್ತೀರಿ. ಹಾಗೆನ್ನಲು ಆಧಾರವೇನು ? ಬ್ರಹ್ಮ-ವಿಷ್ಣು ಇವರು ಸಹ ಐತಿಹಾಸಿಕ ವ್ಯಕ್ತಿಗಳೆ ?

★ ಶಿವನು ಐತಿಹಾಸಿಕ ವ್ಯಕ್ತಿ ಎನ್ನಲು ಹಲವಾರು ಸ್ಥಳಗಳು ಹೊಂದಿರುವ ಹೆಸರುಗಳು ಸಾಕ್ಷಿಯಾಗುತ್ತವೆ. ಆತನು ಬೇಸಿಗೆಯಲ್ಲಿ ವಾಸಿಸುತ್ತಿದ್ದ ಕೈಲಾಸ ಪರ್ವತ, ಚಳಿಗಾಲದಲ್ಲಿ ವಾಸಿಸುತ್ತಿದ್ದ ಋಷಿಕೇಶ, ಕೈಲಾಸ ರಾಜ್ಯಕ್ಕೆ ಹೆಬ್ಬಾಗಿಲಿನಂತಿರುವ ಹರದ್ವಾರ, ಇನ್ನಿತರ ಶಿವಗಣಗಳು ವಾಸಿಸುತ್ತಿದ್ದ ವೀರಭದ್ರ ಗಿರಿ, ಬಿಸಿ ನೀರಿನ ತಾಣ ಗೌರಿ ಕುಂಡ ಇವೆಲ್ಲ ಐತಿಹಾಸಿಕ ಹೆಸರು ಹೊಂದಿವೆ. ರಾಮ, ಕೃಷ್ಣ, ಪರಶುರಾಮ ಐತಿಹಾಸಿಕ ವ್ಯಕ್ತಿಗಳು. ಆದರೆ ಚತುರ್ಮುಖನಾದ ಬ್ರಹ್ಮ, ಕ್ಷೀರಸಾಗರದಲ್ಲಿ ಶೇಷ ಶಯನನಾದ ವಿಷ್ಣು ಪೌರಾಣಿಕ ಕಲ್ಪನೆ. ಅವರಿಗೆ ಸಂಬಂಧಿಸಿದ ಐತಿಹಾಸಿಕ ಸ್ಥಳಗಳು ಇಲ್ಲ. ರಾಮು-ಕೃಷ್ಣರಿಗೆ ಸಂಬಂಧಿಸಿದ ಅಯೋಧ್ಯೆ, ಮಥುರಾ, ಬೃಂದಾವನ ಇತ್ಯಾದಿ ಇರುವುದನ್ನು ಕಾಣಬಹುದು.

? ಪಂಚಕೋನಕ್ಕೆ ಶಾಂಭವಿ ಮುದ್ರೆ ಎಂದು ಏಕೆ ಕರೆಯಲಾಗುವುದು ?

★ ಪಂಚಕೋನಕ್ಕೆ ಶಾಂಭವಿ ಮುದ್ರೆ ಎನ್ನುವುದಿಲ್ಲ, ಶಾಂಭವಿ ಮುದ್ರೆಯಲ್ಲಿ ಕುಳಿತ ಭಂಗಿಯನ್ನು ಗೆರೆಗಳ ಮೂಲಕ ಚಿತ್ರಿಸಿದಾಗ ಅದು ಪಂಚಕೋನದ ಆಕಾರ ತಳೆಯುತ್ತದೆ. ಶಂಭು ಎಂಬ ಪದದಿಂದ ಶಾಂಭವಿ ಎಂಬ ಹೆಸರು ಬಂದಿರಲು ಸಾಧ್ಯವಿದೆ. ಈ ವಿಶಿಷ್ಟ ಬಗೆಯ ಯೋಗ ಮುದ್ರೆ ಶಂಭು(ಶಿವ)ವಿನ ಕೊಡುಗೆಯಾಗಿರುವುದರಿಂದ ಆ ಹೆಸರು ಬಳಕೆಗೆ ಬಂದಿರಲೂ ಬಹುದು.

-

? ಗುರು-ವಿರಕ್ತರು ಒಂದಾದುದು ಒಂದು ಮಹಾನ್ ಸಾಧನೆ ಎಂದೇ ಕೆಲವರು ಬಣ್ಣಿಸುತ್ತಾರಲ್ಲ?

★ ಸಾಧನೆ ಮಹಾನ್ ಅಥವಾ ಅಲ್ಲವೋ ಎಂಬುವುದು ನಂತರದ ಫಲಶುತ್ರಿಯಿಂದ ತಿಳಿಯುತ್ತದೆ. ಒಂದು ವೇದಿಕೆ ಮೇಲೆ ಎಲ್ಲರೂ ಕುಳಿತ ಮಾತ್ರಕ್ಕೆ ಒಂದಾದಂತೆ ಆಗುವುದೆ ? ನವಗ್ರಹಗಳು ಒಂದೇ ಕಟ್ಟೆಯ ಮೇಲಿದ್ದರೂ ಒಂದರ ಮುಖ ಒಂದು ನೋಡುವುದಿಲ್ಲ. ಸೈದ್ಧಾಂತಿಕವಾಗಿ, ತಾತ್ತ್ವಿಕವಾಗಿ, ಆದರ್ಶಗಳ ಆಚರಣೆಯ ಮೂಲಕ ಒಂದಾಗಬೇಕು. ಪಂಚಾಚಾರ್ಯರು ವೀರಶೈವದ ಮೂಲ ಪುರುಷರು ರೇಣುಕಾಚಾರ್ಯರು ಎಂಬ ಪೌರಾಣಿಕ ಕಲ್ಪನೆ ನಂಬುತ್ತಾರೆ. ವಿರಕ್ತರು ಮಂತ್ರಪುರುಷ ಬಸವಣ್ಣನವರೇ ಲಿಂಗಾಯತ ಧರ್ಮದ ಸ್ಥಾಪಕರು ಎನ್ನುತ್ತಾರೆ. ಆದ್ದರಿಂದ ವಿರಕ್ತರು ತಮ್ಮ ನಂಬಿಕೆ ತೊರೆದು ಪಂಚಪೀಠದವರ ಪೌರಾಣಿಕ ಕಲ್ಪನೆಗೆ ಬದ್ಧರಾದರೊ ? ಅಥವಾ ಪಂಚಪೀಠಾಧೀಶರು ಪ್ರಗತಿಪರ ಚಿಂತಕರಾಗಿ ಬಸವಣ್ಣನವರೇ ಧರ್ಮಗುರು ಎಂಬುದಕ್ಕೆ ಬದ್ಧರಾದರೊ ಎಂಬುದು ಸ್ಪಷ್ಟವಾದಾಗಲಷ್ಟೆ ಉಭಯತರು ಒಂದಾದ ಸತ್ಯ ಮನದಟ್ಟಾಗುವುದು. ಇಲ್ಲದಿದ್ದರೆ ವಾಜಪೇಯಿ ಲಾಹೋರಿಗೆ ಹೋಗಿ ಮುಷರಫ್ ಕೈಕುಲುಕಿ ಬಂದಷ್ಟೆ ಪ್ರಯೋಜನಕಾರಿ !

– ಷಡಕ್ಷರಪ್ಪ ಜಿನಕೇರಿ, ಭದ್ರಾವತಿ

? ಕೂಡಲ ಸಂಗಮದಲ್ಲಿ ಗುರು-ವಿರಕ್ತರ ಒಂದು ಬೃಹತ್ ಸಮಾವೇಶವಾಗಲಿದೆಯಂತೆ. ಈ ಬಗ್ಗೆ ನಿಮಗೆ ಆತಂಕವೋ, ಮತ್ಸರವೊ, ಅಸಹನೆಯೊ ?

★ ಸಂತೋಷ; ಏಕೆಂದರೆ ಎಲ್ಲರೂ ಈ ಕ್ಷೇತ್ರಕ್ಕೆ ಬರುವಂತಾಗಬೇಕು ಎಂಬುದೇ ನಮ್ಮ ಬಯಕೆಯಾಗಿತ್ತು. ಒಂದು ಕುಟುಂಬ ಬಡತನದಲ್ಲಿ ಇರುತ್ತೆ ಎಂದುಕೊಳ್ಳಿರಿ. ಆಗ ಅವರ ಮಗ ವಿದ್ಯಾಭ್ಯಾಸ ಮಾಡುತ್ತಿದ್ದರೆ ಬಂಧು ಬಳಗದವರು ದೂರದೂರವೇ ಇರುತ್ತಾರೆ, ಎಲ್ಲಿ ಸಹಾಯ ಕೇಳುತ್ತಾರೋ ಎಂದು. ಅವನು ಹೇಗೋ ಓದಿ ದೊಡ್ಡ ಅಧಿಕಾರಿಯಾಗಿ ಕೈ ತುಂಬ ಸಂಪಾದನೆ ಮಾಡತೊಡಗಿದರೆ ಆಗ ಬಂಧು ಬಳಗದವರು ಹೆಣ್ಣು ಕೊಡಲು ನಾ ಮುಂದೆ, ತಾ ಮುಂದೆ ಎಂದು ಬರುತ್ತಾರೆ. ಅದೇ ರೀತಿ, ದಯನೀಯ ಸ್ಥಿತಿಯಲ್ಲಿ ಇದ್ದಾಗ ಕಣ್ಣೆತ್ತಿದೂ ನೋಡದಿದ್ದ ಮಠಾಧೀಶರು, ಗಣ್ಯರು ಈಗ ಚೆಂದವಾಗಿ ಕಾಣುತ್ತಿರುವ ಕೂಡಲ ಸಂಗಮವನ್ನು ನೋಡಲು ಬಂದರೆ ನಮಗೆ ಸಂತೋಷವೋ ಸಂತೋಷ !

– ವಚನ ಸುಧಾ, ಚಿತ್ರದುರ್ಗ

? ನಾವು ಬಸವ ಕಲ್ಯಾಣದಲ್ಲಿ ನಡೆದ ಕಲ್ಯಾಣ ಪರ್ವಕ್ಕೆ ಬಂದಿದ್ದಾಗ, ಬಸವ ಕಲ್ಯಾಣದ ಬಸವೇಶ್ವರ ದೇವಸ್ಥಾನ ನೋಡಲು ಹೋದೆವು. ದೇವಸ್ಥಾನದವರು ಒಳಗೆ ಬಿಡದೆ ತಡೆದರು. ತುಂಬಾ ದುಃಖವಾಯಿತು, ಅಳು ಬಂದಿತು !

★ ಕಾಲೇಜಿನಲ್ಲಿ ಓದುವಾಗ ನಾನು ಒಮ್ಮೆ ಒಬ್ಬ ಜನಪದ ಗಾಯಕರ ಬಾಯಲ್ಲಿ ಒಂದು ಹಾಡು ಕೇಳಿದ್ದೆ, "ತವರೂರ ಮನೆ ನೋಡ ಬಂದೆ. ತಾಯಿ ನೆನಪಾಗಿ ಬಾಗಿಲಲಿ ನಿಂದೆ ". ಓರ್ವ ಹೆಣ್ಣು ಮಗಳು ಗಂಡನ ಮನೆಯಿಂದ ತೌರಿನ ಪ್ರೀತಿ ಬಯಸಿ ಬರುತ್ತಾಳೆ. ತಾಯಿ-ತಂದೆ ಸತ್ತು ಹೋಗಿರುತ್ತಾರೆ. ಅಣ್ಣ-ಅತ್ತಿಗೆಯ ಕಾರುಭಾರು ನಡೆದಿರುತ್ತದೆ. ಅಣ್ಣನಿಗೆ ಮನಸ್ಸಿನಲ್ಲಿ ತಂಗಿಯ ಬಗ್ಗೆ ಕೊಂಚ ಮಮತೆಯ ಸೆಳೆತ ಇದ್ದರೂ ಪತ್ನಿಯ ಆರ್ಭಟಕ್ಕೆ ಹೆದರಿ ತಂಗಿಯನ್ನು ಒಳಗೆ ಬರಮಾಡಿಕೊಳ್ಳುವುದಿಲ್ಲ, ಆಗ ಅವಳು ಅನುಭವಿಸುವ ವೇದನೆ ಆ ಗೀತೆಯಲ್ಲಿ ಹರಿಯುತ್ತಿತ್ತು. ಅದು ನನ್ನ ಮೇಲೆ ಎಷ್ಟು ಪರಿಣಾಮ ಬೀರಿತ್ತೆಂದರೆ ಎರಡು ಮೂರು ದಿವಸ ದುಃಖದಿಂದ ಹೊರಬರಲಾಗಲಿಲ್ಲ. ಅಪ್ಪ ಬಸವಣ್ಣ, ಅವ್ವ ವಚನ ಸಾಹಿತ್ಯ ಇಲ್ಲದ ತೌರಾಗಿದ್ದ ಕಲ್ಯಾಣಕ್ಕೆ ನೀವು ಬಂದಿದ್ದಿರಿ. ಬಸವ ಕಲ್ಯಾಣದ ಜನತೆಯಲ್ಲಿ (ಅಣ್ಣನಲ್ಲಿ) ನಿಮ್ಮನ್ನು ಬರಮಾಡಿಕೊಳ್ಳಬೇಕೆಂಬ ಹಂಬಲ ಇದ್ದರೂ ಕೆಲವು ದುರ್ಜನರ ಆಟಾಟೋಪಕ್ಕೆ ಹೆದರಿ ಅವರು ಮೌನವಾಗಿದ್ದರು. " ಬಸವಣ್ಣನಿಲ್ಲದ ಕಲ್ಯಾಣಕ್ಕೆ ನಾನು ಬರುವುದಿಲ್ಲ "ಎಂದು ಸ್ವತಃ ಸಿದ್ಧರಾಮೇಶ್ವರರೇ ನುಡಿದಿದ್ದರು. ಇನ್ನು ಆ ಚಿಂತೆ ಬೇಡ. ಧರ್ಮಪಿತ ಬಸವಣ್ಣನವರು, ಷಡ್ ಗಣಾಧೀಶರು ಜ್ಯೋತಿಯ ರೂಪದಲ್ಲಿ ಆಗಮಿಸಿದ್ದಾರೆ. ನಾವು-ನೀವೆಲ್ಲ ಶರಣರಿಗೆ ಶರಣಾರ್ಥಿ ಸಲ್ಲಿಸಿ ಅವರ ಚೈತನ್ಯವನ್ನು ಬರಮಾಡಿಕೊಂಡಿದ್ದೇವೆ. ಇನ್ನಾವ ಚಿಂತೆ ಇಲ್ಲದಂತೆ ಕಲ್ಯಾಣ ಪರ್ವ ಸಾಗುತ್ತದೆ.

– ಚಂದ್ರಕಾಂತ್ ಬಿರಾದಾರ, ರಾ. ಬ. ದ ಶರಣರು, ಗುಲಬರ್ಗಾ

? ಬಸವ ತತ್ತ್ವ ನಿಷ್ಠರು ಯಾವ ಊರಲ್ಲೇ ಇರಲಿ, ಅವರು ಪೂಜ್ಯ ಲಿಂಗಾನಂದ ಅಪ್ಪಾಜಿಯವರಿಂದ, ತಮ್ಮಿಂದ ಪ್ರಭಾವಿತರಾದವರು. ಅವರು ಸ್ಥಳೀಯ ಕಾರ್ಯಕರ್ತರ

ಕಾರಣದಿಂದಲೋ, ಅಧಿಕಾರ ಬಯಸಿಯೋ, ಹಣ ಬಯಸಿಯೋ ಹೊರಗೆ ಹೇಗಿ ಬಸವ ಕೇಂದ್ರಗಳಲ್ಲಿ ಸೇರಿದರು. ಅದರ ಮುಖ್ಯಸ್ಥರ ಆದೇಶದಂತೆ ನಿಮ್ಮನ್ನು, ನಮ್ಮನ್ನು ವಿರೋಧಿಸಿದರು. "ಲಿಂಗದೇವ "ವಚನಾಂಕಿತದ ನೆಪ ಸಿಕ್ಕ ಮೇಲೆ ಅವರ ಹಾರಾಟ ಇನ್ನೂ ಜಾಸ್ತಿಯಾಯಿತು. ಆದರೆ ಬಸವ ಕೇಂದ್ರದ ಅಧ್ವರ್ಯುಗಳ ಅಕ್ರಮಗಳು ಬಯಲಿಗೆ ಬರುತ್ತಿದ್ದಂತೆಯೇ ಈ ಬಸವ ಭಕ್ತರು ಪೆಚ್ಚಾಗಿ ಬಿಟ್ಟಿದ್ದಾರೆ. ಈಗ ಸ್ವಾಮಿಗಳು ವೀರಶೈವ ಪಂಚ ಪೀಠಾಧೀಶರ ಜೊತೆ ಕೈಜೋಡಿಸಿದ ಮೇಲಂತೂ, ತೇಲುಗಣ್ಣು, ಮೇಲುಗಣ್ಣು ಮಾಡುತ್ತಿದ್ದಾರೆ. ತತ್ತ್ವನಿಷ್ಠೆ ಇಲ್ಲದ ಸ್ವಾಮಿಗಳ ಬೆನ್ನು ಹಿಡಿದು ಎಂಥಾ ಫಜೀತಿ ಆಯಿತು ಎಂದು ಕೈಕೈ ಹಿಚುಕಿಕೊಳ್ಳುತ್ತಿದ್ದಾರೆ. ಈಗ ನಮ್ಮೊಡನೆ ಬರುವ ಆಲೋಚನೆ ಬಂದಿದೆ. ಆದರೆ ಲಿಂಗದೇವ ವಿಷಯದಲ್ಲಿ ಕೆಟ್ಟ ರೀತಿಯಲ್ಲಿ ವಿರೋಧ ಮಾಡಿ ಈಗ ಸೇರಿಕೊಳ್ಳುವುದು ಹೇಗೆ ಎಂಬುದು ಒಂದು ಸಂಕಟವಾದರೆ, ಲಿಂಗದೇವನ ವಿರುದ್ಧ ಹೋರಾಡಿ ಪುನಃ ಅದನ್ನು ಒಪ್ಪಿಕೊಳ್ಳುವುದು ಹೇಗೆ ಎಂಬ ಅಭಿಮಾನ ಕಾಡುತ್ತಿದೆ. ನೀವು ಅದನ್ನು ವಾಪಸ್ಸು ತೆಗೆದುಕೊಂಡರೆ ಆಗ ಅವರು ಸೇರಿಕೊಳ್ಳಲು ಅನುಕೂಲವಾಗುತ್ತದೆ ಎಂದು ಅಂಥ ಕೆಲವರ ಅಭಿಪ್ರಾಯ. ನಿಮ್ಮ ಅನಿಸಿಕೆ ಏನು ?

★ ಅವರ ಅಭಿಪ್ರಾಯ ತುಂಬಾ ತಮಾಷೆಯದಾಗಿದೆ. ಒಮ್ಮೆ ಒಂದು ಮೇಕೆ ಪಕ್ಕದ ಮನೆಯವರು ಬಿಸಿಲಲ್ಲಿ ಒಣಗಲು ಇಟ್ಟ ಧಾನ್ಯದ ಆಸೆಗೆ ಮಡಿಕೆಯಲ್ಲಿ ತಲೆ ತೂರಿಸಿತು. ಮಡಿಕೆ ಸಿಕ್ಕಿಹಾಕಿಕೊಂಡಿತು. ಆಗ ಅದು ಕಣ್ಣುಕಾಣದೆ ಪರದಾಡಿ, ಓಡಾಡ ತೊಡಗಿತು. ನೆರೆ ಮನೆಯವರು ತಮಗೆ ಮಡಿಕೆ ಬೇಕೆಂದು ಜಗಳ ತೆಗೆದಾಗ ಈ ತರಲೆ ಗಾಂಪಗುರುಗಳ ಮುಂದೆ ಹೋಯಿತು. ಅವರು ಹೇಳಿದರು, "ಮೇಕೆಯ ತಲೆ ಕಡಿದು ಮಡಿಕೆ ಬಿಡಿಸಿ ನೆರೆ ಮನೆಯವರಿಗೆ ಕೊಡಿರಿ "ಎಂದು. ಮೇಕೆ ಬೆಲೆ ಏನು? ಮಡಿಕೆ ಬೆಲೆ ಏನು ? ಮಡಿಕೆ ಒಡೆದು ಮೇಕೆ ತಲೆ ಬಿಡಿಸುವ ಬದಲು, ಹಣ ಕೊಟ್ಟು ಮಡಿಕೆ ಕೊಡಿಸುವುದು ಸೂಕ್ತವಾಗುತ್ತಿತ್ತಲ್ಲವೆ ? ಅದರಂತೆ ಇವರ ಅಭಿಪ್ರಾಯವೂ ಗಾಂಪಗುರುಗಳ ಸಲಹೆಯಂತೆ ಆಗದೆ ? ತಾವು ಅಜ್ಞಾನ-ಅಹಂಕಾರದ ಮುಸುಕು ತೊಟ್ಟು, ಹೊರಹೋಗಿ ಗದ್ದಲ ಮಾಡಿದರು. ಇದಕ್ಕಾಗಿ ನಾವು ಲಿಂಗದೇವ ಎಂಬ ತಾತ್ತ್ವಿಕ ಪದದ ತಲೆ ತೆಗೆಯಬೇಕೆ ? ಅವರು ಅಜ್ಞಾನ-ಅಹಂಕಾರದ ಮಡಿಕೆ ಒಡೆದು ಹಾಕಿದರೆ ಸಾಕು. ತತ್ತ್ವನಿಷ್ಠರಲ್ಲದ ಬಸವ ಕೇಂದ್ರದ ಅಧ್ವರ್ಯುಗಳು ಪಂಚಾಚಾರ್ಯರ ಜೊತೆ ಸೇರಿ ತತ್ತ್ವಭ್ರಷ್ಟತೆಗೆ ಈಡಾದರೆಂದು ನಮ್ಮ ದಾರಿಗೆ ಬರುವ ಆಸೆ ನಿಮ್ಮ ಮಿತ್ರರದಲ್ಲವೆ ? ಇಂಥವರನ್ನು ಸೇರಿಸಿಕೊಳ್ಳಲು ನಾವು ಲಿಂಗದೇವ ಪಲ್ಲಟಿಸಿದರೆ ಆಗ ನಾವೂ ತತ್ತ್ವಭ್ರಷ್ಟರ ಸಾಲಿಗೆ ಸೇರುತ್ತೇವೆಯಷ್ಟೆ. ಸತ್ಯಕ್ಕೆ ಹಲವಾರು ಮುಖಗಳಿರದು ಒಂದೇ ಮುಖ ಇರುತ್ತದೆ. ಆದ್ದರಿಂದ ಅದನ್ನು ಸ್ಥಿರವಾಗಿ ಅರಿತು ಹಿಡಿಯಬೇಕಾಗುತ್ತದೆ.

– ಬಿ. ಕೆ. ಮಹಾದೇವಮ್ಮ, ಬೆಂಗಳೂರು

? ' ಸ್ವಪ್ನ ಲೋಕ 'ವೆಂಬ ಮಾಸಿಕ ಪತ್ರಿಕೆಯಲ್ಲಿ ಡಾ|| ಎಂ. ಚಿದಾನಂದ ಮೂರ್ತಿಯವರು, "ವಚನಗಳಲ್ಲಿ ದೇವಾಲಯಗಳ ನಿರಾಕರಣೆಯ ಬಗ್ಗೆ ಪ್ರಸ್ತಾಪವಿದೆಯಾದರೂ ಅದು ಸಂಪೂರ್ಣ ಸತ್ಯವಲ್ಲ. ಬಸವಣ್ಣ ತನ್ನ ಕಡೆಯ ದಿನಗಳನ್ನು ಕೂಡಲಸಂಗಮದ ಸಂಗಮೇಶ್ವರ ದೇವಸ್ಥಾನದ ಬಳಿಯಲ್ಲಿ, ಅಕ್ಕಮಹಾದೇವಿ ಶ್ರೀಶೈಲದ ಚೆನ್ನಮಲ್ಲಿಕಾರ್ಜುನನಲ್ಲಿ ಕಳೆದರು ಎಂಬುದು ಗಮನಾರ್ಹ. ಅಂದರೆ ಶಿವಾಲಯದ ಸ್ಥಾವರ ಲಿಂಗವನ್ನೇ ಗಾತ್ರದಲ್ಲಿ ಆಕಾರದಲ್ಲಿ ಚಿಕ್ಕದಾದ ಇಷ್ಟಲಿಂಗವೆಂದು

ಪರಿಭಾವಿಸಿದರು. ಕಾರಣ ಆ ಕಾಲದಲ್ಲಿ ಅಸ್ಪೃಶ್ಯರಿಗೆ ದೇವಾಲಯಗಳಲ್ಲಿ ಪ್ರವೇಶವಿರಲಿಲ್ಲ ಹಾಗೂ ಸಮಾನತೆ ತರಲು ದೇವಾಲಯವನ್ನು ನಿರಾಕರಣೆ ಮಾಡಿ ಇಷ್ಟಲಿಂಗದ ಆಚರಣೆಯನ್ನು ವಚನಕಾರರು ಜಾರಿಗೆ ತಂದರು" ಎಂದಿದ್ದಾರೆ.

ನಾವು ಧರಿಸುವುದು ಗೋಲಾಕಾರದ ಲಿಂಗ. ಇವರು ಹೇಳುವುದು ಸ್ಥಾವರಲಿಂಗವನ್ನು ಚಿಕ್ಕದಾಗಿಸಿ ಇಷ್ಟಲಿಂಗ ಎಂದಿರುವರು ಎಂದು ಹಾಗಾದರೆ ಲಿಂಗವಂತರಾದ ಚಿದಾನಂದ ಮೂರ್ತಿಯವರು ಯಾವ ಲಿಂಗ ಧರಿಸಿರುವರು ?

★ ಚಿದಾನಂದ ಮೂರ್ತಿಯವರು ನಯವಂಚಕ ಭಾಷೆಯಲ್ಲಿ ಬಸವಾದಿ ಪ್ರಮಥರ ತತ್ತ್ವದ ವಿನಾಶದಲ್ಲಿ ತೊಡಗಿದ್ದಾರೆ. ಮೊದಲಿನಿಂದಲೂ ಒಳಗೇ ವಂಚನೆ ನಡೆಯುತ್ತಿತ್ತು. ಬಿ.ಜೆ.ಪಿ ಪ್ರಚಾರಕರಾಗಿ ವೈದಿಕ ಧರ್ಮದ ಆರಾಧಕರಾದ ಮೇಲೆ ಬಹಿರಂಗವಾಗಿ ಕೆಡುಕನ್ನು ಉಂಟು ಮಾಡುತ್ತಿದ್ದಾರೆ. 1973 ರ ಸುಮಾರಿಗೆ ನಮ್ಮ ಒಂದು ಕಾರ್ಯಕ್ರಮಕ್ಕೆ ಅತಿಥಿಗಳಾಗಿ ಆಹ್ವಾನಿಸಲ್ಪಟ್ಟಿದ್ದರು. ಆಗ ತಮ್ಮ ಭಾಷಣದಲ್ಲಿ ಸ್ಥಾವರ ಲಿಂಗ - ಇಷ್ಟಲಿಂಗ ಒಂದೇ ಎಂದು ಹೇಳಿದಾಗ ಓರ್ವ 13 ವರ್ಷದ ಬಾಲಕಿ ಎರಡೂ ಒಂದೇ ಇದ್ದರೆ ಶರಣರು ಸ್ಥಾವರ ಲಿಂಗದ ಆರಾಧನೆಯನ್ನು ಏಕೆ ನಿಷೇಧಿಸುತ್ತಿದ್ದರು ಎಂದು ಪ್ರಶ್ನಿಸಿದಾಗ ಉತ್ತರಿಸಲು ಅಸಮರ್ಥರಾದರು. ಇವರು ಯಾವ ಲಿಂಗ ಧರಿಸಿದ್ದಾರೆ ಎಂದು ಕೇಳಿದ್ದೀರಿ. ಅವರು ಯಾವುದನ್ನೂ ಧರಿಸದೆ ಬೋಳು ಎದೆಯಿಂದ ಓಡಾಡುತ್ತಿದ್ದುದನ್ನು ಅವರ ಭೇಟಿಗೆ ಹೋದ ಕಾರ್ಯಕರ್ತರು ಬಂದು ತಿಳಿಸಿದರು. ಅವರಿಗೇ ಲಿಂಗನಿಷ್ಠೆಯಿಲ್ಲ. ಇನ್ನು ಇಷ್ಟಲಿಂಗ ನಿಷ್ಠೆ, ಏಕದೇವೋಪಾಸನೆ ಅವರಿಗೆ ಅರ್ಥವಾಗುವುದಾದರೂ ಹೇಗೆ ? ಕೂಡಲ ಸಂಗಮಕ್ಕೆ ನಾವು ಹೋಗಿದ್ದೇವೆ, ಮಠ ಕಟ್ಟಿದ್ದೇವೆ. ಅಲ್ಲಿರುವ ಸಂಗಮೇಶ್ವರ ಲಿಂಗಕ್ಕಾಗಿ ಹೋಗಿದ್ದೇವೆಯೆ ? ಬಾಲ್ಯದಲ್ಲಿ ಸಂಗಮೇಶ್ವರನ ಆರಾಧಕರಾಗಿ ಹೋಗಿದ್ದರೂ, ಸ್ವತಂತ್ರ ಧರ್ಮ ದ್ರಷ್ಟಾರರಾದ ಮೇಲೆ ಬಸವಣ್ಣನವರು ಇಷ್ಟಲಿಂಗ ನಿಷ್ಠೆ ಅಳವಡಿಸಿಕೊಂಡಿದ್ದಾರೆಯೇ ವಿನಾ ಸ್ಥಾವರಲಿಂಗ ಪೂಜೆಗಾಗಿ ಹೋಗಿಲ್ಲ ಮತ್ತು ಆ ವೇಳೆಗಾಗಲೇ ಜಾತವೇದ ಮುನಿಗಳ ನಂತರ ಗುರುಕುಲದ ಅಧಿಪತಿಯಾದ ದೇವರಾಜ ಮುನಿ ತನ್ನ ಪಾಶುಪತ ಶೈವ ಸಂಪ್ರದಾಯವನ್ನು ಬಿಟ್ಟು ಲಿಂಗಾಯತ ಧರ್ಮವನ್ನು ಸ್ವೀಕರಿಸಿದ್ದ. ಎರಡು ನದಿಗಳ ಕೂಟಸ್ಥಾನ, ಸುಂದರ ಪರಿಸರ ಹೊಂದಿದ್ದ ತಮ್ಮ ಬಾಲ್ಯವನ್ನು ಕಳೆದ ಸ್ಥಳದ ಆಕರ್ಷಣೆಯಿಂದ ಅಲ್ಲಿಗೆ ಹೋಗಿದ್ದಾರೆ. ಜನರು ಸಾಹಿತ್ಯ ಓದುವುದಿಲ್ಲ, ತಾವೇ ಮಹಾನ್ ಪಂಡಿತರು ಎಂಬ ಭ್ರಮೆ ಈ ಕೆಲವು ಸಾಹಿತಿಗಳಲ್ಲಿದೆ. ಆದರೆ ವಚನ ಸಾಹಿತ್ಯಾಭ್ಯಾಸಿ ಸಾಧಕರು ಎಷ್ಟು ಚಿಂತನೆ ಮಾಡಿರುತ್ತಾರೆ ಎಂಬುದು ಇವರುಗಳಿಗೆ ತಿಳಿದಿಲ್ಲ. ಅದಕ್ಕೆ ಬಾಯಿಗೆ ಬಂದಂತೆ ಬರೆಯುತ್ತಾರೆ. ಅಕ್ಕಮಹಾದೇವಿ ಶ್ರೀಶೈಲದ ಮಲ್ಲಿಕಾರ್ಜುನನ ಗುಡಿಯೊಳಗಿರುವ ಸ್ಥಾವರ ಲಿಂಗ ಬಯಸಿ ಹೋಗಲಿಲ್ಲ. ಆಕೆಯಾಗಲೇ ಅನುಭವ ಮಂಟಪದಲ್ಲೇ ಅತ್ಯುನ್ನತ ಅನುಭಾವಿಕ ಸ್ಥಿತಿ ಮುಟ್ಟಿದ್ದಳು. ಇಚ್ಛಾಮರಣ ಎಂಬ ಯೋಗ ತಂತ್ರ (Yoga Technic) ವನ್ನು ಪ್ರಯೋಗಿಸಬಯಸಿ ದೇಹವನ್ನು ವಿಸರ್ಜಿಸಲು ಸೂಕ್ತ ಸ್ಥಳ ಯಾವುದು ಎಂದು ಅಲ್ಲಮ ಪ್ರಭುವನ್ನು ಕೇಳುತ್ತಾಳೆ

ಕರ್ಮವೆಂಬ ಕದಳಿ ಎನಗೆ ಕಾಯವೆಂಬ ಕದಳಿ ನಿಮಗೆ,
ಮಾಟವೆಂಬ ಕದಳಿ ಬಸವಣ್ಣಂಗೆ, ಭಾವವೆಂಬ ಕದಳಿ ಚನ್ನಬಸವಣ್ಣಂಗೆ,

ಬಂದಬಂದ ಭಾವ ಸಲೆ ಸಂದಿತ್ತು, ಎನ್ನಂಗದವಸಾನವ ಹೇಳಾ ಚನ್ನಮಲ್ಲಿಕಾರ್ಜುನಾ

ಶರೀರವನ್ನು ವಿಸರ್ಜಿಸುವ ಬಗೆ ಮತ್ತು ಸ್ಥಳದ ಬಗ್ಗೆ ಕೇಳಿದಾಗ ಅಲ್ಲಮ ಪ್ರಭುದೇವರು ಹೇಳುತ್ತಾರೆ :

ನೀನಾನೆಂಬ ಉಭಯ ಸಂಗವಳಿದು ತಾನು ತಾನಾದ
ತ್ರಿಕೂಟವೆಂಬ ಮಹಾಗಿರಿಯ ತುಟ್ಟತುದಿಯ ಮೆಟ್ಟಿನೋಡಲು
ಬಟ್ಟಬಯಲು ಕಾಣಬಹುದು ನೋಡಾ.
ಆ ಬಯಲ ಬೆರಸುವರೆ ತ್ರಿಕೂಟ ಗಿರಿಯೊಳಗೊಂದು
ಕಾಣಬಾರದ ಕದಳಿಯುಂಟು ನೋಡಾ. ಕದಳಿಯ ಕಳದಲ್ಲಿ ಒಳಹೊಕ್ಕು ನೋಡಲು
ತೊಳಗಿ ಬೆಳಗುವ ಜ್ಯೋತಿಯುಂಟು ಕೇಳಾ. ನಡೆಯಲ್ಲಿಗೆ ತಾಯೇ. ಗುಹೇಶ್ವರ ಲಿಂಗದಲ್ಲಿ
ಪರಮ ಪದವಿ ನಿನಗೆ ಸ್ವಯವಹುದು ನೋಡಾ.

ಅಲ್ಲಮ ಪ್ರಭುಗಳು ಶ್ರೀಶೈಲ ಚನ್ನಮಲ್ಲಿಕಾರ್ಜುನನ ಗುಡಿಗೆ ಹೋಗು ಎಂದು ಹೇಳಿದರೆ ? ಇಲ್ಲ. ಕಾಣಬಾರದ ಕದಳಿ-ಅರಣ್ಯದ ಮಧ್ಯೆ, ವಿಶಾಲವಾದ ಬಂಡೆಗಲ್ಲಿನ ಕೆಳಗಿರುವ ನಿರ್ಜನವಾದ ಗವಿ ಈ ಇಚ್ಛಾಮರಣಕ್ಕೆ ಸೂಕ್ತ ಸ್ಥಳ ಎಂದರು. ಆದಕ್ಕೆ ನಾನು ಹೇಳುವುದು, ಕೂಡಲ ಸಂಗಮದೇವಾ, ಚನ್ನಮಲ್ಲಿಕಾರ್ಜುನ ಎಂಬ ವಚನಾಂಕಿತಗಳು ನಿರ್ದೇಶಿಸುವುದು ನಿರಾಕಾರ ದೇವರನ್ನು ಆಗಿದ್ದರೂ ನಿಷ್ಠೆ ಇಲ್ಲದ ಸಾಹಿತಿಗಳು ಈ ವಚನಾಂಕಿತ ಹಿಡಿದು ಜನರನ್ನು ದಿಕ್ಕು ತಪ್ಪಿಸುತ್ತಾರೆ ಎಂದು ಮತ್ತು ಇಂಥ ಧೂರ್ತ ಪುರೋಹಿತ ಶಾಹಿಗಳೇ 15-16 ನೇ ಶತಮಾನದಲ್ಲಿ ಸಾಕ್ಷಾತ್ಕಾರದ ನಂತರ ಬಸವಣ್ಣನವರು ಬಳಸಿರುವ ಲಿಂಗದೇವ ವಚನಾಂಕಿತ ಬದಲಿಸಿ ಪುನಃ ಹಳೆಯದನ್ನು ಇಟ್ಟಿರಬಹುದೆಂದು ನನ್ನ ಊಹೆ.

- ರಾಜೇಶ್ವರಿ ಪಾಟೀಲ್, ಬೆಂಗಳೂರು

? ಒಂದು ಕಡೆ ನೋಡಿದೆವು, ಸ್ವಾಮಿಗಳಿಗೆ ಪುಷ್ಪ ವೃಷ್ಟಿ ಮಾಡುವುದನ್ನು. ಮೊದಲು ಈ ಪದ್ಧತಿ ಇರಲಿಲ್ಲ. ನೀವು ಮಾಡುವುದನ್ನೇ ಕಾಪಿ ಮಾಡುತ್ತಿದ್ದಾರೆ ಎನ್ನಿಸಿ ಅವರ ಶಿಷ್ಯರಿಗೆ ತಿಳಿಸಿದೆವು. ತಮ್ಮ ಅಭಿಪ್ರಾಯವೇನು ?

★ ಅದನ್ನು 'ಕಾಪಿ' ಎಂದೇಕೆ ತಿಳಿಯುತ್ತೀರಿ, ಅನುಸರಣೆ ಎಂದು ತಿಳಿಯಿರಿ. ನಾವೀಗ ಎಷ್ಟೋ ಆಚರಣೆಗಳನ್ನು, ನಂಬಿಕೆಗಳನ್ನು ಪ್ರಚಾರ ಮಾಡಿ ರೂಢಿಗೆ ತರುತ್ತಿದ್ದೇವೆ. ಅದರ ಉದ್ದೇಶ ನಾವು ನಮ್ಮ ಅಭಿಮಾನಿಗಳಷ್ಟೇ ಆಚರಿಸಬೇಕೆಂದಲ್ಲ; ಇಡೀ ಸಮಾಜವೇ ಆಚರಣೆಗೆ ತರಬೇಕೆಂದು. ಆದ್ದರಿಂದ ಅದನ್ನು ಅಳವಡಿಸಿಕೊಂಡಾಗ ಮೆಚ್ಚಿ ಕೊಳ್ಳಬೇಕು, ಚುಚ್ಚಿ ಆಡಲು ಹೋಗಬಾರದು.

ಮುಂಬರುವ ದಿನಗಳಲ್ಲಿ ಒದಗುವ ಹಬ್ಬ-ಹುಣ್ಣಿಮೆ-ಉತ್ಸವಗಳು

1. ದಿ. 16-4-2003 ಅಕ್ಕಮಹಾದೇವಿ ಜಯಂತಿ
2. ದಿ. 30-4-2003, 1-5-03 ಮತ್ತು 2-5-03 ಬಸವ ಕಲ್ಯಾಣದಲ್ಲಿ ಕಲ್ಯಾಣ ಪರ್ವ
3. ದಿ. 1-05-2003 ಮಡಿವಾಳ ಮಾಚಿದೇವ ಜಯಂತಿ
4. ದಿ. 4-05-2003 ಬಸವ ಜಯಂತಿ.

ಅಭಯ ಮುದ್ರೆಯ ಗುರು ಬಸವಣ್ಣನವರ ಅಮೃತ ಶಿಲಾ ಮೂರ್ತಿಗಳು ಲಭ್ಯ

ಬಸವ ಮಂಟಪಗಳಲ್ಲಿ ಅಭಯ ಮುದ್ರೆಯ ಬಸವಣ್ಣನವರ ಮೂರ್ತಿಯನ್ನಿಟ್ಟಾಗ ಅದಕ್ಕೆ ವಿಶೇಷ ಕಳೆಯು ಬರುವುದೆಂಬ ಅನುಭವ ಎಲ್ಲರಿಗೂ ಆಗುತ್ತಿದೆ. ಮೊಟ್ಟ ಮೊದಲನೆಯ ಅಂಥ ಮೂರ್ತಿ ಪ್ರಪ್ರಥಮವಾಗಿ ಕೂಡಲ ಸಂಗಮದಲ್ಲಿ ಪ್ರತಿಷ್ಠಾಪನೆ ಆಗಿ ನಂತರ ಕ್ರಮವಾಗಿ ಚಿತ್ರದುರ್ಗ ಬಸವ ಮಂಟಪ, ಬೆಂಗಳೂರಿನ ಬಸವ ಮಂಟಪ, ಗೋಕಾಕ್ ಬಸವ ಮಂಟಪ, ಇಚಲಕರಂಜಿ ಬಸವ ಮಂಟಪ, ಬೀದರ್ ಬಸವ ಮಂಟಪ, ಗುಲಬರ್ಗಾ ಬಸವ ಮಂಟಪ, ಬಿಜಾಪುರ ಬಸವ ಮಂಟಪ, ಗುಲಬರ್ಗಾ ಜಿಲ್ಲೆಯ ಸೇಡಂ ತಾಲ್ಲೂಕಿನ ಹಂಗರಗಿ ಬಸವ ಮಂಟಪ - ಹೀಗೆಲ್ಲ ಪ್ರತಿಷ್ಠಾಪನೆಗೊಂಡಿವೆ. ಇದೀಗ ಭದ್ರಾವತಿಯಲ್ಲಿ ನಿರ್ಮಾಣವಾಗುತ್ತಿರುವ ಬಸವ ಮಂಟಪಕ್ಕೆ 3.5 ಅಡಿಯ ಮೂರ್ತಿಯು ಸಿದ್ಧವಾಗಿದೆ. ಬೇರೆ ಊರುಗಳ, ಶರಣ ಬಂಧುಗಳು ತಮ್ಮ ಪ್ರಾರ್ಥನಾ ಮಂದಿರಗಳಲ್ಲಿ ಸ್ಥಾಪಿಸಲು ಇಷ್ಟಪಟ್ಟಲ್ಲಿ ಅಭಯ ಹಸ್ತದ ಬಸವ ಮೂರ್ತಿಯನ್ನು ಮಾಡಿಸಿಕೊಡಲಾಗುವುದು. ಆಸಕ್ತರು ಸಂಪರ್ಕಿಸಿರಿ.

ಮನೆಯ ಪೂಜಾ ಗೃಹದಲ್ಲಿ

ಏಕದೇವೋಪಾಸಕರು, ಏಕ ಗುರೂಪಾಸಕರೂ ಆಗುತ್ತಿರುವ ಶರಣ ಬಂಧುಗಳು ತಮ್ಮ ಮನೆಗಳಲ್ಲಿ ಇರಿಸಿಕೊಳ್ಳಲು ಅಮೃತ ಶಿಲಾ ಮೂರ್ತಿಗಳನ್ನು ಬೇಡಿಕೆ ಸಲ್ಲಿಸಿ, ಪಡೆದುಕೊಂಡು ತಮ್ಮ ಮನೆಗಳ ಪೂಜಾ ಗೃಹದಲ್ಲಿ ಪ್ರತಿಷ್ಠಾಪಿಸಿಕೊಳ್ಳುತ್ತಿದ್ದಾರೆ. ಇವರ ಸಂಖ್ಯೆ ಬಹಳವಿದೆ. ಪೂಜಾ ಗೃಹದಲ್ಲಿ, ನಡು ಮನೆಯಲ್ಲಿ ಅಮೃತ ಶಿಲಾ ಮೂರ್ತಿ ಇಟ್ಟರೆ ಬಹಳ ಚೆನ್ನಾಗಿ ಕಾಣಿಸುತ್ತದೆ. ಮನೆಗಳಲ್ಲಿ ಇಡಲು 18 ಇಂಚು(ಒಂದೂವರೆ ಅಡಿ)ಮತ್ತು 12 ಇಂಚು(ಒಂದು ಅಡಿ)ಮೂರ್ತಿಗಳು ಬಹಳ ಚೆನ್ನಾಗಿರುತ್ತವೆ. ಕಳೆದ ವರ್ಷ ತರಿಸಲ್ಪಟ್ಟ ಮೂರ್ತಿಗಳೆಲ್ಲ ಖರ್ಚಾಗಿ ಮತ್ತೆ ಬಹಳಷ್ಟು ಜನರು ಬೇಡಿಕೆ ಸಲ್ಲಿಸಿದ್ದಾರೆ. ಈಗ 18 ಮತ್ತು 12 ಅಂಗುಲದ ಮೂರ್ತಿಗಳು ಸಿದ್ಧವಾಗಿ ಬಂದಿವೆ. ಬೆಂಗಳೂರಿನ ಬಸವ ಮಂಟಪದಲ್ಲಿ ದೊರೆಯುತ್ತವೆ. ಕೂಡಲ ಸಂಗಮದ ಬಸವ ಧರ್ಮ ಪೀಠದಲ್ಲಿ ಮತ್ತು ಬಸವ ಕಲ್ಯಾಣದ ಬಸವ ಮಹಾಮನೆಯಲ್ಲಿ ಸಹ ಲಭ್ಯವಾಗಲಿವೆ.

ಪೇಪರ್‌ಪಲ್ಪ್ ಮತ್ತು ಪ್ಲಾಸ್ಟರ್ ಆಫ್ ಪ್ಯಾರಿಸ್ ಮೂರ್ತಿಗಳು

ಮನೆಯ ಶೋಕೇಸ್‌ದಲ್ಲಿ ಇಡಲು ಅತ್ಯಂತ ಸುಂದರವಾದ ಪೇಪರ್ ಮೌಲ್ಡ್ ಮೂರ್ತಿಗಳು 12 ಅಂಗುಲ ಎತ್ತರದವು ಸಿದ್ಧವಾಗಿವೆ. ಬಹಳ ವರ್ಷಗಳ ಪ್ರಯತ್ನದ ನಂತರ ಅಭಯ ಹಸ್ತದ ಭಂಗಿಯ ಪೇಪರ್ ಮೌಲ್ಡ್ ಮೂರ್ತಿಗಳು ಸಿದ್ಧವಾಗುತ್ತಿವೆ, ಸುಂದರವಾಗಿವೆ. ಇವು ಮುರಿಯುವುದಿಲ್ಲ. ಬೆಲೆ ರೂ. 600. ಕಲ್ಯಾಣ ಪರ್ವದಲ್ಲಿ ಖರೀದಿಸಲು ದೊರೆಯುತ್ತವೆ. ಕುರ್ಚಿಯ ಮೇಲೆ ಕುಳಿತ ಕಿರೀಟಧಾರಿ ಬಸವಣ್ಣನವರ ಮೂರ್ತಿಗಳು ಪ್ಲಾಸ್ಟರ್ ಆಫ್ ಪ್ಯಾರಿಸ್‌ನಿಂದ ತಯಾರಾದವು ಮಾರಾಟಕ್ಕೆ ಲಭ್ಯವಿದೆ. ಬೆಲೆ ರೂ. 250. ಬಸವ ಧರ್ಮ ಪೀಠದ ಎಲ್ಲ ಪುಸ್ತಕ ಮಳಿಗೆಯಲ್ಲೂ ಸಿಗುತ್ತವೆ.

ಗುಲಬರ್ಗಾ ನಗರದಲ್ಲಿ ವಿಶ್ವಧರ್ಮ ಪ್ರವಚನ ಕಾರ್ಯಕ್ರಮ

ವರದಿ : ಮಹಾಂತೇಶ್ ರಾಜಗೋಳಿ

ಗುಲಬರ್ಗಾ ನಗರದ ಖೂಬಾ ಗಾರ್ಡನ್‌ದಲ್ಲಿ ಜಗನ್ಮಾತಾ ಅಕ್ಕಮಹಾದೇವಿ ಅನುಭಾವ ಪೀಠಾಧ್ಯಕ್ಷೆ ದ್ವಿತೀಯ ಮಹಿಳಾ ಜಗದ್ಗುರು ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರ ಪ್ರವಚನವನ್ನು ಗುಲಬರ್ಗಾ ರಾಷ್ಟ್ರೀಯ ಬಸವ ದಳದ ಆಶ್ರಯದಲ್ಲಿ ದಿ. 23-1-2003 ರಂದು ಆರಂಭಿಸಲಾಯಿತು. ದಿನದಿನಕ್ಕೂ ಹೆಚ್ಚಿನ ಜನರನ್ನು ಪ್ರವಚನವು ಆಕರ್ಷಿಸಿತಲ್ಲದೆ ಶಿವರಾತ್ರಿಯಂದು ಗಣ ಮೇಳವನ್ನು ನಡೆಸಲಾಯಿತು. ದಿ. 13-3-2003 ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರ 58 ನೆಯ ವರ್ಧಂತಿಯನ್ನು ಅದ್ದೂರಿಯಾಗಿ ಆಚರಿಸಲಾಯಿತು. ಪೂಜ್ಯ ಮಾತಾಜಿಯವರಿಗೆ ಆರೋಗ್ಯ, ಆಯುಷ್ಯ ಕೋರಿ ಪೂಜ್ಯ ಗಂಗಾ ಮಾತಾಜಿಯವರು ಮತ್ತು ಸದ್ಭಕ್ತರು 1008 ಬಸವ ಲಿಂಗ ಮಂತ್ರ ಪಠಣವನ್ನು ಮಾಡಿ, ಗುಲಬರ್ಗಾ ಮಹಾಂತ ನಗರದಲ್ಲಿರುವ ಬಸವ ಮಂಟಪದಲ್ಲಿನ ಬಸವ ಗುರು ಮೂರ್ತಿಯನ್ನು ಅರ್ಚಿಸಿದರು. ಸಂಜೆ ಸಾರ್ವಜನಿಕ ಸಭೆಯಲ್ಲಿ ಪೂಜ್ಯ ಮಾತಾಜಿಯವರ ಸಾಧನೆ ಹಾಗೂ ಸಂದೇಶವನ್ನು ಕೊಂಡಾಡಲಾಯಿತು. ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರು ದಿ. 15-3-2003 ರಂದು ಗುಲಬರ್ಗಾಕ್ಕೆ ಆಗಮಿಸಿದಾಗ ವೈಭವ ಪೂರ್ಣ ಮೆರವಣಿಗೆಯಲ್ಲಿ ಸ್ವಾಗತಿಸಲಾಯಿತು. ದಿ. 15 ರಿಂದ 20-3-2003 ರವರೆಗೆ ಪೂಜ್ಯ ಮಾತಾಜಿಯವರು ವಿಶೇಷ ಪ್ರವಚನ ನೀಡಿದರು. 57 ದಿವಸಗಳ ಕಾಲ ನಡೆದ ವಿಶ್ವಧರ್ಮ ಪ್ರವಚನವು ದಿ. 20-3-2003 ರಂದು ಮಂಗಲಗೊಂಡಿತು.

ಪರಂಜ್ಯೋತಿ ಹರಳಯ್ಯ ಧರ್ಮ ಜಾಗೃತಿ ವೇದಿಕೆಯ ಕಾರ್ಯಕ್ರಮ

ಗುಲಬರ್ಗಾದ ಚಿಕ್ಕರೋಜಾ ಬಡಾವಣೆಯಲ್ಲಿ ಹರಳಯ್ಯ ಸಮಾಜದ ಅನುಯಾಯಿಗಳು ಹೆಚ್ಚಿನ ಸಂಖ್ಯೆಯಲ್ಲಿದ್ದು ಹರಳಯ್ಯನವರ ಗುಡಿಯನ್ನು ಸಹ ಕಟ್ಟಿದ್ದಾರೆ. ರಾಷ್ಟ್ರೀಯ ಬಸವ ದಳದ ಚಿಕ್ಕ ರೋಜಾ ಶಾಖೆಯ ಪದಾಧಿಕಾರಿಗಳು ತಪ್ಪದೆ ವಾರದ ಸಾಮೂಹಿಕ ಪ್ರಾರ್ಥನೆ ಮತ್ತು ಇನ್ನಿತರ ಶರಣರ ಜಯಂತಿ ಆಚರಿಸುವರು. ಅಖಿಲ ಭಾರತ ಪರಂಜ್ಯೋತಿ ಹರಳಯ್ಯ ಧರ್ಮ ಜಾಗೃತಿ ವೇದಿಕೆಯಿಂದ ಪೂಜ್ಯ ಮಾತಾ ದ್ವಯರನ್ನು ದಿ. 21-3-2003 ಆಹ್ವಾನಿಸಲಾಗಿತ್ತು. ದೊಡ್ಡ ರೋಜಾದ ಬಳಿ ಸ್ವಾಗತಿಸಿ, ವಿಶೇಷವಾಗಿ ಅಲಂಕರಿಸಲ್ಪಟ್ಟ ಕುದುರೆ ಗಾಡಿಯಲ್ಲಿ ಮೆರವಣಿಗೆಯ ಮೂಲಕ ಚಿಕ್ಕರೋಜಾಕ್ಕೆ ಕರೆ ತರಲಾಯಿತು. ದಾರಿಯುದ್ದಕ್ಕೂ ಸ್ವಾಗತ ಕಮಾನುಗಳನ್ನು ಕಟ್ಟಿ, ಬ್ಯಾನರ್ ಕಟ್ಟಿ ಸ್ವಾಗತ ಕೋರಲಾಯಿತು. ಅನೇಕ ಮಹಿಳೆಯರು ತುಂಬಿದ ಕೊಡ ಹೊತ್ತು, ಆರತಿಗಳನ್ನು ಹಿಡಿದು ಮೆರವಣಿಗೆಯಲ್ಲಿ ಸಾಗಿದರು. ಹೃದಯ ಸ್ಪರ್ಶಿಯಾಗಿ ಭಕ್ತಿಪೂರ್ವಕವಾಗಿ ಪಾದಕ್ಕೆ ನೀರೆರೆದು ಬರಮಾಡಿಕೊಂಡುದು ಎಲ್ಲರಿಗೂ ರೋಮಾಂಚನ ತಂದಿತ್ತು. ಕ್ರಾಂತಿಯೋಗಿ ಬಸವಣ್ಣ ಚಲನ ಚಿತ್ರದಲ್ಲಿ ಹರಳಯ್ಯ-ಕಲ್ಯಾಣಮ್ಮ-ಶೀಲವಂತರು ಧರ್ಮಗುರು ಬಸವಣ್ಣನವರನ್ನು ಬಾಗಿಲಲ್ಲಿ ಪಾದಕ್ಕೆ ನೀರೆರೆದು ಬರಮಾಡಿಕೊಂಡಂತೆ ನೆರೆದಿದ್ದವರಿಗೆ ಅನ್ನಿಸಿತು. ಗುಲಬರ್ಗಾದ ಹರಳಯ್ಯ ಸಮಾಜದವರು ಆರಂಭದಿಂದಲೂ ಬಸವ ಧರ್ಮ ಪೀಠದೊಡನೆ ಹಾರ್ದಿಕ, ಭಕ್ತಿಪೂರ್ವಕ ಸಂಬಂಧ ಇಟ್ಟುಕೊಂಡವರು. ಮೊದಲನೆಯ ಶರಣ ಮೇಳಕ್ಕೆ ಬಿಜನಳ್ಳಿ ಗ್ರಾಮದಿಂದ

ಅವರು ಹರಳಯ್ಯ ಜ್ಯೋತಿಯನ್ನು ಪಾದಯಾತ್ರೆ ಮೂಲಕ ಹೊತ್ತು ತಂದರು. ಮಾತ್ರವಲ್ಲ 12ನೆಯ ಶತಮಾನದ ಧರ್ಮಪಿತ ಬಸವಣ್ಣನವರು ಮತ್ತು ಹರಳಯ್ಯ ಶರಣರ ಸಂಬಂಧದಿಂದ ಪ್ರೇರಣೆಗೊಂಡು ತನ್ನ ಮೈ ಚರ್ಮ ತೆಗೆದು ಚಿಕ್ಕ ಚಮ್ಮಾವುಗೆಗಳನ್ನು ಮಾಡಿ ಸಂಗಮೇಶ್ವರ ದೇವಾಲಯಕ್ಕೆ ಅರ್ಪಣೆ ಮಾಡಿ ಎಲ್ಲರನ್ನು ರೋಮಾಂಚನಗೊಳಿಸಿದ ಓರ್ವ ಗ್ರಾಮೀಣ ಶರಣನನ್ನು ಹುಡುಕಿಸಿ, ಕರೆತಂದು, ಆತನಿಂದಲೇ ಮೊದಲನೆ ಶರಣ ಮೇಳದ ಉದ್ಘಾಟನೆ ಮಾಡಿಸಲಾಯ್ತು. ಮೊದಲನೆಯ ಕಲ್ಯಾಣಪರ್ವಕ್ಕೆ ಆಗಮಿಸಿದ ಆರು ಜ್ಯೋತಿಗಳಲ್ಲಿ ಹರಳಯ್ಯ ಶರಣರ ಜ್ಯೋತಿ ಬಿಜನಳ್ಳಿಯಿಂದ ಕಳೆದ ವರ್ಷ ಆಗಮಿಸಿತ್ತು. ಗುಲಬರ್ಗಾ ಜಿಲ್ಲಾ ಪೋಲೀಸ್ ವರಿಷ್ಠಾಧಿಕಾರಿ ಶರಣ. ಬಸವರಾಜ ಮಾಲಗತ್ತಿ ಅವರು ಧ್ವಜಾರೋಹಣ ನೆರವೇರಿಸಿದರು. ಶರಣ. ಗುಂಡಪ್ಪ ಕೋರವಾರ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರು ಜ್ಯೋತಿಯನ್ನು ಹೊತ್ತಿಸಿ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಅಖಿಲ ಭಾರತ ಪರಂಜ್ಯೋತಿ ಹರಳಯ್ಯ ಧರ್ಮಜಾಗೃತಿ ವೇದಿಕೆಯ ಕಾರ್ಯದರ್ಶಿ ಶರಣ. ಶಿವಾನಂದ ಗೌಳಿ ಎಲ್ಲರನ್ನು ಸ್ವಾಗತಿಸಿದರು. ರಾಷ್ಟ್ರೀಯ ಬಸವ ದಳದ ಕಾರ್ಯದರ್ಶಿ ಆರ್.ಜಿ. ಶೆಟಗಾರ ಸಭಾ ನಿರ್ವಹಣೆ ಮಾಡಿದರು. ಧ್ವಜಾರೋಹಣ ಮಾಡಿದ ಶರಣ. ಬಸವರಾಜ ಮಾಲಗತ್ತಿಯವರು ಬಸವಣ್ಣನವರ ಆದರ್ಶ, ತ್ಯಾಗ, ಕಳಕಳಿಗಳನ್ನು ಮತ್ತು ಅದನ್ನು ಪ್ರಾಮಾಣಿಕವಾಗಿ ಪುನಃ ಆಚರಣೆಗೆ ತರುತ್ತಿರುವ ಪೂಜ್ಯ ಮಾತಾಜಿಯವರ ಪ್ರಯತ್ನವನ್ನು ಕೊಂಡಾಡಿದರು. ಆಶೀರ್ವಚನ ನೀಡಿದ ಪೂಜ್ಯ ಮಾತಾಜಿ, "ವರ್ಣಾಂತರ ವಿವಾಹ, ಧರ್ಮಪಿತರ ಗಡಿಪಾರು, ಶರಣರ ಬಂಧನ, ಎಳೆಹೊಟೆ, ಬಿಜ್ಜಳನ ವಧೆ, ಕಲ್ಯಾಣದಿಂದ ಶರಣರ ನಿರ್ಗಮನ ಆಗಿದ್ದು ಇದೇ ಸಮಯದಲ್ಲಿ. ಅದರ ಪ್ರಕಾರ ಇಂದು (ದಿ. 21-3-2003) ನಾವು 807 ನೆಯ ಬಸವ ಧರ್ಮ ವಿಜಯೋತ್ಸವ ಆಚರಿಸುತ್ತಿದ್ದೇವೆ. ನನಗೆ ಹೃದಯ ತುಂಬಿ ಬಂದಿದೆ. 807 ವರ್ಷಗಳ ಹಿಂದೆ ಧರ್ಮಪಿತರು-ಹರಳಯ್ಯನವರು ಪರಸ್ಪರ ಅಗಲಿದುದು ಫಾಲ್ಗುಣ ಮಾಸದ ದ್ವಾದಶಿಯಂದು. ಬಹುಶಃ ಇಂದು ಅವರಿಬ್ಬರು ಪುನಃ ಒಂದುಗೂಡಿದಂತಾಗಿದೆ." ಎಂದಾಗ ಜನರು ಹರ್ಷೋದ್ಗಾರ ಮಾಡಿ ಚಪ್ಪಾಳೆ ತಟ್ಟಿದರು. " ಸಾಮಾಜಿಕ ಧಾರ್ಮಿಕ ಕಾರಣಗಳಿಂದ ದಲಿತರು ಕ್ರೈಸ್ತ, ಮುಸ್ಲಿಂ ಧರ್ಮಗಳಿಗೆ ಮತಾಂತರಗೊಳ್ಳುತ್ತಿದ್ದಾರೆ. ಅದು ತಪ್ಪು ಎಂದು ಅನ್ನಲು ನಮಗೆ ನೈತಿಕ ಹಕ್ಕಿಲ್ಲ ಹಸಿದವರಿಗೆ ಉಣಲಿಕ್ಕಬೇಕು. ವೈದಿಕ ಧರ್ಮ ಧರ್ಮವೆಂಬ ಆಹಾರ ಕೊಡುದುದರಿಂದ, ಇಂಬಿಟ್ಟುಕೊಳ್ಳದ್ದರಿಂದ ದಲಿತರು ಮತಾಂತರಗೊಳ್ಳುತ್ತಿದ್ದಾರೆ. ಆದರೆ ದಲಿತರು ಬಸವಣ್ಣನವರ ಮಾತೃಹೃದಯದ ಕಳಕಳಿ ಅರಿಯಬೇಕು. ಕಲ್ಯಾಣ ಕ್ರಾಂತಿ ಏತಕ್ಕಾಯಿತು ಎಂಬುದನ್ನು ತಿಳಿಯಬೇಕು. ಸ್ವದೇಶಿಯಾದ ಬಸವ ಧರ್ಮ ಎಲ್ಲರನ್ನು ಇಂಬಿಟ್ಟುಕೊಳ್ಳುವಾಗ ವಿದೇಶಿ ಧರ್ಮಗಳಿಗೆ ಏಕೆ ಮಾರು ಹೋಗಬೇಕು ?" ಎಂದು ತಿಳಿ ಹೇಳಿದರು. ಗಣ್ಯರನ್ನು ಧರ್ಮ ಜಾಗೃತಿ ವೇದಿಕೆಯಿಂದ ಸತ್ಕರಿಸಲಾಯಿತು.

ಕೊಪ್ಪಳ : ಜಿಲ್ಲಾ ಕೇಂದ್ರ ಕೊಪ್ಪಳದಲ್ಲಿ ರೇಲ್ವೆಗೇಟ್ ಸಮೀಪದಲ್ಲಿ ಬಸವ ಮಂಟಪವು ಸಿದ್ಧವಾಗಿದ್ದು ಬಹಳಷ್ಟು ಕಾರ್ಯಕ್ರಮ ನಡೆಯುತ್ತಿವೆ. 2003 ನೇ ಇಸವಿಯ ಬಸವ ಜಯಂತಿಯ ಮೇ 4 ರಂದು ಬಂದಿದ್ದು, ಅಂದು ಬೆಳಿಗ್ಗೆ 10-00 ಗಂಟೆಗೆ ತೊಟ್ಟಿಲು ಕಾರ್ಯಕ್ರಮ, ಉಪನ್ಯಾಸ, ಮಧ್ಯಾಹ್ನ ಮೆರವಣಿಗೆ, ಪಥ ಸಂಚಲನವಿದೆ. ದಿವ್ಯ ಸನ್ನಿಧಿ : ಪೂಜ್ಯ ಶ್ರೀ ಬಸವ ಕುಮಾರ ಸ್ವಾಮಿಗಳು.

ಓಂ ಶ್ರೀ ಗುರು ಬಸವ ಲಿಂಗಾಯ ನಮಃ

866666

ವಚನೋಪನಿಷತ್ತು

- ಪೂಜ್ಯ ಶ್ರೀ ಮಾತೆ ಕಸ್ತೂರಿದೇವಿ

ಆದ್ಯರ ವಚನ ಪರುಷ ಕಂಡಯ್ಯ
ಸದಾಶಿವನೆಂಬ ಲಿಂಗವ ನೆರೆ ನಂಬುವುದು
ನಂಬಲೊಡನೆ ನೀ ವಿಜಯಿ ಕಂಡಯ್ಯ
ಅಧರಕ್ಕೆ ಕಹಿ; ಉದರಕ್ಕೆ ಸಿಹಿ
ಲಿಂಗದೇವನ ಶರಣರ ವಚನ ಬೇವ ಸವಿದಂತೆ ।।87।।

- ವಿಶ್ವಗುರು ಬಸವಣ್ಣನವರು

ಶರಣ ಬಂಧುಗಳೇ, ಮೇಲಿನ ವಚನವನ್ನು ನೀವೆಲ್ಲ ಸಾಕಷ್ಟು ಸಾರಿ ಓದಿದ್ದೀರಿ, ಕೇಳಿದ್ದೀರಿ. ಅಲ್ಲವೇ ? ಒಳ್ಳೆಯದು. ಆದರೆ ಈ ವಚನವನ್ನು ಕುರಿತು ಎಂದಾದರೂ ಚಿಂತಿಸಿದ್ದೀರಾ ? ಚಿಂತಿಸಿದ್ದರೆ ಸಂತೋಷ. ಇಲ್ಲದಿದ್ದರೆ ಈ ಲೇಖನವನ್ನಾದರೂ ಓದಿರಿ. ಈ ಲೇಖನದ ಶಿರೋನಾಮೆ ನಿಮಗೆ ಹೇಗನ್ನಿಸುತ್ತಿದೆ ? ಈಗಾಗಲೇ ಹಲವಾರು ಉಪನಿಷತ್ತುಗಳು ಅಸ್ತಿತ್ವದಲ್ಲಿವೆ, ಸದ್ಯಕ್ಕೆ ಅವುಗಳನ್ನೆಲ್ಲ ಓದಿ ಜೀರ್ಣಿಸಿಕೊಳ್ಳಲು ನಮಗಿನ್ನೂ ಸಾಧ್ಯವಾಗಿಲ್ಲ. ಅಂದಾಗ ಈಗ ಮತ್ತೊಂದು ಉಪನಿಷತ್ತು ಹುಟ್ಟಿಕೊಂಡಿತಲ್ಲ! ಎಂದು ಗಾಬರಿಯೆ ?! ಹೆದರಬೇಡಿ. ಏಕೆಂದರೆ ಅವುಗಳಿಗೂ ಇದಕ್ಕೂ ಇರುವ ಒಂದು ಮುಖ್ಯವಾದ ವ್ಯತ್ಯಾಸವನ್ನು ನಮ್ಮೆಲ್ಲರ ನೆಚ್ಚಿನ ಪ್ರವಚನ ಪಿತಾಮಹರಾಗಿದ್ದ ಪೂಜ್ಯ ಶ್ರೀ ಮಹಾಜಗದ್ಗುರು ಲಿಂಗಾನಂದ ಅಪ್ಪಾಜಿಯವರ ಮಾತಿನಲ್ಲಿ ಕೇಳೋಣ. ವೇದೋಪನಿಷತ್ತುಗಳಲ್ಲಿ ಮುಮುಕ್ಷುವೂ, ಜಿಜ್ಞಾಸುವೂ, ಜ್ಞಾನಾಕಾಂಕ್ಷಿಯೂ ಆದ ಶಿಷ್ಯನೋರ್ವ ಯೋಗ್ಯ ಗುರುವನ್ನು ಅರಸುತ್ತಾ ಹೋಗುತ್ತಾನೆ. ಆತನ ಬಳಿಯಿದ್ದುಕೊಂಡು ಜ್ಞಾನಾರ್ಜನೆ ಮಾಡುತ್ತಾನೆ. ಆದರೆ ವಚನೋಪನಿಷತ್ತಿನಲ್ಲಿ ಹಾಗಲ್ಲ; ಇಲ್ಲಿ ಸಮರ್ಥನಾದ ಗುರುವೋರ್ವ ಜ್ಞಾನಜ್ಯೋತಿಯನ್ನು ಕರದಲ್ಲಿ ಪಿಡಿದು, ಸ್ವಾನುಭಾವದ ಬುತ್ತಿಯನ್ನು ಶಿರದಲ್ಲಿ ಹೊತ್ತು ಶಿಷ್ಯರ ಬಳಿಗೆ ಧಾವಿಸುತ್ತಾನೆ. ಅವರ ಮನದ ಅಜ್ಞಾನದ ಕತ್ತಲೆಯನ್ನು ಕಳೆಯಲು ಜ್ಞಾನಜ್ಯೋತಿಯನ್ನು ಬೆಳಗಿಸುತ್ತಾನೆ. ಅವರ ಅಧ್ಯಾತ್ಮದ ಹಸಿವೆಯನ್ನು ಹಿಂಗಿಸಲು ಸದಾಚಾರ-ಸ್ವಾನುಭಾವದ ಬುತ್ತಿಯನ್ನು ಹಂಚುತ್ತಾನೆ.

ಈ ಕಾರಣಕ್ಕಾಗಿಯೇ ವಚನಗಳನ್ನು ಹಾಸಿಕೊಂಡು, ಹೊದ್ದುಕೊಂಡು ಬೆಳೆದ ಸಿದ್ಧಬಸವ ಚೇತನ, ಚಿನ್ಮಯಜ್ಞಾನಿ ಚೆನ್ನಬಸವಣ್ಣನವರು ಮರ್ತ್ಯರ ಮನದ ಮೈಲಿಗೆಯ ಕಳೆಯಲೆಂದು ಗೀತ ಮಾತೆಂಬ ಜ್ಯೋತಿಯ ಬೆಳಗ ಕೊಟ್ಟರು ನಿಮ್ಮ ಶರಣರು ಎಂದು ವಚಿಸಿದ್ದು. ಇಂಥ ವಚನಗಳ ಅಂತರಂಗವನ್ನು, ಮೂಲೋದ್ದೇಶವನ್ನು ಜಗನ್ಮಾತಾ ಅಕ್ಕಮಹಾದೇವಿ ಹೀಗೆ ಹೇಳುತ್ತಿದ್ದಾರೆ. ಸತ್ಯವ ನುಡಿವುದೇ ವಚನಂಗಳಿಗೆ ಶೃಂಗಾರ ಎಂದು. ಸುಳ್ಳು, ವಂಚನೆ, ಮೋಸ, ಕಪಟವರಿಯದ ಪುಟ್ಟ ಮಕ್ಕಳ ಮುದ್ದು ಮಾತುಗಳಂತಿರುವ ಪರಿಶುದ್ಧವಾದ, ನಿರ್ಭಯವಾದ

ವಚನಗಳ, ಸಾರವನ್ನು ಬಸವಯೋಗಿ ಶ್ರೀ ಸಿದ್ಧರಾಮೇಶ್ವರರು ಮಕ್ಕಳ ಮತವ ಅರಿ ಕಂಡಾ ಎಂದು ಬೆರಗು ಪಡೆದು ಬೋಧಿಸುತ್ತಿದ್ದಾರೆ.

ಪರುಷಸದೃಶವಾದ ಇಂಥ ಅಮೂಲ್ಯವಾದ ವಚನಗಳನ್ನು ಧರ್ಮಪಿತ ಬಸವಣ್ಣನವರು ನಮಗೆ ಪರಿಚಯಿಸಲು ಮತ್ತು ಪರಿಣಾಮಿಸಲು ಇಲ್ಲಿ ಶ್ರಮಿಸುತ್ತಿದ್ದಾರೆ. ಆದ್ಯರ ವಚನ ಪರುಷ ಕಂಡಯ್ಯ - ಇಲ್ಲಿ ಆದ್ಯರು ಎಂದರೆ ಮೊಟ್ಟ ಮೊದಲು ನಿತ್ಯಸತ್ಯಶುದ್ಧ ಪರಿಪೂರ್ಣವಾದ ಸುಜ್ಞಾನವನ್ನು ಶೋಧಿಸಿ ಪ್ರಮಾಣಿಸಿ ಕೊಟ್ಟವರು. ತಮ್ಮ ತತ್ತ್ವ ಸಂದೇಶಗಳನ್ನು ಜಗತ್ತಿನಲ್ಲಿ ಬಿತ್ತಿದವರು. ಇಂಥ ಸತ್ಯ ಶೋಧಕರಿಂದ ಹೊರಹೊಮ್ಮಿದ ವಚನಂಗಳೆಂಬ ದಿವ್ಯರತ್ನಗಳು ಪರುಷಕ್ಕೆ ಸಮಾನವಾದುವು. ಏಕೆಂದರೆ ಅವುಗಳನ್ನು ವಚಿಸಿ, ಮನನ, ಧಾರಣ ಮಾಡಿದಾಗ ನಮಗೂ ಅಂಥ ದಿವ್ಯಾನುಭಾವಗಳು ಉಂಟಾಗುವ ಸಾಧ್ಯತೆಯಿದೆ. ಮಾತ್ರವಲ್ಲ ಈ ವಚನಗಳು ನಮಗೆ ಸದಾಶಿವನೆಂಬ ಲಿಂಗವನ್ನು, ಜಗದ್ರಕ್ಷಕನಾದ ಪರಮೋನ್ನತ ಶಕ್ತಿಯನ್ನು ನೆರೆ ನಂಬಲು ಕಲಿಸುತ್ತವೆ. ಈ ರೀತಿಯ ನಂಬಿಕೆಯಿಂದ ಆಗುವ ಪ್ರಯೋಜನವೇನೆಂದರೆ 'ನೀ ವಿಜಯಿ ಕಂಡಯ್ಯ ' ಎಂದು ಅಪ್ಪನವರು ನಂಬಿಕೆಯನ್ನು ಸದೃಢಗೊಳಿಸುತ್ತಾರೆ. ದೇವನನ್ನು ನಂಬಿ ಸತ್ಪಥದಲ್ಲಿ ಸಾಗುತ್ತಿರುವಾಗ ಎಂಥ ಎಡರುತೊಡರು ಬಂದರೂ ಅವುಗಳನ್ನೆಲ್ಲ ಎದುರಿಸಿ ಶಾಶ್ವತವಾದ ಜಯ ಪಡೆಯುವಂತೆ ಪ್ರೇರಣೆ ತುಂಬುತ್ತಿದ್ದಾರೆ. ಅಲ್ಲದೆ ನಮ್ಮ ಎಲ್ಲಾ ಸತ್ಸಂಕಲ್ಪಗಳ ಕಾರ್ಯಸಾಧನೆಗೆ ತಾಯಿಯಂತೆ ಬೆಂಗಾವಲಾಗಿ ಪರಮಾತ್ಮನು ನಮ್ಮ ಹಿಂದಿರುತ್ತಾನೆ; ಹೆಜ್ಜೆ ಹೆಜ್ಜೆಗೂ ಕಾಯುತ್ತಾನೆ ಎಂದು ಮನಗಾಣಿಸುತ್ತಿದ್ದಾರೆ. ಆದರೆ ಇಂಥ ಸತ್ಯಶುದ್ಧವಾದ ಮಾತುಗಳು ವಿಷಯಾಸಕ್ತವಾಗಿರುವ ಜನರ ಕಿವಿ-ಮನ-ಮತಿಗಳಿಗೆ ಕಠೋರ-ಕಹಿ ಎನಿಸಬಹುದು. ಆದರೂ ನಾವು ಹಿಂಜರಿಯಬೇಕಾಗಿಲ್ಲ. ಕಹಿಯಾದ ಔಷಧಿಗಳನ್ನು ಸೇವಿಸಿ ದೈಹಿಕ ಕಾಯಿಲೆಗಳನ್ನು ವಾಸಿ ಮಾಡಿಕೊಳ್ಳುವಂತೆ ಅಧರಕ್ಕೆ ಕಹಿ; ಉದರಕ್ಕೆ ಸಿಹಿಯಾಗಿರುವ ಲಿಂಗದೇವನನ್ನು ನೆರೆ ನಂಬಿದ ಗುರುವಿನ, ಶರಣರ ಮಾತುಗಳಲ್ಲಿ ನಂಬಿಕೆಯಿರಿಸಿ ವಚನಗಳೆಂಬ ಬೇವನ್ನು ಸವಿದು ನಮ್ಮ ಅಜ್ಞಾನ, ಚಿಂತೆ, ಭಯ, ಭ್ರಾಂತಿಗಳೆಂಬ ಮನೋವ್ಯಾಧಿಗಳನ್ನು ವಾಸಿಮಾಡಿಕೊಳ್ಳಬೇಕು.

ಇಷ್ಟೊಂದು ಪ್ರಭಾವಶಾಲಿಯಾಗಿರುವ ವಚನಗಳನ್ನು ಗಿಳಿಯಂತೆ ಬಾಯಿ ಪಾಠ ಮಾಡಿ, ಸಂದರ್ಭಕ್ಕನುಸಾರ ಉದಾಹರಿಸಿ, ಚುರುಕಿನಿಂದ ಹೇಳುವವರು ನಮ್ಮ ನಡುವೆ ಸಾಕಷ್ಟು ಜನರಿದ್ದಾರೆ. ಆದರೇನು? ವಚನಗಳ ಮಥನದೊಂದಿಗೆ ಆತ್ಮಾವಲೋಕನ ಮಾಡಿಕೊಳ್ಳಲು ಬಯಸುವ ಇಂಥವರ ನಡೆನುಡಿಯಲ್ಲಿ ಯಾವುದೇ ಪರಿವರ್ತನೆಯಾಗಲಿ ಸುಧಾರಣೆಯಾಗಲಿ ಕಂಡುಬರುವುದಿಲ್ಲ. ಇವರು ವಚನಗಳನ್ನು ಕೇವಲ ಜನಾಕರ್ಷಣೆಗಾಗಿ ಮಾತ್ರ ಬಳಸುತ್ತಾ ಸಾಗುತ್ತಾರೆ. ಏಕೆಂದರೆ ಅವರಿಗೂ ಗೊತ್ತು! ಪಂಡಿತ ಪಾಮರರಾದಿಯಾಗಿ ಎಲ್ಲರಿಗೂ ಪ್ರಿಯವಾಗುವ ವಚನಗಳನ್ನು ಕೈಬಿಟ್ಟರೆ ನಮ್ಮ ಮಾತುಗಳಿಗೆ, ವ್ಯಕ್ತಿತ್ವಕ್ಕೆ ಬೆಲೆ ಬರುವುದಿಲ್ಲ ಎಂದು. ವಚನ ಪರುಷದ ಕೈಗೆ ಸಿಗದ, ವಚನ ಸೋಂಕಿಗೆ ಹೆದರುವ ಜನರ ಶಬ್ದಜಾಲದ ಬಗ್ಗೆ ಧರ್ಮಪಿತರು ಹೇಗೆ ವಿಡಂಬಿಸುತ್ತಿದ್ದಾರೆ ನೋಡಿರಿ.

ಆದ್ಯರ ವಚನ ಪರುಷವೆಂಬೆನು , ಆ ಪರುಷ ಎನಗೆಂತು ದೊರೆಕೊಂಬುದಯ್ಯ ?
ತನುಮನಧನವ ನಿವೇದಿಸಿ ನುಡಿವೆ , ಸೋಂಕಿಗೆ ಸೈರಿಸಲಾರೆ

ಹೊಲೆಯರ ಮದ್ದಳೆಯಂತೆ ನುಡಿವ ಡಂಬಕನಯ್ಯ, ಲಿಂಗದೇವಾ. ಬ.ವ.ದೀ-315

ನುಡಿಶೂರರ, ಶಬ್ದಬ್ರಹ್ಮರ, ವಚನಜ್ಞಾನದ ಸತ್ಪರಿಣಾಮಕ್ಕೆ ಒಳಗಾಗದವರ ಮಾತುಗಳನ್ನು ಧರ್ಮಪಿತರು ಹೊಲೆಯರ ಮದ್ದಳೆಗೆ ಹೋಲಿಸುತ್ತಿದ್ದಾರೆ. ಹೊಲೆಯರ ಮದ್ದಳೆಯ ಶಬ್ದವನ್ನು ನೀವು ಕೇಳಿದ್ದೀರಾ ? ಅದು ಹೇಗಿರುತ್ತದೆ ? ಪಾಪ ! ಯಾವ ಶಾಸ್ತ್ರಜ್ಞಾನವಾಗಲಿ, ವಾದಕರ ತ ತರಬೇತಿಯಾಗಲಿ ಇಲ್ಲದೆ ತನಗೆ ತೋಚಿದಂತೆ ಜನರ ಗಮನವನ್ನು ಸೆಳೆಯುವ ಏಕೈಕ ಉದ್ದೇಶದಿಂದ ಜೋರಾಗಿ ಡಬ ಡಬ ಎಂದು ಬಡಿಯುತ್ತಾರೆ. ಈ ಶಬ್ದ ಕೇಳಲು ಕರ್ಕಶವಾಗಿದ್ದು ಶ್ರವಣಾನಂದವಾಗಲಿ, ಬೌದ್ಧಿಕಾನಂದವಾಗಲಿ, ಆತ್ಮಾನಂದವಾಗಲಿ ಕೊಡದ ಈ ಸಾಹಸವನ್ನು ಕೇವಲ ವ್ಯರ್ಥ ಪರಿಶ್ರಮವೆನ್ನದೆ ವಿಧಿಯಿಲ್ಲ.

ವಚನ ಸಾಹಿತ್ಯದ ಮತ್ತೊಂದು ವೈಶಿಷ್ಟ್ಯವೇನೆಂದರೆ ಅದು ಅನುಭವಜನ್ಯ. ಈ ಗುಣದಿಂದಾಗಿಯೇ ಬಸವ ಕಾಲದಲ್ಲಿ ಸಮಾಜದ ಪ್ರತಿಯೊಂದು ವರ್ಗವೂ ತನ್ನತನವನ್ನು ಕಂಡುಕೊಂಡು ಜಾಗೃತವಾಗಲು ಸಾಧ್ಯವಾಯಿತು. ಇದನ್ನರಿತು ಭೀಮಕವಿ ಬರೆಯುತ್ತಾನೆ.

ಬಸವಶರಣೆನೆ ವಚನಾ ರಚನಾ ಸಿದ್ಧಿ ವರ್ಧಿಸುಗು " ಎಂದು. ಅಂತೆಯೇ ಬಸವಾದಿ ಪ್ರಮಥರ ವಚನಗಳನ್ನು ತಮ್ಮ ಮೇಲೆ ಆವಾಹನೆ ಮಾಡಿಕೊಂಡಿರುವ ಪೂಜ್ಯ ಶ್ರೀ ಮಾತಾಜಿಯವರು ಜಪಿಸುತ್ತಾರೆ ॥ ಸಾಹಿತಿಗಳ ಸ್ಫೂರ್ತಿಗಂಗೋತ್ರಿ ಬಸವಲಿಂಗಾಯ ನಮಃ ॥ ಎಂದು.

ಶರಣ ಬಂಧುಗಳೇ! ಪ್ರತಿಯೊಬ್ಬರಲ್ಲಿಯೂ ಒಂದೊಂದು ಪ್ರತಿಭೆ ಸುಪ್ತವಾಗಿರುತ್ತದೆ. ನಿಮ್ಮಲ್ಲಿ ಪ್ರಸಿದ್ಧ ತ್ಯಾಗಿಯಿರಬಹುದು, ಸಾಹಿತಿಯಿರಬಹುದು, ವಿಜ್ಞಾನಿ, ಗಾಯಕ, ಕ್ರೀಡಾಪಟು ಯಾರೇ ಇರಲಿ ಅವರೆಲ್ಲ ತಮ್ಮನ್ನು ಮೆಟ್ಟಿ ನಿಂತಿರುವ ದುಷ್ಟಶಕ್ತಿಗಳು, ದುರ್ಬಲತೆಗಳನ್ನೆಲ್ಲ ಕೊಡವಿಕೊಂಡು ಯಶಸ್ವಿಯಾಗಿ ಹೊರಗೆ ಬರಬೇಕಲ್ಲವೆ? ವಚನಗಳ ಪ್ರಾಮಾಣಿಕ ಅಧ್ಯಯನ, ಅನುಷ್ಠಾನದಿಂದ ಇದು ಸಾಧ್ಯ ಎಂಬುದನ್ನು ಹನ್ನೆರಡನೆಯ ಶತಮಾನದ ಅನೇಕ ಶರಣ ಶರಣೆಯರು ತಮ್ಮ ಬದುಕು ಬರಹದಿಂದ ನಮಗೆ ತೋರಿಸಿಕೊಟ್ಟಿದ್ದಾರೆ.

ಇಷ್ಟಾದರೂ ಭವಿಷ್ಯದಲ್ಲಿ ಸಮೃದ್ಧ-ಸಂತೃಪ್ತ-ಸದೃಢ ರಾಷ್ಟ್ರ ನಿರ್ಮಾಣದ ರೂವಾರಿಗಳಾಗಬೇಕಾದ ಇಂದಿನ ಯುವಜನತೆ, ಮಾನವೀಯ ಶೌರ್ಯದಿಂದ ಕೂಡಿದ ಪರಿಪೂರ್ಣ ವ್ಯಕ್ತಿತ್ವ ವಿಕಾಸ ಮಾಡಲು ಸಾಮರ್ಥ್ಯವಿರುವ ವಚನ ಸಾಹಿತ್ಯದಿಂದ ಏಕೆ ಸರಿದಿದೆ ? ಎಂದು ಕೇಳಿದರೆ ಪಾಪ!! ಅಲ್ಲಿ ನೋಡಿ, ಅವರು ಹೇಗೆ ಹಲುಬುತ್ತಿದ್ದಾರೆ, ಅಯ್ಯೋ! ಏನು ಮಾಡುವುದು! ಸಿನಿಮಾ ಗೀತೆಗಳಷ್ಟು ಸುಲಭವಾಗಿ ನಮಗೆ ವಚನಗಳು ಅರ್ಥವಾಗುತ್ತಿಲ್ಲ . ಓ ! ಸೋದರ/ಸೋದರಿಯರೇ, ಚಿತ್ರಗೀತೆಗಳು ನಿಮ್ಮ ಇಂದ್ರಿಯಗಳನ್ನು ದುರ್ಬಲಗೊಳಿಸಿ, ವ್ಯಕ್ತಿತ್ವವನ್ನುಕುಬ್ಜಗೊಳಿಸುತ್ತಿವೆಯೆ ? ಚಿಂತಿಸಬೇಡಿ. ಅವುಗಳಿಂದ ಪಾರಾಗಲು ಹೀಗೆ ಮಾಡಿರಿ. ನಿಮ್ಮ ಮೆಚ್ಚಿನ ಚಿತ್ರಗೀತೆಗಳನ್ನು ನಮ್ಮ ವಚನ ಸಾಹಿತ್ಯದ ಮುಂದೆ ನಿವಾಳಿಸಿ ತೆಗೆದು ದೂರ ಒಗೆಯಿರಿ. ಏಕೆಂದರೆ ಅವುಗಳಿಂದ ನಮ್ಮ ವಚನ ಸಾಹಿತ್ಯಕ್ಕೆ ಎಲ್ಲಾದರೂ ದೃಷ್ಟಿಯಾದೀತು !!

ಶರಣ ಬಂಧುಗಳೇ, ನೋಡಿದಿರಾ! ನನ್ನ ಮತಿಮನಗಳು ತಿಳಿಯಾದ ವಚನ ಸರೋವರದಲ್ಲಿ ಬಸವ ಹಂಸೆಗಳಾಗಿ ಹೇಗೆ ಆನಂದದಿಂದ ವಿಹರಿಸುತ್ತಿವೆ ಎಂಬುದನ್ನು. ಇಂಥ ಅನುಭವ ನಿಮಗೂ ಆಗಬೇಕೆ ? ಹಾಗಿದ್ದರೆ ಲಿಂಗಾಂಗಯೋಗಿ ಶ್ರೀ ಸಿದ್ಧರಾಮೇಶ್ವರರ ಈ ವಚನವನ್ನು ಓದಿರಿ,

ಮನನ ಮಾಡಿರಿ, ಆನಂದಿಸಿರಿ.

ಆರ್ಯ(ದ್ಯ ?!)ರ ವಚನಕ್ಕೆ
ಅಷ್ಟಾವರಣದ ಸಂಗನ(ಕರ್ತನ) ಬಸವಣ್ಣನ ವಚನವ ಕೇಳಿ
ಪದ್ಮಿನಿಯಲ್ಲಿ ಬೆರಗಾದ ಕಾಮಿಯಂತೆ, ಎರೆದು ನಿದ್ರಿಪ ಬಾಲನಂತೆ
ಕಾಯವ ದಣಿಸಿದ ಕೃಷೀವಲನ ನಿದ್ರೆಯಂತೆ, ಪರವಶನಾದೆ ಕಾಣಾ
ಕಪಿಲಸಿದ್ಧ ಮಲ್ಲಿಕಾರ್ಜುನಾ ॥ 859॥ - ಶ್ರೀ ಸಿದ್ಧರಾಮೇಶ್ವರರು

ಬಸವ ಧರ್ಮ ಪೀಠದಿಂದ ಬಸವ ಜಯಂತಿ

ಬಸವ ಜಯಂತಿ ನಿಮಿತ್ತವಾಗಿ ದಿ. 4-5-03 ರಂದು ಬಸವ ಧರ್ಮಪೀಠ ಮತ್ತು ಅದರ ಅಂಗ ಸಂಸ್ಥೆಗಳಲ್ಲಿ ವಿಶೇಷ ಕಾರ್ಯಕ್ರಮಗಳಿರುತ್ತವೆ.

1. ಬೆಂಗಳೂರಿನ ರಾಜಾಜಿನಗರದ ಬಸವ ಮಂಟಪದಲ್ಲಿ ಬೆಳಿಗ್ಗೆ 10-30 ರಿಂದ ಬಸವ ಜಯಂತಿ ನಿಮಿತ್ತ ವಿಶೇಷ ಕಾರ್ಯಕ್ರಮ ಮತ್ತು ಗಣದಾಸೋಹ, ಸನ್ನಿಧಿ ಪೂಜ್ಯ ಶ್ರೀ ಜಗದ್ಗುರು ಅಲ್ಲಮ ಪ್ರಭು ಸ್ವಾಮೀಜಿ.

2. ಬಸವ ಕಲ್ಯಾಣದ ಬಸವ ಮಹಾಮನೆಯಲ್ಲಿ ವಿಶೇಷ ಪೂಜೆ ಮತ್ತು ದೇವವಾರದ ಶರಣ ಸಂಗಮ-ಸಾಮೂಹಿಕ ಪ್ರಾರ್ಥನೆ, ಉಪನ್ಯಾಸ, ಗಣದಾಸೋಹ. ಬೆಳಿಗ್ಗೆ 10-00 ಕ್ಕೆ.
ದಿವ್ಯ ಸನ್ನಿಧಿ : ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಮಾತೆ ಮಹಾದೇವಿ

3. ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರ ಸನ್ನಿಧಿಯಲ್ಲಿ, ಬೀದರ್ ಬಸವ ಮಂಟಪದಲ್ಲಿ ಬೆಳಿಗ್ಗೆ 10 ಕ್ಕೆ ಪೂಜೆ, ತೊಟ್ಟಿಲು ಕಾರ್ಯಕ್ರಮ. ಸಂಜೆ 4 ಗಂಟೆಗೆ ಬಸವ ಜಯಂತಿ ಉತ್ಸವ, ಬಸವ ಪುತ್ಥಳಿಗೆ ಮಾಲಾರ್ಪಣೆ ಮತ್ತು ಸಾರ್ವಜನಿಕ ಸಭಾಕಾರ್ಯಕ್ರಮ.

4. ಕೂಡಲ ಸಂಗಮದ ಬಸವ ಧರ್ಮ ಪೀಠದ ಮಹಾಮನೆ ಮಹಾಮಠದಲ್ಲಿ ಬೆಳಿಗ್ಗೆ 10 ಕ್ಕೆ ತೊಟ್ಟಿಲು ಕಾರ್ಯಕ್ರಮ, 11 ಕ್ಕೆ ಸಾಮೂಹಿಕ ಪ್ರಾರ್ಥನೆ. ಸನ್ನಿಧಿ : ಪೂಜ್ಯ ಶ್ರೀ ಮಾತೆ ಅಕ್ಕಮಹಾದೇವಿ.

5. ಕುಂಬಳಗೋಡಿನಲ್ಲಿರುವ ಬಸವ ಗಂಗೋತ್ರಿ ನಗರದ ಬಸವಾಲಯದಲ್ಲಿ ವಿಶೇಷ ಪೂಜಾ ಕಾರ್ಯಕ್ರಮ. ಸನ್ನಿಧಿ : ಪೂಜ್ಯ ಶ್ರೀ ಮಾತೆ ಕಸ್ತೂರಿದೇವಿ.

6. ಧಾರವಾಡ : ಬೆಳಿಗ್ಗೆ 10 ಗಂಟೆಗೆ ಜಗನ್ಮಾತಾ ಅಕ್ಕಮಹಾದೇವಿ ಮಠದಲ್ಲಿ ತೊಟ್ಟಿಲು ಕಾರ್ಯಕ್ರಮ, 11 ಗಂಟೆಗೆ ವಾರದ ಸಾಮೂಹಿಕ ಪ್ರಾರ್ಥನೆ. ಸಂಜೆ 4 ಕ್ಕೆ ಕಡಪಾ ಮೈದಾನದ ಕಲಾಭವನದಿಂದ ಪಥ ಸಂಚಲನ. 6 ರಿಂದ ಕಡಪಾ ಮೈದಾನದಲ್ಲಿ ಬಸವ ಜಯಂತಿ ಕಾರ್ಯಕ್ರಮ. ಸನ್ನಿಧಿ : ಪೂಜ್ಯ ಶ್ರೀ ಚನ್ನಬಸವರಾಜ ಸ್ವಾಮಿಗಳು, ಬಸವ ಧರ್ಮ ಪೀಠ.

7. ಹುಬ್ಬಳ್ಳಿ : ಬೆಳಿಗ್ಗೆ 10 ಗಂಟೆಗೆ ಉಣಕಲ್ ಶ್ರೀನಗರದ ರಾಷ್ಟ್ರೀಯ ಬಸವ ದಳದ ಬಸವ ಮಂಟಪದಲ್ಲಿ ತೊಟ್ಟಿಲು ಕಾರ್ಯಕ್ರಮ. 11 ಗಂಟೆಗೆ ವಾರದ ಸಾಮೂಹಿಕ ಪ್ರಾರ್ಥನೆ, ಮಧ್ಯಾಹ್ನ ಗಣ ದಾಸೋಹ.

8. ಬೆಳಗಾಂವ : ಬೆಳಿಗ್ಗೆ 10 ಗಂಟೆಗೆ ಬಸವ ಮಂಟಪದಲ್ಲಿ ತೊಟ್ಟಿಲು ಕಾರ್ಯಕ್ರಮ, ವಾರದ ಪ್ರಾರ್ಥನೆ, ಸಂಜೆ 4 ರಿಂದ ಪಥ ಸಂಚಲನೆ, ಸಂಜೆ ಬಸವ ಜಯಂತಿ ಕಾರ್ಯಕ್ರಮ. ಸನ್ನಿಧಿ : ಪೂಜ್ಯ ಶ್ರೀ ಮಾತೆ ಸರ್ವ ಮಂಗಳಾದೇವಿ.

9. ಗೋಕಾಕ್ : ವಿದ್ಯಾನಗರದಲ್ಲಿರುವ ರಾಷ್ಟ್ರೀಯ ಬಸವ ದಳದ ಬಸವ ಮಂಟಪದಲ್ಲಿ ಬೆಳಿಗ್ಗೆ 10 ಗಂಟೆಗೆ ತೊಟ್ಟಿಲು ಕಾರ್ಯಕ್ರಮ, ವಾರದ ಸಾಮೂಹಿಕ ಪ್ರಾರ್ಥನೆ ; ಸಂಜೆ 4 ರಿಂದ ಮೆರವಣಿಗೆ, ಪಥ ಸಂಚಲನ, ಸಂಜೆ 6 ಕ್ಕೆ ಸಾರ್ವಜನಿಕ ಕಾರ್ಯಕ್ರಮ. ಸನ್ನಿಧಿ : ಪೂಜ್ಯ ಶ್ರೀ ಚನ್ನಬಸವಾನಂದ ಸ್ವಾಮಿಗಳು

ನುಡಿ ಕಾಣಿಕೆ

ಬಸವಾತ್ಮಜೆ ಮಾತಾಷ್ಟಕ : ಸವಿತಾ ಜಮ್ಮಿಹಾಳ

ಶರಣಜನಪ್ರೀತ ಶ್ರೀ ಮಾತೆಯೆ ಶರಣು
ಗುರುಬಸವ ಕರುಣೆಯ ಕುವರಿಯೆ ಶರಣು
ಮಹಾದೇವಿಯಕ್ಕನ ಅವತಾರಿ ಶರಣು
ಲಿಂಗದೇವಪ್ರಿಯೆ ಬಸವಾತ್ಮಜೆ ಶರಣು ॥1॥ ಹೇ ಬಸವಾತ್ಮಜೆ ಶರಣು

ಲೋಕದ ಪ್ರಥಮ ಸ್ತ್ರೀ ಗುರು ಶರಣು
ಮಹಿಳಾ ಕುಲದ ಪ್ರತಿನಿಧಿ ಶರಣು
ಚಿನ್ಮೂಲಾದ್ರಿಯ ಚಿತ್ಕಳೆ ಶರಣು
ಲಿಂಗದೇವ ಪ್ರಿಯೆ ಬಸವಾತ್ಮಜೆ ಶರಣು ॥2॥ ಹೇ ಬಸವಾತ್ಮಜೆ ಶರಣು

ಗುರು ಲಿಂಗಾನಂದರ ವರಕುವರಿ ಶರಣು
ಭವ ದೂರಕ ಶ್ರೀಶಕ್ತಿಯೆ ಶರಣು
ವೀರವೈರಾಗ್ಯದ ಪ್ರತಿನಿಧಿಯೆ ಶರಣು
ಲಿಂಗದೇವ ಪ್ರಿಯೆ ಬಸವಾತ್ಮಜೆ ಶರಣು ॥3॥ ಹೇ ಬಸವಾತ್ಮಜೆ ಶರಣು

ಬಸವಕ್ರಾಂತಿಯ ಕಹಳೆಯೆ ಶರಣು
ಶರಣ ತತ್ತ್ವದ ಪ್ರಭೆಯೇ ಶರಣು
ಅಧ್ಯಾತ್ಮ- ಜ್ಞಾನದ ನಿಧಿಯೇ ಶರಣು
ಲಿಂಗದೇವ ಪ್ರಿಯೆ ಬಸವಾತ್ಮಜೆ ಶರಣು ॥4॥ ಹೇ ಬಸವಾತ್ಮಜೆ ಶರಣು

ಶಾಂತಿ-ಕರುಣೆಯ ಸಿಂಧುವೆ ಶರಣು
ದೀನ ದಲಿತರ ಬಂಧುವೆ ಶರಣು
ಸಮತೆ-ಸ್ಥೈರಣೆಯ ಆಗರ ಶರಣು
ಲಿಂಗದೇವ ಪ್ರಿಯೆ ಬಸವಾತ್ಮಜೆ ಶರಣು ॥5॥ ಹೇ ಬಸವಾತ್ಮಜೆ ಶರಣು

ಲಿಂಗದ ಅರಿವಿನ ಬೆಳಕೆ ಶರಣು
ನೊಂದು ಬೆಂದವರ ಉಸಿರೆ ಶರಣು
ತೇಜೋಮಯ ಯೋಗಿರತ್ನವೆ ಶರಣು
ಲಿಂಗದೇವ ಪ್ರಿಯೆ ಬಸವಾತ್ಮಜೆ ಶರಣು ॥6॥ ಹೇ ಬಸವಾತ್ಮಜೆ ಶರಣು

ಅದ್ವಿತೀಯ ಸಾಹಿತ್ಯ ರತ್ನವೇ ಶರಣು
ಅಗಾಧಪ್ರತಿಭೆಯ ಚಿಲುಮೆಯೆ ಶರಣು
ಪ್ರವಚನ ಪಟು ದಿವ್ಯ ಮೂರ್ತಿಯೆ ಶರಣು
ಲಿಂಗದೇವ ಪ್ರಿಯೆ ಬಸವಾತ್ಮಜೆ ಶರಣು ॥7॥ ಹೇ ಬಸವಾತ್ಮಜೆ ಶರಣು

ಶಿವಬೆಳಗಿನ ಗುರುಮಾತೆಯೇ ಶರಣು
ಪರುಷಮಯ ದಿವ್ಯಜ್ಯೋತಿಯೆ ಶರಣು
ಚೆನ್ನ-ಸಚ್ಚಿದಾನಂದನ ಸತಿರತ್ನವೆ ಶರಣು
ಲಿಂಗದೇವ ಪ್ರಿಯೆ ಬಸವಾತ್ಮಜೆ ಶರಣು ॥8॥ ಹೇ ಬಸವಾತ್ಮಜೆ ಶರಣು

ಮಾತಾ ನೀಲಾಂಬಿಕಾ ಸಮುದಾಯ ಭವನ ಕಾರ್ಯಕ್ರಮಗಳಿಗೆ ದೊರೆಯುತ್ತದೆ

ಬೆಂಗಳೂರಿನ ರಾಜಾಜಿನಗರದ ಎರಡನೆಯ ಬ್ಲಾಕಿನ 20ನೆಯ ಮುಖ್ಯ ರಸ್ತೆಯಲ್ಲಿರುವ (ಸಿಟಿ ಆಸ್ಪತ್ರೆ ಪಕ್ಕ) ಬಸವ ಮಂಟಪದಲ್ಲಿ ಮೊದಲ ಅಂತಸ್ತಿನಲ್ಲಿ ಸಿದ್ಧಲಿಂಗೇಶ್ವರ ಪ್ರಸಾದ ನಿಲಯ ಮತ್ತು ಎರಡನೆಯ ಅಂತಸ್ತಿನಲ್ಲಿ ಮಾತಾ ನೀಲಾಂಬಿಕಾ ಸಮುದಾಯ ಭವನ ಎಂಬ ಸಭಾಮಂಟಪವು ಸಿದ್ಧವಾಗಿದ್ದು ಉಪನ್ಯಾಸ ಕಾರ್ಯಕ್ರಮ, ಪುಸ್ತಕ ಬಿಡುಗಡೆ, ನಾಮಕರಣ, ಲಿಂಗೈಕ್ಯ ಗಣಾರಾಧನೆ, ಲಿಂಗೈಕ್ಯರ ಸಂಸ್ಮರಣೆ, ಜನ್ಮದಿನೋತ್ಸವ, ವಿವಾಹ ನಿಶ್ಚಯ, ವಿವಾಹ ವಾರ್ಷಿಕೋತ್ಸವ, ವಿವಾಹ ಮುಂತಾದ ಕಾರ್ಯಕ್ಕೆ ದೊರೆಯುತ್ತದೆ. ಕೆಲವೊಂದು ನಿಬಂಧನೆಗೆ ಒಳಪಟ್ಟು ಪಾಕ ಗೃಹ, ಪಾತ್ರೆ ಸಾಮಾನು, ಕುರ್ಚಿ, ಟೇಬಲ್ ಮುಂತಾದ ಸಲಕರಣೆಗಳು ಮಾತ್ರವಲ್ಲ ಅಡಿಗೆ ಮಾಡುವ, ನೀಡುವ ಸಿಬ್ಬಂದಿ ಸಹ ದೊರೆಯುತ್ತಾರೆ. ಮೈಕ್ ಸೆಟ್, ಸೀರಿಯಲ್ ಸೆಟ್, ಮಾತ್ರವಲ್ಲದೆ ಓಲಗ ನಾದಸ್ವರ ಮುಂತಾದ ಮಂಗಳ ವಾದ್ಯದವರು ಸಹ ಲಭ್ಯವಿರುತ್ತಾರೆ.

ಜವಾಬ್ದಾರಿ ಹೊತ್ತು ಓಡಾಡುವ ಜನರು ಇಲ್ಲದೆ ಇರುವವರು ನಿಗದಿ ಪಡಿಸಿದ ಹಣವನ್ನು ಕೊಟ್ಟರೆ ಸಾಕು ಸೇವಾವ್ರತಿಗಳಾದ ಗಣಾಚಾರ ದಳದವರು ಎಲ್ಲ ವ್ಯವಸ್ಥೆ ಮಾಡಿಕೊಡುವರು.

ಆರ್ಥಿಕವಾಗಿ ಅನಾನುಕೂಲತೆ ಇರುವವರು, ಸರಳವಾದ ಆದರ್ಶ ವಿವಾಹ ಮಾಡಿಕೊಳ್ಳಬೇಕು ಎನ್ನುವವರಿಗೆ ಅವರ ಅಗತ್ಯಕ್ಕೆ , ಸಂಪನ್ಮೂಲಕ್ಕೆ ಅನುಸಾರವಾಗಿ ವಿವಾಹ ಮುಂತಾದ ಕಾರ್ಯಕ್ರಮ ನೆರವೇರಿಸಿಕೊಡಲಾಗುವುದು.

ಧಾರ್ಮಿಕ ವಿಧಿವಿಧಾನ (ಪೌರೋಹಿತ್ಯ) ನಡೆಸಿಕೊಡುವವರು ಸಹ ಲಭ್ಯವಿರುತ್ತಾರೆ. ಮಂತ್ರೋಪದೇಶ, ದೀಕ್ಷೆ ಮುಂತಾದ ಕ್ರಿಯೆಗಳನ್ನು ನಡೆಸಿಕೊಡುವ ಗುರುಗಳೂ ಲಭ್ಯವಿರುತ್ತಾರೆ.

ಭಾವ ಸಂಗಮ ವಧುವರ ಹೊಂದಾಣಿಕೆ ಕೇಂದ್ರ

ವಧುವರರ ಆಯ್ಕೆಗೆ ನೆರವಾಗುವ ಭಾವ ಸಂಗಮ ಎಂಬ ಸಂಸ್ಥೆಯು ವಿಶ್ವಕಲ್ಯಾಣ ಮಿಷನ್ ಆಶ್ರಯದಲ್ಲಿ ನಡೆಯುತ್ತಿದ್ದು ಮದುವೆಯಾಗುವ ವಧು-ವರರು, ಅವರ ಪಾಲಕರು ಸಂಪರ್ಕಿಸಿ ಹೆಸರುಗಳನ್ನು ನೋಂದಾಯಿಸಬಹುದು. ವಧುವರರನ್ನು ಮುಖಾಮುಖಿ ಭೇಟಿ ಮಾಡಿಸುವ ಸಮಾವೇಶಗಳು ಒಂದು ವರ್ಷದಲ್ಲಿ ಆರು ಸಲ ನಡೆಯುತ್ತದೆ. ಆಗ ಪಾಲಕರು ತಮ್ಮ ಮಕ್ಕಳ ಸಹಿತವಾಗಿ ಬಂದು ಭಾಗಿಗಳಾಗಲು ಸುವರ್ಣಾವಕಾಶ ಲಭ್ಯವಾಗುತ್ತದೆ.

ಎಲ್ಲ ರೀತಿಯ ವಿವರಗಳನ್ನು ಪಡೆಯಲು, ಸಭಾಗೃಹವನ್ನು ಕಾಯ್ದಿರಿಸಲು ಕೆಳಗೆ ನೀಡಿರುವ ವಿಳಾಸಕ್ಕೆ ಸಂಪರ್ಕಿಸಿರಿ.

ವಿಶ್ವಕಲ್ಯಾಣ ಮಿಷನ್ (ರಿ) ಟ್ರಸ್ಟ್
ಬಸವ ಮಂಟಪ , 2035,
20 ನೆಯ ಮೇನ್, 2ನೇ ಬ್ಲಾಕ್,ರಾಜಾಜಿನಗರ, ಬೆಂಗಳೂರು -560010
ದೂರವಾಣಿ: 3325335/3322790 ಫ್ಯಾಕ್ಸ್: 3919736

2002 ಡಿಸೆಂಬರ್ ಮತ್ತು 2003ಜನವರಿ ತಿಂಗಳಲ್ಲಿ ಧನ ದಾಸೋಹ ಮಾಡಿದ ಶರಣ ಬಂಧುಗಳು
(ಕಳೆದ ಸಂಚಿಕೆಗಳಲ್ಲಿ ಸ್ಥಳಾಭಾವ ಹಾಗೂ ಸಮಯಾಭಾವದಿಂದ ಪಟ್ಟಿ ಪ್ರಕಟಿಸಲು ಆಗಿರಲಿಲ್ಲ)

ಬಸವ ಧರ್ಮ ಪೀಠ, ಕೂಡಲ ಸಂಗಮಕ್ಕೆ

ಶರಣರುಗಳಾದ:
ಗುರುಪಾದವ್ವ, ದುಂಡಪ್ಪ ಜಕಾತಿ, ಗೋಕಾಕ 71,000-00
ದಾನೇಶ್ವರಿ ಅಣ್ಣಾಸಾಹೇಬ ಪೋಲಿಸ್‌ಪಾಟೀಲ, ಕನಮಡಿ 51,000-00
ಎಂ. ಎಂ. ಓರಿಲಿಂಗಣ್ಣನವರು, ಸವದತ್ತಿ 51,000-00
ಪರ್ವತಯ್ಯಾ ಬೀದರಕರ್, ಗುಲಬರ್ಗಾ, "

ಪುಸ್ತಕ ಪ್ರಕಟಣೆಗಾಗಿ

ಶರಣರುಗಳಾದ:
ಮೌನೇಶ, ನಾಗಸಂದ್ರ 5,001-00
ಶಾಂತೇಶ ಸಂಗಪ್ಪಾ ಮೇಲ್ನಾಡ್, ಬಾಗಲಕೋಟೆ. 5,001-00
ಮಹಾದೇವ ಕಾಡಪ್ಪ ಮಂದಾಗಣಿ, ಹುಲ್ಯಾಳ 5,001-00
ಶಾಂತಾದೇವಿ ಶಿವಪ್ಪ, ಮುಳವಾಡ ಪಟ್ಟಿ ಚಿನ್ನದ ಗಣಿ 10,000-00
ವೀರಭದ್ರಪ್ಪ ತಿಪ್ಪಣ್ಣ ಕಗಲಕೊಂಬ 11,000-00

ಬಸವ ಮೂರ್ತಿಗಾಗಿ

ಶರಣರುಗಳಾದ:
ಬಸವಣ್ಣನವರ 63 ಅಡಿ ಮೂರ್ತಿಗಾಗಿ ಸಹಾಯ ಮಾಡಿದವರು:
ಕೆ. ಆರ್. ನಂಜುಂಡಪ್ಪ, ಮಾಸ್ಟರ್, ಅಜ್ಜಂಪುರ 20,000-00

ರೂ. 11,000 ಸಹಾಯ ಮಾಡಿದವರು:
ನಿರ್ಮಲಾ ಚನ್ನಬಸಪ್ಪ ನೀಲಕೂಡ, ಗುಲಬರ್ಗಾ
ಲಲಿತಾ ಶಿವಶಂಕ್ರಯ್ಯ ಜೀವಣಗಿ
ಮಹಾದೇವಿ ಡಾ॥ ಬಸವಯೋಗಿ ಗುಳಿಗೆ
ಲಲಿತಾ ಬಸವರಾಜ ಪವಾಡಶೆಟ್ಟಿ
ಉಷಾದೇವಿ ಶಿವಶಾಂತರೆಡ್ಡಿ
ರುಕ್ಕಪ್ಪಾ ಬಾಳಿ
ಗಿರಿಜಮ್ಮ ಸಿದ್ರಾಮಪ್ಪ ಸಜ್ಜನ, ಪರಹತಾಬಾದ್
ವಿಜಯಲಕ್ಷ್ಮಿ ನೀಲಕಂಠ ಜವಳಗಿ
ಸರಸ್ವತಿ ಅಪ್ಪಾರಾವ್ ಪಾಟೀಲ, ತಹಸೀಲದಾರ್
ಕಮಲಾಬಾಯಿ ಅಪ್ಪಾರಾವ್ ಬಿರಾದರ

ಶರಣಮ್ಮ ಶಿವಶಂಕರ ಘಂಟಿ
ಶಾಂತಕುಮಾರ್ ಅಮೃತಪ್ಪ ಘಂಟಿ
ಶಕುಂತಲಾ, ಬಸವಲಿಂಗಪ್ಪ ಪಾಟೀಲ
ವಿದ್ಯಾ.ಎ. ಪ್ರತಾಪ, ಕಾಂಟ್ರಾಕ್ಟರ್
ಸಂಗಮ್ಮ ಸಿದ್ದಣ್ಣ ಅಮಾತೆಪ್ಪಗೋಳ
ವಿಮಲಾ, ಮಲ್ಲಪ್ಪಾ ಪುಲಾರೆ
ಇಂದುಮತಿ ಬಸವಂತರಾವ್ ಪಾಟೀಲ
ರತ್ನಮಾಲಾ ನಿಂಗಪ್ಪ ಅಂಗಡಿ, ಬಾಗಲಕೋಟೆ
ಜಯಶ್ರೀ ಬಸವರಾಜ ಕೆ. ಆರ್, ಬಾಗಲಕೋಟೆ
ಜಿ. ರುದ್ರೇಶ್, ಟಿ. ದಾಸರಹಳ್ಳಿ 10,001-00
ಸಾವಿತ್ರಮ್ಮ ಹಡಪದ, ಗೋಕಾಕ 1,001-00
ಪಾಲನೇತ್ರಯ್ಯ ಮತ್ತು ಮಕ್ಕಳು, ಟಿ. ದಾಸರಹಳ್ಳಿ 4,500-00

ಬಸವ ಕಲ್ಯಾಣದ ನಿತ್ಯ ದಾಸೋಹ ನಿಧಿಗಾಗಿ ರೂ. 1200-00 ಸಲ್ಲಿಸಿದವರು :

ಶರಣರುಗಳಾದ:
ಪ್ರೇಮ ಪ್ರಸನ್ನಕುಮಾರ್, ಟಿ. ದಾಸರಹಳ್ಳಿ
ಎಂ.ಆರ್. ಲಲಿತಾ ನಾಗರಾಜ್, "
ನೀಲಾಂಬಿಕಾ ಚಂದ್ರಶೇಖರ ಸರಸಂಬಿ, "
ಶ್ರೀ ಮಹಾಲಕ್ಷ್ಮಿ ಡ್ರೆಸಸ್, "
ಸಾವಿತ್ರಿ ಸಿದ್ಧಮಲ್ಲಯ್ಯ, "
ರಾಜೇಶ್ವರಿ ಫಾಲಾಕ್ಷಯ್ಯ, "
ಸಂಜೀವ ಕುಮಾರ, ಗಡಿಕುಸನೂರ
ವೀರಣ್ಣ ಎಸ್. ಬೆಲ್ಲದ, ಭುವನೇಶ್ವರಿ ನಗರ
ಎಚ್. ಚಂದ್ರಶೇಖರಪ್ಪ, ನಾಗಸಂದ್ರ
ಆರ್. ವಿ. ಬಾಲಸುಬ್ರಹ್ಮಣ್ಯ, ಟಿ. ದಾಸರಹಳ್ಳಿ
ಪದ್ಮಾ. ಟಿ. ನಾಗರಾಜಪ್ಪ, "
ಬಾಗ್ಯಮ್ಮ. ಡಿ. ನಾಗಯ್ಯ. ಎಂ, "
ಪುಷ್ಪಕಲಾ. ಜಿ. ನಾಗರಾಜ "
ಭೀಮರಾವ್ ಪಾಟೀಲ "
ಪರಶಿವಮೂರ್ತಿ "
ಕೆ.ವಿ. ಶಿವರುದ್ರಯ್ಯ "
ಜ್ಯೋತಿ ಲಿಂಗರಾಜು "
ಗಂಗಾಧರ(ವಿಡಿಯಾ) "
ಯಶೋಧಮ್ಮ ಕೃಷ್ಣಪ್ಪ "

ನೀಲಾ ರಾಜಶೇಖರಯ್ಯ ,,
ಎಂ.ಎಸ್. ಪವಾಡಶೆಟ್ಟಿ ,,
ಎಸ್.ಎಸ್. ಇಂದಿರಾ ,,
ಎಸ್.ಹೇಮಲತ ,,
ವನಿತಾ ಲೋಕೇಶ್ ಟಿ. ದಾಸರಹಳ್ಳಿ
ಲಲಿತಾ ಶಿವರುದ್ರಯ್ಯ ,,
ರುದ್ರಾಣಮ್ಮ ರುದ್ರಸ್ವಾಮಿ ,,
ಕರುಣಾ ಶಾಂತಕುಮಾರ ,,
ಎಸ್. ನಂಜುಂಡಯ್ಯ ,,
ಎಸ್. ರೇಣುಕೇಶ್ವರ ,,
ಸಿದ್ದಗಂಗಮ್ಮ ಮೃತ್ಯುಂಜಯ ,,
ಸಿ. ಪಿ. ಕೃಷ್ಣಪ್ಪ ,,
ಆರ್. ಮಂಜುನಾಥ್, ಚಿತ್ರದುರ್ಗ
ಯಶೋದಮ್ಮ ಡಿ. ಶಿವಲಿಂಗಪ್ಪ, ತುಮಕೂರು
ಹೆಚ್.ಎನ್. ಪ್ರಸನ್ನಕುಮಾರ್, ಹಿರೇನಲ್ಲೂರು
ದೇವಿರಮ್ಮ ಎಚ್.ಡಿ. ಪುಟ್ಟಪ್ಪ
ಜಯಮ್ಮ ಎಚ್.ಜಿ. ಓಂಕಾರಪ್ಪ
ಗಂಗಮ್ಮ ಮಲ್ಲಪ್ಪನವರು, ನಾರಾಯಣಪುರ
ಜಯಮ್ಮ ವಿಶ್ವನಾಥ್, ಶಿವಮೊಗ್ಗ
ಎಚ್. ಎಂ. ಶಂಕರ, ಭದ್ರಾವತಿ
ಎ. ಚಿಕ್ಕೀರಪ್ಪ, ಚಳ್ಳಕೆರೆ
ಎಲ್. ತಿಪ್ಪೇಸ್ವಾಮಿ, ಕೊಪ್ಪಳ
ವಿ. ಎಂ. ಬೆಲ್ಲದ, ಬೈಲಹೊಂಗಲ
ಸುಜಾತ ಬಸವರಾಜ ಯರಗಟ್ಟಿ, ಧಾರವಾಡ
ಜೆ. ಎ. ನಾಗಶೆಟ್ಟಿ, ಗುಲಬರ್ಗಾ
ರಾಚಪ್ಪ ಮಲಕಾಜಪ್ಪ ಪಾವಲೆ, ಬಾಗಲಕೋಟೆ
ಶಂಕ್ರಪ್ಪ ಶಿವಲಿಂಗಪ್ಪಾಮುರನಾಳ, ಬಾಗಲಕೋಟೆ
ಸೋಮಶೇಖರ ಸಂಗಪ್ಪ ಜಿಡಗ
ಶಾಂತಕುಮಾರ್ ಅಮೃತಪ್ಪ ಘಂಟಿ, ಗುಲಬರ್ಗಾ
ಶಂಕ್ರಪ್ಪಾ ಕಲ್ಲಪ್ಪ ಪಡಶೆಟ್ಟಿ, ಗೊಬ್ಬೂರು
ಬಸವರಾಜ ಶರಣಪ್ಪ ವಾರದ
ನೀಲಮ್ಮ ಪೃಥ್ವಿರಾಜ ಪಾಟೀಲ, ಟೀಚರ್
ಪ್ರಭಾವತಿ ತಂದೆ ಸಿದ್ರಾಮಪ್ಪ ತೋಟದ, ಟೀಚರ್
ಸಿದ್ದಣ್ಣ ಪಾಟೀಲ(ನೀಲೂರು)
ಸಂಗೀತ ಶಿವಶರಣಪ್ಪ(ಕೋಳಾರ)
ರತ್ನಾಬಾಯಿ ಸಂಗಪ್ಪ ಚೌಡಪ್ಪಗೋಳ
ವಸಂತರಾವ್ ಕೊನೇಕ್
ಸಂಗಮ್ಮ ಸಾತಣ್ಣ ಶೆಟ್ಟಿ

ಸರೋಜ ವೈಜನಾಥ ಪಾಟ್ನೆ
ಅನಿಲ ಕುಮಾರ್ ಮುಗಳಿ
ವೀರಣ್ಣ ಕಾಶೀರಾಯ ಬಿರಾದರ
ಸುವರ್ಣ ಶರಣಪ್ಪ ಚಿಮಕೊಡೆ
ಮಹಾದೇವಿ ಭೀಮರಾವ ಕಲ್ಲೊಳ್ಳಿ
ಶಾಂತಾಬಾಯಿ ಬಾವಿಮನಿ
ನೀಲಮ್ಮ ಸೈದಪ್ಪ ಸಂಗಮ
ಪಾರ್ವತಿ ವಿರುಪಣ್ಣ ಗೋಣಿ
ಕಲ್ಯಾಣಮ್ಮ ಬಸವರಾಜ ಗೂಜಲಖೇಡ್
ರಾಜೇಶ್ವರಿ ನಾಗಪ್ಪ ಸಿರಸಗಿ
ಶಾಂತಾಬಾಯಿ ಮಹಾದೇವಪ್ಪ, ವಕೀಲರು
ಶರಣಬಸಪ್ಪ ತಂದೆ ಸಂಗಣ್ಣಾ ಡಂಬಾಳ
ಕಮಲಾಬಾಯಿ ಬಸವಣ್ಣೆಪ್ಪ ವಡ್ಡಿನಮನೆ
ಕಸ್ತೂರಿಬಾಯಿ ಶರಣಪ್ಪ ಚೌಡಪ್ಪಗೋಳ
ಶಾರದಾ ಬಾಯಿ
ವಿಜಯಲಕ್ಷ್ಮೀ ವೈಜನಾಥ್ ಸ್ವಂತ
ಶಶಿಕಲಾ ಭೀಮರಾವ್ ಪಟವಾದ, ಪಟವಾದ
ಇಂದುಮತಿ, ಬಸವಂತ್ರಾಯ ಪಾಟೀಲ
ಜಾನಪ್ಪಗೌಡ ಎಲ್. ಪಾಟೀಲ
ದೇವೇಂದ್ರಮ್ಮ ಸಕ್ರೆಪ್ಪ ಅಕ್ಕಿ, ಯಾದಗೀರ
ಸಿದ್ಧರಾಮ ಪಂಡಿತರಾಯ, ಐಯರವಾಡಿ
ಅನ್ನಪೂರ್ಣ ಸುಭಾಷ ಚಂದ್ರ ನಾವದಗಿ
ಗುತ್ತಮ್ಮ ಸಂಗಪ್ಪ ನಡಗಟ್ಟಿ ಫರಹತಾಬಾದ್
ಸಂಗಪ್ಪ ದಾಬಶೆಟ್ಟಿ
ನಾಗಮ್ಮ ಮಡೆಪ್ಪ, ಉಪತಹಸೀಲ್ದಾರ
ಜ್ಯೋತಿ ಶಿವಕುಮಾರ್ ಭಾವಿ ಹುಮನಾಬಾದ
ಶಶಿಕಲಾ, ಭೀಮರಾವ್ ಪಟವಾದಿ,
ಡೊಂಗರಗಾಂವ, ತಡವಳಗಿ
ಪವಿತ್ರಾ, ಶಾಂತವೀರ ಬೂಜುರಕ
ಶಿವರಾಜ ಭೂರೆ
ಎಸ್.ಆರ್. ಬಿರಾದರ
ದಾನಮ್ಮ ಗುಂಡಯ್ಯ ಸ್ವಾಮಿ
ಮಂಜುನಾಥ ತಂದೆ ಸಂಗನ ಬಸಪ್ಪ ಮೂಲಿಮನಿ

ಬಸವ ಕಲ್ಯಾಣದ ಕಟ್ಟಡ ನಿಧಿಗಾಗಿ

ಶರಣರುಗಳಾದ:

ಅಂಬಿಕಾ ಶಿವಕುಮಾರ, ಟಿ. ದಾಸರಹಳ್ಳಿ, 5001-00
ಬಸಪ್ಪ ಎಂ. ಹೋರಿ, ಆಳವಂಡಿ 5001-00

ಶಾರದಾ ಬಾಯಿ, ಲಿಂ॥ ಶಿವನಾಗಪ್ಪ ಪಡಶೆಟ್ಟಿ, 8000-00
ಟಿ. ಡಿ. ಮಮ್ಮಿಗಟ್ಟಿ, ಧಾರವಾಡ 10,000-00
ಎಂ. ರತ್ನಮ್ಮ, ಭದ್ರಾವತಿ 10,000-00
ಬಿ. ಸಿ. ಮಹಾಲಿಂಗಪ್ಪ, ಭದ್ರಾವತಿ 10,000-00
ಷಡಕ್ಷರಯ್ಯ ಹಿರೇಮಠ, ಧಾರವಾಡ 11,111-00
ಬಿ. ಹಂಪಣ್ಣ, ಗಂಗಾವತಿ 30,000-00
ಬಸವಣ್ಣೆಪ್ಪ ದೇವಣಗಾಂವ ಮತ್ತು ಪರ್ವತಯ್ಯ
ಬೀದರಕರ್(ಕೂಡಲ ಸಂಗಮ) 51,000-00
ಮಲ್ಲಿಕಾರ್ಜುನಪ್ಪ ಶರಣಪ್ಪ ಪಡಶೆಟ್ಟಿ ಹರಸೂರ
ದುಬ್ಬಲಗುಂಡಿ 51,000-00

ರೂ. 61,000-00 ನೀಡಿದವರು :

ಗಂಗಾಂಬಿಕೆ ಕೆ. ಖಿಗರಾಜ, ಟಿ. ದಾಸರಹಳ್ಳಿ
ವಿದ್ಯಾವತಿ ಗುರುನಾಥ್ ನಿಡಗುಂಡೆ, ಬೀದರ
ನೀಲಮ್ಮ ವೀರಬಸಪ್ಪ ಪಾಟೀಲ, ಬೀದರ
ದಾನೇಶ್ವರಿ ಅಣ್ಣಾ ಸಾಹೇಬ ಪೋಲಿಸ್ ಪಾಟೀಲ,
ಕನಮಡಿ
ಪ್ರೇಮ ಚಂದ್ರಯ್ಯ. ಬಿ., ದಾವಣಗೆರೆ,
ಬಸವರಾಜ ಚಂದ್ರಕಾಂತ ಲುಕ್ಕ, ಬಾಗಲಕೋಟೆ, ,,
ವಿಜಯಲಕ್ಷ್ಮಿ ದೊಡ್ಡಬಸವನಗೌಡ, ಬಾಗಲಕೋಟೆ
ಬಸವರಾಜ ಜಗದೇವಪ್ಪ ಬಳ್ಳೊಳ್ಳಿ, ,,
ಮುರಿಗೆಪ್ಪ ಚನ್ನಪ್ಪ ಕೋರಿ, ,,
ದೇವಮ್ಮ ಚಂದ್ರಾಮಪ್ಪ ಹಡಪದ, ಗುಲಬರ್ಗಾ
ಪದ್ಮಶ್ರೀ ಬಸವರಾಜ ಮಹಾಂತಗೋಳ ಮತ್ತು
ಬಸಮ್ಮ ಬಸವರಾಜಕೊನೇಕ
ಚೆನ್ನಮ್ಮ ಸೂಗಣ್ಣ ಯಲಗಟ್ಟಿ ಮತ್ತು
ಶಕುಂತಲಾ, ನೀಲಕಂಠ, ದೇವರಗುಡಿ
ಸೋಮಶೇಖರ ಬಸವಂತರಾವ್ ಮಹಾಗಾಂವ
ಮತ್ತು ಗುರುಪಾದಪ್ಪ ಲಖಿಮನ್
ಸುಮಿತ್ರಾಬಾಯಿ, ರೇವಣಪ್ಪ ಹೆಗ್ಗಣೆ
ರಾಜೇಶ್ವರಿ, ಅಶೋಕ್ ಕುಮರ್ ಮಾಡಗಿ
ಚೆನ್ನಮ್ಮ ಶಂಕರೆಪ್ಪಾ ಪಡಶೆಟ್ಟಿ, ಲಿಂಗಾಯತ
ಮಹಾಸಭಾ ಅಧ್ಯಕ್ಷರು, ಗೊಬ್ಬರು
ನಾಗಮ್ಮ ಜಗನ್ನಾಥ್ ಘಂಟಿ
ವಿಮಲಾ ಪುಲಾರೆ
ಬಸಮ್ಮ ಬಸವಂತರಾಯ ತೆಗ್ಗಿನ ಮನೆ ಒಂದು ಸ್ಲೆಟ್
ಗೋದಾವರಿ ಹನುಮಂತಪ್ಪ ಚಿಡಗುಪ್ಪ, ಸುಲ್ತಾನಪುರೆ
81,000

ಕಟ್ಟಡ ನಿಧಿಗಾಗಿ 5000 ರೂ ಸಹಾಯ ಮಾಡಿರುವವರು:

ಶರಣರುಗಳಾದ:

ನಿರ್ಮಲಾ ಸುಭಾಶ್ ಪಾಟೀಲ ಸರದಗಿ ವಿದ್ಯಾವತಿ
ವಿಶ್ವನಾಥ ಬೆಂಬಳಗಿ, ಬೀದರ
ದೇವರಾಜ ತುಕಾರಾಮ ಬಜಂತ್ರಿ, ಗುಲಬರ್ಗಾ
ತಾರಾಬಾಯಿ ಬಸವಣ್ಣೆಪ್ಪಾ ಪಾಟೀಲ
ಮಲ್ಲೇಶ್ವರಿ ಲಿಂ॥ ನರಸಪ್ಪ ಯಲಮಡಗಿ ಹೇಮಾವತಿ,
ಸಂಗಪ್ಪ ಸಾವನ್
ಲಕ್ಷ್ಮಿ ಬಾಯಿ ಕಲ್ಲಪ್ಪಾ ಹೊಕ್ರಾಪುರ
ಅಕ್ಕಮಹಾದೇವಿ ನಾಗಶೆಟ್ಟಿ ಸುಲೇಪೇಟೆ
ಸುಭದ್ರ ಗುರಣ್ಣ ಕವಲಗಿ
ಗಂಗಮ್ಮ ಶಿವರಾಜ ಕಾಮಣೆ, 1 ಲೋಡ್
ಪರ್ಸಿ ವೈಟ್ ಕಲ್ಲು ಕೊಡುವರು
ಶರಣಮ್ಮ ಬಸವರಾಜ ಪೋಲೀಸ್ ಪಾಟೀಲ
2 ಲೋಡ್ ಬಳುವಡಿ ಪಾಲಿಸ್ ಕಲ್ಲು ಕೊಡುವರು

ರೂ. 2000 ಸಹಾಯ ಮಾಡಿದವರು :

ತುಳಸಮ್ಮ ಗುರುಲಿಂಗಪ್ಪ ಪಟವಾದಿ
ಎಸ್.ಆರ್. ಪಾಟೀಲ

ಬಸವ ಕಲ್ಯಾಣ ನಿತ್ಯ ಪೂಜಾನಿಧಿಗೆ ರೂ. 601-00 ಕಾಣಿಕೆ ಸಲ್ಲಿಸಿದವರು

ಶರಣರುಗಳಾದ:

ನೀಲಮ್ಮ ಇಡ್ಲಿ, ನಾಗಸಂದ್ರ
ಕೃಷ್ಣಾಚಾರಿ, ಭಾಗ್ಯಮ್ಮ, ಟಿ. ದಾಸರಹಳ್ಳಿ
ಟಿ. ನಟರಾಜ, ಬೆಂಗಳೂರು
ಗುರುಸಿದ್ದಯ್ಯ, ಗೀತಾ, ಗೊರಗುಂಟೆ ಪಾಳ್ಯ
ವೀರಗಂಟೆಪ್ಪ ಲಕ್ಷ್ಮೀ ಹಂಚಲಿ, ಟಿ. ದಾಸರಹಳ್ಳಿ
ರುದ್ರಾಣಮ್ಮ ಶಿವಶಂಕರ ,,
ಉಮಾ, ಎಂ. ಸಿದ್ಧಲಿಂಗಾರಾಧ್ಯ, ,,
ನಾಗರತ್ನ ವೀರಭದ್ರಯ್ಯ, ,,
ರೇಣುಕಾವತಿ, ,,
ಪ್ರಮೀಳಾ ಶಿವಮೂರ್ತಿ, ,,
ಶಿವಗಂಗಮ್ಮ ಬಸವರಾಜ, ,,
ಹೆಚ್. ಆರ್. ಚಿಕ್ಕಮಲ್ಲಪ್ಪ, ಮಲ್ಲಸಂದ್ರ
ಆರ್. ಬಸಪ್ಪ, ಬೆಂಗಳೂರು

ಸಿದ್ದಾರ್ಥ ಶಾಲೆ, ತೋಟಗೆರೆ, ,,
ಡಿ. ಎಸ್. ಶಿವಕುಮಾರ, ,,
ಸಂಗಪ್ಪ.ಜಿ. ಹಿಂಡವಾರ, ,,
ಗಂಗಾಂಬಿಕೆ ಸಿದ್ದಗಂಗಯ್ಯ, ಟಿ. ದಾಸರಹಳ್ಳಿ
ದಾಕ್ಷಾಯಿಣಿ ಲೇಪಾಕ್ಷಪ್ಪ, ,,
ರತ್ನಮ್ಮ.ಕೆ. ಸತ್ಯನಾರಾಯಣ, ಶಿವಮೊಗ್ಗ
ರತ್ನಮ್ಮ ಮಹಾಲಿಂಗಪ್ಪ, ಭದ್ರಾವತಿ
ಚಿನ್ಮಯಿ, ಭದ್ರಾವತಿ
ಸುವರ್ಣ ಫಕೀರಪ್ಪ ಮಿರ್ಜಿ, ಬಾಗಲಕೋಟೆ
ವಿಶ್ವನಾಥ ಸಹದೇವ ಜಾಧವ್, ಬಾಗಲಕೋಟೆ
ಕಾಶೀಬಾಯಿ ಬಸವರಾಜ ರಾಜನಾಳಕರ್
ಶರಣಮ್ಮ ಚಂದ್ರಕಾಂತ ಬಡಿಗೇರ
ಈರಮ್ಮ ಹನುಮಂತರಾವ್ ರಾಯಚೂರು
ಶರಣಮ್ಮ ಅಮೃತ್ ಕೂಡಿ
ನಿಂಗಯ್ಯ ಮಠ
ಇಂದುಮತಿ ಬಸವಂತ್ರಾಯ ಪಾಟೀಲ
ಸಿದ್ದರಾಮ ಪಂಡಿತರಾಯ ಕಲಶೆಟ್ಟಿ ಐಯರ್‌ವಾಡಿ
ಮೈಲಾರಪ್ಪ ಮಡಿವಾಳ, ಪರಹತಾಬಾದ್
ಮಂಜುನಾಥ ತಂದೆ ಸಂಗನಬಸಪ್ಪ ಮೂಲಿಮನೆ

ಶರಣ ಮೇಳಕ್ಕೆ ಪುದುವಟ್ಟು ರೂ. 5000-1 ಸಲ್ಲಿಸಿದವರು

ಶರಣರುಗಳಾದ:
ಶ್ರೀ ಮೈಕೋ ಬಸವ ಸಮಿತಿ, ಪರವಾಗಿ, ಬೆಂ.
ಡಿ. ಕೆ. ಶಿವಣ್ಣ, ಟಿ. ದಾಸರಹಳ್ಳಿ
ಎಂ. ಎಸ್. ಸೋಮಶೇಖರಯ್ಯ, ,,
ರಾಮಚಂದ್ರ ಸಕ್ರಂಮಾಲಿ, ನಾಗರಾಳ
ಭಾಗ್ಯ ಪುಟ್ಟರಾಜು, ,,
ಎಸ್.ಬಿ. ಶಿವಕುಮಾರಯ್ಯ, ಲಕ್ಕಸಂದ್ರ
ಮಂಗಲ ಸೂರ್ಯಕಾಂತ ಗಾಯತೊಂಡೆ, ಬೀದರ್
ಶ್ರೀಶೈಲಪ್ಪ ಶಿವಪ್ಪ ಹುಲಮನಿ, ಬೈಲಹೊಂಗಲ
ಶಾರಾದಾ ಚಂದ್ರಕಾಂತ ಬಿರಾದರ (ಬೆರಳಚ್ಚುಗಾರ್ತಿ)
ಅಣ್ಣಾರಾವ್ ನಂದಿಕೂರ
ಎಸ್. ಕವಿತಾ, ಗಣ್ಣಾಯಕನಹಳ್ಳಿ
ಸುವರ್ಣ ಗಂಗಣ್ಣ, ಟಿ. ದಾಸರಹಳ್ಳಿ
ವಿಜಯಲಕ್ಷ್ಮೀ ಲಿಂ|| ಮಲ್ಲಿಕಾರ್ಜುನಕಾಂತ
ಸಿದ್ದಣ್ಣ ಅಮಾತೆಪ್ಪಗೋಳ 1001
ಶಂಕ್ರಪ್ಪಾ ಕಲ್ಲಪ್ಪ ಪಡಶೆಟ್ಟಿ 1001

ಗುರು ಕಾಣಿಕೆ

ಶರಣರುಗಳಾದ :

ಎಂ. ಎಸ್. ಮಂಜುಳಾ, ದಾವಣಗೆರೆ,	5001-00
ಕಲ್ಯಾಣಪ್ಪ ಪರಮಾದಿ, ಹುಬ್ಬಳ್ಳಿ,	5001-00
ಗುರು ಸಿದ್ದಪ್ಪ ಅಣ್ಣಿಗೇರಿ, ಹುಬ್ಬಳ್ಳಿ,	1001-00
ಬಸವರಾಜ ಕೋಟನೂರು, ಗುಲಬರ್ಗಾ,	1001-00

ಚಂದ್ರಮೌಳಿ, ಗಣಾಚಾರ ದಳ, ಬೆಂ., ಅಧ್ಯಕ್ಷರು, ಪ್ರತಿ ತಿಂಗಳು ರೂ. 500 ಕಾಣಿಕೆ.
ಪ್ರೇಮಾ ಮತ್ತು ಚಂದ್ರಯ್ಯಾ, ದಾವಣಗೆರೆ, 11,001-00

ಪೂಜ್ಯ ಮಾತಾಜಿಯವರ ವಿದೇಶ ಪ್ರವಾಸಕ್ಕೆ ಕಾಣಿಕೆ :

ಶರಣರುಗಳಾದ

ಡಾ|| ಇಂದುಧರ್, ಚಿತ್ರದುರ್ಗ,	5000-00
ಬಸವ ಪ್ರಭು ದೊಡ್ಡಮನಿ, ಹುಲಕೋಟಿ	2000-00
ಶಿವಪ್ಪ ವಿ. ಬೆಟಗೇರಿ, ಬೆಳಗಾಂವ	2000-00
ಕೋ. ಬಸವರಾಜ್, ಬೆಳಗಾಂವ	2000-00
ಗಂಗಮ್ಮ ಚನ್ನಯ್ಯ, ಚಿತ್ರದುರ್ಗ	1000-00
ಎಸ್.ವಿ. ವಿಶ್ವೇಶ್ವರಯ್ಯ, ಬಸವ ಗಂಗೋತ್ರಿ	1100-00
ಸಿದ್ಧಗೌಡ ಗೌಡಪ್ಪನವರು, ಶೇಗುಣಸಿ	1000-00
ಎಸ್. ಆರ್. ನಾಯಕರ್, ಬೆಂ.,	1001-00

ಬಸವ ಕಲ್ಯಾಣದಲ್ಲಿ ನಡೆವ ಶಿಬಿರಕ್ಕೆ ಧನ ಸಹಾಯ ಮಾಡಿದವರು :

ಶರಣರುಗಳಾದ:

ನಾಗರತ್ನಮ್ಮ ಮತ್ತು ಪಂಪನ ಗೌಡ, ಬೆಂ.,	5000-00
ಎಸ್.ಜಿ. ಹೋಳೀಕಟ್ಟಿ, ಬೆಂ.,	1500-00

ಆರ್ಥಿಕವಾಗಿ ದುರ್ಬಲರಾದ ಶಿಬಿರಾರ್ಥಿಗಳ ಶುಲ್ಕಕ್ಕೆ

ಕಲ್ಯಾಣ ಪರ್ವಕ್ಕೆ :

ಜೈರಾಜ್ ವಕೀಲರು ಮತ್ತು ಛಾಯಾ, ಬೆಂ.,	5000-00
ಎಸ್.ಪಿ. ಹಿರೇಮಠ, ಬೆಂ.,	5000-00

ಕಲ್ಯಾಣ ಕಿರಣ ಪತ್ರಿಕೆಯ ಒಡೆತನ ಮತ್ತಿತರ ವಿವರಗಳ ಪ್ರಕಟಣೆ

ಪ್ರಾರೂಪ 4 (ವಿಧಿ 8)

1. ಪ್ರಕಟಣೆಯ ಸ್ಥಳ	ಬೆಂಗಳೂರು
2. ಪ್ರಕಟಣೆಯ ನಿಯತಕಾಲಿಕತೆ	ಮಾಸಿಕ
3. ಮುದ್ರಕರ ಹೆಸರು	ಸೋದರಿ ಕಸ್ತೂರಿ
ಭಾರತದ ಪ್ರಜೆಯೆ?	ಹೌದು
ವಿಳಾಸ	ಪ್ರಭುದೇವ ಮುದ್ರಣಾಲಯ ಬಸವಗಂಗೋತ್ರಿ, ಕುಂಬಳಗೋಡು
4. ಪ್ರಕಾಶಕರ ಹೆಸರು	ಬಿ. ಶಂಭುಲಿಂಗಯ್ಯ
ಭಾರತದ ಪ್ರಜೆಯೆ?	ಹೌದು
ವಿಳಾಸ	ಕಲ್ಯಾಣ ಕಿರಣ ಕಾರ್ಯಾಲಯ ಬಸವ ಮಂಟಪ, ರಾಜಾಜಿನಗರ ಬೆಂಗಳೂರು-560010
5. ಸಂಪಾದಕರ ಹೆಸರು	ಬಿ. ಶಂಭುಲಿಂಗಯ್ಯ
ಭಾರತದ ಪ್ರಜೆಯೆ?	ಹೌದು
ವಿಳಾಸ	ಬಸವ ಮಂಟಪ ರಾಜಾಜಿನಗರ, ಬೆಂಗಳೂರು-560010
6. ಪತ್ರಿಕೆಯ ಒಡೆತನ ವಹಿಸಿರುವ ವ್ಯಕ್ತಿಯ ಮತ್ತು ಪಾಲುದಾರರ ಅಥವಾ ಒಟ್ಟು ಬಂಡವಾಳ ಶೇ. 1. ಕ್ಕಿಂತ ಹೆಚ್ಚು ಭಾಗಕ್ಕೆ ಪಾಲುದಾರರ ಹೆಸರು ಮತ್ತು ವಿಳಾಸ	ವಿಶ್ವಕಲ್ಯಾಣ ಮಿಷನ್ (ರಿಜಿಸ್ಟರ್ಡ್ ರಿಲಿಜಿಯಸ್ ಚಾರಿಟಬಲ್ ಟ್ರಸ್ಟ್) ಬಸವ ಮಂಟಪ, ರಾಜಾಜಿನಗರ ಬೆಂಗಳೂರು-560010

ಮೇಲೆ ಕೊಟ್ಟಿರುವ ವಿವರಗಳು ನನಗೆ ತಿಳಿದ ಮಟ್ಟಿಗೆ ಮತ್ತು ನನ್ನ ನಂಬಿಕೆಯಂತೆ ನಿಜವೆಂದು, ನಾನು ಬಿ. ಶಂಭುಲಿಂಗಯ್ಯ ಘೋಷಿಸುತ್ತೇನೆ.

ಪ್ರಕಾಶಕ
ಬಿ. ಶಂಭುಲಿಂಗಯ್ಯ
ಕಲ್ಯಾಣ ಕಿರಣ, ದಿ. 1-3-2003
ಬೆಂಗಳೂರು-10

ನುಡಿ ನೈವೇದ್ಯ

ಕಲ್ಯಾಣದ ಕರೆ ಕಲ್ಯಾಣಕೆ ಕರೆ

-ಮಾತಾಜಿ

ಕಲ್ಯಾಣ ಕರೆದಿದೆ ಕಲ್ಯಾಣ ಗುರು ಬಸವಣ್ಣನ ಕಲ್ಯಾಣ
ಶರಣರಾಡಿದ ಕಲ್ಯಾಣ, ವಿಶ್ವಕೆ ಬಯಸುತ ಕಲ್ಯಾಣ ॥ ಪಲ್ಲವಿ ॥
ಭಾರತ ಮಾತೆಯ ಮುಕುಟ ಕಾಶ್ಮೀರ, ಪಾವನ ಪಾದವು ಕನ್ಯಾಕುಮಾರಿ
ದೇಶ ವಿದೇಶದ ಮೂಲಗಳಿಂದ ಶರಣರ ಕರೆದಿದೆ ಕಲ್ಯಾಣ ॥ ಅ.ಪಲ್ಲವಿ ॥
ಗುರು ಬಸವಣ್ಣನ ಪ್ರಭೆಯನು ಬೆಳಗಲು ಪ್ರಣತೆಯಾಯಿತು ಕಲ್ಯಾಣ
ಸತ್ಯದ ಶೋಧಕ ಸಾಧಕರೆಲ್ಲರ ಅರಿವಿನ ನೆಲೆಯಾಯ್ತು ಕಲ್ಯಾಣ ॥1॥
ಕಾಯಕವೇ ಕೈಲಾಸವೆಂದು ಸಂದೇಶ ಸಾರಿದ ಕಲ್ಯಾಣ
ದಯವೇ ಧರ್ಮದ ಮೂಲವೆಂದು ಪ್ರೇಮವ ಮೆರೆದ ಕಲ್ಯಾಣ ॥2॥
ನಾಡ ಬಲ್ಲಿದರೆಲ್ಲ ಕೂಡಿದರಂದು ಸೂಡ ಕಟ್ಟಿದರು ವಚನಗಳ
ದೇವನೊಬ್ಬನೆ ತಂದೆ ಮನುಜರೆಲ್ಲರು ಒಂದೆ ಸಮತೆಯ ಸಾರಿತು ಕಲ್ಯಾಣ ॥3॥
ಅಲ್ಲಮಪ್ರಭುದೇವ ಅಕ್ಕಮಹಾದೇವಿ ಚಿನ್ಮಯಜ್ಞಾನಿ ಚನ್ನಬಸವಣ್ಣ
ಸಿದ್ಧರಾಮೇಶ್ವರ ಮಡಿವಾಳ ಮಾಚಯ್ಯ ಮಹಾಮನೆ ಹೊಂದಿದ್ದ ಕಲ್ಯಾಣ ॥4॥
ಹರಳಯ್ಯ ಮಧುವಯ್ಯ ಮೋಳಿಗೆ ಮಾರಯ್ಯ ನೀಲಮ್ಮ ನಾಗಮ್ಮ ಶರಣೆಯರು
ಅಂಬಿಗರ ಚೌಡಯ್ಯ, ಮೇದಾರ ಕೇತಯ್ಯ, ಒಕ್ಕಲಿಗ ಮುದ್ದಣ್ಣನ ಕಲ್ಯಾಣ ॥5॥
ಅನುಭವ ಮಂಟಪ ರಚಿಸಿದರಂದು ಅನುಭಾವ ಗೀತೆಯ ಹಾಡಲಿಕೆಂದು
ವಚನ ಪುಷ್ಪಗಳ ಬಂಡನು ಸವಿಯಲು ಧಾವಿಸಿ ಬಂದಿತು ಶರಣರ ದಂಡು ॥6॥
ಬನ್ನಿರಿ ಶರಣರೆ ಬಸವ ಕಲ್ಯಾಣಕೆ ಬಸವ ಮಹಾಮನೆ ಕಟ್ಟುವ ಬನ್ನಿ
ತನುಮನಧನಗಳ ಧಾರೆಯನೆರೆದು ನವ ಕಲ್ಯಾಣವ ನಿರ್ಮಿಸ ಬನ್ನಿ ॥7॥
ಕಲ್ಯಾಣ ಪರ್ವದಿ ನಲಿಯುವ ಬನ್ನಿ ಕ್ರಾಂತಿಗೀತೆಯ ಹಾಡುವ ಬನ್ನಿ
ಶರಣರ ಋಣವನು ತೀರಿಸಬನ್ನಿ ಬಸವಾತ್ಮಜೆಯ ಬಿನ್ನಹವಿದುವು ॥8॥

ಬಸವ ಭಕ್ತರ ಮನೆಗಳಲ್ಲಿ ಕಲ್ಯಾಣ ಪರ್ವದ ಜ್ಯೋತಿ

ಶರಣ ಬಂಧುಗಳೇ,

ನಾವೆಲ್ಲರೂ ಕಲ್ಯಾಣದ ಶರಣರ ಪರಂಪರೆಯವರು ಎಂಬುದನ್ನು ಸಂಕೇತಿಸುವಂತೆ ಪ್ರತಿ ಮನೆಯಲ್ಲೂ ಕಲ್ಯಾಣ ಪರ್ವದ ಜ್ಯೋತಿಯನ್ನು ಹಚ್ಚಬೇಕು. ಏಪ್ರಿಲ್ 30 ರಂದು ಕಲ್ಯಾಣ ಪರ್ವ ಆರಂಭ. ಅಂದು ಬಸವ ಕಲ್ಯಾಣಕ್ಕೆ ಬರಲಾಗದವರು ತಮ್ಮ ಮನೆಯಲ್ಲಿ ಬಸವಣ್ಣನವರ ಭಾವಚಿತ್ರ, ಇಟ್ಟು, ಬಸವೇಶ್ವರ ಪೂಜಾವ್ರತ ಮಾಡಿ, ಈಗ ಹಚ್ಚಿದ ದೀಪ ಆರದಂತೆ 3 ದಿವಸ ಕಾಲ ಇಟ್ಟು ಮೇ 2 ರವರೆಗೆ ಪೂರ್ತಿ ಉರಿಸಬೇಕು. ಕೇಳಿದವರಿಗೆ ಇದು ಕಲ್ಯಾಣಪರ್ವದ ಜ್ಯೋತಿ ಎಂದು ತಿಳಿಸಬೇಕು. ಗುರು-ಲಿಂಗ-ಜಂಗಮದ ಸಂಕೇತವಾಗಿ 3 ದಿವಸಗಳ ಕಾಲ ದೀಪವನ್ನು ಉರಿಸಬೇಕು ಎಂದು ಕಳಕಳಿಯಿಂದ ಸೂಚಿಸುತ್ತೇವೆ. ಜೊತೆಗೆ ವಚನ ಪಾರಾಯಣದಂತಹ ಐಚ್ಛಿಕ (optional) ವಿಧಿಯನ್ನು ಮಾಡಬಹುದು.

- ಮಾತಾಜಿ



ಗುಲಬರ್ಗಾದಲ್ಲಿ ನಡೆದ ಮೆರವಣಿಗೆಯಲ್ಲಿ ಪಥ ಸಂಚಲನ ಮಾಡುತ್ತಿರುವ ಶರಣ ವೃಂದ



ಗುಲಬರ್ಗಾ ರಾಷ್ಟ್ರೀಯ ಬಸವ ದಳದ ಕಾರ್ಯಕರ್ತರಿಂದ ಪಥ ಸಂಚಲನ

ಕಲ್ಯಾಣ ಕಿರಣ

ಏಪ್ರಿಲ್ - 2003

ಕಾಯಕವೇ ಕೈಲಾಸ



CPMG/KA/BGW -50/2003-2005
WPP (W)-17 R.No. 19980/70